ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


ಜನವರಿ 26, 2011 ರೂ. 12/-



ನ್ಯಾ. ಬಾಲಕೃಷ್ಣನ್ ಭ್ರಷ್ಟಾಚಾರ

ಸೀಮಾನಂದ ಸ್ಫೋಟಿಸಿದ ಬಾಂಬ್

ಆರೆಸ್ಸೆಸ್ ಯೋತ್ಪಾದನೆ





ಸೂರಿ ಹಂತಕರ ಜೊತೆ ರವಿ ಪೂಜಾರಿ ಗ್ಯಾಂಗ್

ಹೊನ್ನಾವರ:

ಸತ್ತ ಹುಡುಗನ ಸುತ್ತ ಕೋಮುಹುತ್ತ



ಜೈಲು ಸನ್ನಿಹಿತ

ನೋ ಕಾಮೆಂಟ್ಸ್

"ಈ ದೊಡ್ಡ ದೊಡ್ಡ ಶಾಪಿಂಗ್ ಮಲ್‌ಗಳು ಐಶ್ವರ್ಯದ ಆಡಂಬರದ ಪ್ರದರ್ಶನವೇ ಹೊರತು ಮತ್ತೇನಲ್ಲ. ಅಷ್ಟು ಮಾತ್ರವಲ್ಲ, ಅವು ದೇಶದ ಇಂಧನ ಶಕ್ತಿಯನ್ನು ದುರ್ಬಳಕೆ ಮಾಡುತ್ತಿರುವ ಅಪವ್ಯಯದ ಕೇಂದ್ರಗಳೂ ಆಗಿವೆ. ಇವು ಅಮೆರಿಕನ್ ಸಂಸ್ಕೃತಿಯ ವಿಕೃತ ನಕಲಾಗಿದ್ದು ಇವನ್ನು ನಿಯಂತ್ರಿಸಲು ಸರ್ಕಾರ ಸರಿಯಾದ ಕ್ರಮವೊಂದನ್ನು ರೂಪಿಸಲೇ ಬೇಕು."

- ಸೌಗತ ರೇ, ಕೇಂದ್ರದ ನಗರಾಭಿವೃದ್ಧಿ ಮಂತ್ರಿ

"ನನ್ನ ಪ್ರಕಾರ ಜೈರಾಮ್ ರಮೇಶ್ ಅತ್ಯಂತ ಚತುರಮತಿಯುಳ್ಳ ವಿಕ್ಷಿಪ್ತ ತಂತ್ರಗಾರ. ಆತ ಎಡಪಂಥೀಯರ ನಡುವೆ ಕಾಣಿಸಿಕೊಳ್ಳುವ ಬಲಪಂಥೀಯ."

- ವಿಶ್ವಸಂಸ್ಥೆಯ ಒಬ್ಬ ವಕ್ತಾರ

"ನೂರು ಕೋಟಿಗೂ ಹೆಚ್ಚು ಜನಸಂಖ್ಯೆ ಹೊಂದಿರುವ ಈ ದೇಶದಲ್ಲಿ ಇರುವುದು ಕೇವಲ 25 ಸುಪ್ರೀಂಕೋರ್ಟ್ ನ್ಯಾಯಾಧೀಶರು ಮಾತ್ರ. ಈಗ ಅದರಲ್ಲೂ ಕೆಲವರು ಭ್ರಷ್ಟರಾಗಿದ್ದಾರೆ ಎಂದರೆ ಏನು ಹೇಳುವುದು? ದೇಶದ ವರಿಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೇ ಭ್ರಷ್ಟರಾಗಿರಬಹುದೆಂಬ ಅನುಮಾನಕ್ಕೆ ಕಾರಣವಾಗುವಂತೆ ನಡೆದುಕೊಂಡಿರುವುದು ಅತ್ಯಂತ ದುರದೃಷ್ಟಕರ."

- ನ್ಯಾ. ಎಂ.ಎನ್. ವೆಂಕಟಾಚಲಯ್ಯ, ಸುಪ್ರೀಂಕೋರ್ಟಿನ ಮಾಜಿ ಮುಖ್ಯ ನ್ಯಾಯಾಧೀಶರು

"ತಮ್ಮನ್ನು ತಾವು ಪ್ರವಾದಿ ಮಹಮ್ಮದರ ಘನತೆಯ ರಕ್ಷಕರೆಂದು ಭಾವಿಸುವ ಧಾರ್ಮಿಕ ತೀವ್ರವಾದಿಗಳು ಮನುಷ್ಯ ಮಾತ್ರರು ಮಾಡಿದ ಕಾನೂನಿನ ವಿರುದ್ಧ ಧ್ವನಿ ಎತ್ತಿದ್ದ ವ್ಯಕ್ತಿಯನ್ನು ಹತ್ಯೆ ಮಾಡುವ ಮಟ್ಟಕ್ಕೆ ಹೋಗುತ್ತಾರೆಂದರೆ, ಪಾಕಿಸ್ತಾನೀ ಸಮಾಜ ಬಹಳ ವೇಗವಾಗಿ ಅರಾಜಕತೆ ಹಾಗೂ ಬರ್ಬರತೆಯೆಡೆಗೆ ಸಾಗುತ್ತಿದೆಯೆಂದೇ ಅರ್ಥ."

- ಸಲ್ಮಾ ಜಹಾಂಗೀರ್, ಪಾಕಿಸ್ತಾನಿ ಮಾನವ ಹಕ್ಕು ಕಾರ್ಯಕರ್ತೆ

"ಜನ ಸತ್ತಮೇಲೆ ಸ್ವರ್ಗಕ್ಕೆ ಸೇರಿಸಲು ಮುಸ್ಲಿಂ ಮೂಲಭೂತವಾದಿ ಚಳವಳಿಯಲ್ಲಿ ಸಾಕಷ್ಟು ಕಾರ್ಯಕ್ರಮಗಳಿವೆ. ಆದರೆ ಇಹಲೋಕದಲ್ಲಿ ಘನತೆಯಿಂದ ಬದುಕಲು ಏನೂ ಇಲ್ಲ."

ಡಾ. ರಹಮತ್ ತರೀಕೆರೆ

ನಂಬಿದ್ರೆನಂಬಿ ಬಿಟ್ರೆಬಿಡಿ

"15ನೇ ಲೋಕಸಭೆಯ 545 ಸಂಸದರಲ್ಲಿ 156 ಸಂಸದರು ವಂಶಪಾರಂಪರ್ಯವಾಗಿ ಸಂಸದರಾಗಿ ಮುಂದುವರೆದವರು. ಅದರಲ್ಲೂ 30 ವಯಸ್ಸಿಗಿಂತ ಕೆಳಗಿರುವ ಎಲ್ಲಾ ಸಂಸದರೂ ವಂಶಪಾರಂಪರ್ಯವಾಗಿ ಸಂಸದರಾದವರೇ. ರಾಷ್ಟ್ರೀಯ ಲೋಕದಳದ 5 ಸಂಸತ್ ಸದಸ್ಯರಲ್ಲಿ 5 ಜನರೂ ಈ ಹಿಂದೆ ಸಂಸತ್ ಸದಸ್ಯರಾದ ಮನೆತನದವರೇ. ಎನ್‌ಸಿಪಿಯ 9 ಸಂಸತ್ ಸದಸ್ಯರಲ್ಲಿ 7, ಕಾಂಗ್ರೆಸ್‌ನ 208ರಲ್ಲಿ 78, ಡಿಎಂಕೆಯ 18ರಲ್ಲಿ 6, ಬಿಜೆಪಿಯ 116ರಲ್ಲಿ 22 ಸಂಸತ್ ಸದಸ್ಯರು ವಂಶಪಾರಂಪರ್ಯ ಸದಸ್ಯರಾದವರೇ. ಇದರಲ್ಲಿ ಸಿಪಿಎಂ ಕೂಡಾ ಹಿಂದೆ ಬಿದ್ದಿಲ್ಲ. ಅದರ 16 ಸದಸ್ಯರಲ್ಲಿ ನಾಲ್ಕು ಸದಸ್ಯರು ಇಂಥವರೇ. ಹೀಗಾಗಿ ನಿಧಾನವಾಗಿ ಭಾರತದ ರಾಜಕಾರಣ ವಂಶಪಾರಂಪರ್ಯ ರಾಜಕಾರಣದ ಕಡೆಗೇ ಮರಳುತ್ತಿದೆಯೇ ಎಂಬ ಅನುಮಾನ ಮೂಡುತ್ತದೆ."

'ಔಟ್‌ಲುಕ್' ಪತ್ರಿಕೆಯಲ್ಲಿ ಪ್ಯಾಟ್ರಿಕ್ ಫ್ರೆಂಚ್ ಎಂಬ ಲೇಖಕ

"ನನ್ನ ಜೊತೆ ಹೈದರಾಬಾದ್ ಜೈಲಿನಲ್ಲಿ ಮೆಕ್ಕಾ ಮಸೀದಿ ಸ್ಫೋಟದ ಆರೋಪಕ್ಕೆ ಗುರಿಯಾಗಿ ಜೈಲುಪಾಲಾಗಿದ್ದ ಮುಸ್ಲಿಂ ಆರೋಪಿ ಒಬ್ಬ ಇದ್ದ. ಆತ ನನ್ನನ್ನು ತುಂಬಾ ಚೆನ್ನಾಗಿ ನೋಡಿಕೊಂಡ. ಇದು ನನ್ನನ್ನು ವಿಚಲಿತನನ್ನಾಗಿ ಮಾಡಿತು. ವಿನಾಕಾರಣ ಅವರನ್ನು ಜೈಲುಪಾಲು ಮಾಡಿದ್ದು ನನ್ನಲ್ಲಿ ಖೇದವುಂಟುಮಾಡಿದ್ದರಿಂದ ನಾನು ತಪ್ಪೊಪ್ಪಿಗೆಗೆ ಮುಂದಾಗಿದ್ದೇನೆ."

- ಸ್ವಾಮಿ ಅಸೀಮಾನಂದ, ಬಾಂಬ್ ಸ್ಫೋಟದ ರೂವಾರಿ, ಆರೆಸ್ಸೆಸ್ ಕಾರ್ಯಕರ್ತ

ಹಾಗಿದ್ದಲ್ಲಿ ಜಾತಿ ಸಿದ್ಧಾಂತದಿಂದ ಏಕೆ ಪ್ರಭಾವಿತರಾಗಿದ್ದಾರೆ, ಸ್ವಾಮಿ?

"ಭಾರತೀಯರು ಶ್ರದ್ಧೆ ಮತ್ತು ನೈತಿಕತೆಯನ್ನು ಅರ್ಥಮಾಡಿಕೊಳ್ಳುತ್ತಾರೆ. ಆದರೆ ಸಾಮಾನ್ಯವಾಗಿ ಸಿದ್ಧಾಂತಗಳಿಂದ ಪ್ರಭಾವಿತವಾಗುವುದಿಲ್ಲ, ಆದರೆ ಯಾವುದೇ ಸಿದ್ಧಾಂತಕ್ಕೆ ಬದ್ಧವಾಗಿ ಬದುಕಿದ ಬದುಕು ಭಾರತೀಯರಿಗೆ ಯಾವಾಗಲೂ ಸ್ಫೂರ್ತಿ ನೀಡುತ್ತದೆ. ಹೀಗಾಗಿಯೇ ಬಿನಾಯಕ್ ಸೇನ್ ಒಬ್ಬ ಡಾಕ್ಟರಾಗಿ ಜನರ ನಡುವೆ ನಿಂತು ಸೇವೆ ಮಾಡುತ್ತಿದ್ದದ್ದು ಅವರಿಗೆ ಬೇರೆ ಯಾವುದೇ ಲೇಖಕ ಅಥವಾ ಕಾರ್ಯಕರ್ತನಿಗೆ ಸಿಗದಷ್ಟು ಖುಜುತ್ವವನ್ನು ನೀಡಿತು."

- ಆಶೀಶ್ ನಂದಿ, ಚಿಂತಕ

ರಾಷ್ಟ್ರೀಯ ಪುನರ್‌ವಸತಿ ನೀತಿ ಯುಪಿಎ ಸರ್ಕಾರದ ಮತ್ತೊಂದು ಕುತಂತ್ರ!

ಈ ದೇಶದಕ್ಕೆ ಸ್ವಾತಂತ್ರ್ಯ ಬಂದಮೇಲೆ ದೊಡ್ಡ ಡ್ಯಾಮ್, ಕಾರ್ಖಾನೆಗಳ ಹೆಸರಲ್ಲಿ ಹಾಗೂ ಈಗ ಎಕ್ಸ್‌ಪ್ರೆಸ್ ಹೈವೇ, ಮಾಲ್, ಎಸ್‌ಇಜೆಡ್‌ಗಳ ಹೆಸರಲ್ಲಿ ಏನಿಲ್ಲವೆಂದರೂ ನಾಲ್ಕು ಕೋಟಿಗೂ ಹೆಚ್ಚು ಜನರನ್ನು ಸ್ಥಳಾಂತರಗೊಳಿಸಲಾಗಿದೆ. ಅವರಲ್ಲಿ ಶೇ. 70 ಜನಕ್ಕೆ ಈಗಲೂ ಸರಿಯಾದ ಪುನರ್‌ವಸತಿ ಹಾಗೂ ಪರಿಹಾರ ದೊರೆತಿಲ್ಲ. ಬೆಂಗಳೂರು, ಮುಂಬೈ ಅಂಥ ದೊಡ್ಡ ದೊಡ್ಡ ನಗರಗಳ ಸ್ಲಂಗಳಲ್ಲಿ ಹೊಸದಾಗಿ ಸೇರ್ಪಡೆಯಾಗುತ್ತಿರುವ ಬಹುಪಾಲು ಜನ ಈ ರೀತಿಯ 'ಅಭಿವೃದ್ಧಿಯ' ಹತ್ಯಾಕಾಂಡಕ್ಕೆ ಬಲಿಯಾಗಿ ಬದುಕು ಕಳೆದುಕೊಂಡವರೇ! ಆದರೆ ಅಭಿವೃದ್ಧಿಯ ಅಬ್ಬರ ಅವರ ಆಕ್ರಂದನ ಯಾರ ಕಿವಿಗೂ ಕೇಳಿಸದಂತೆ ಮಾಡುತ್ತಿದೆ.

ಆದರೆ 2007ರ ನಂತರ ಅದರಲ್ಲೂ ಪಶ್ಚಿಮ ಬಂಗಾಳದ ಸಿಂಗೂರು ಮತ್ತು ನಂದಿಗ್ರಾಮಗಳಲ್ಲಿ ನೆಲೆ ಕಳೆದುಕೊಳ್ಳುತ್ತಿದ್ದ ರೈತಾಪಿ ನಡೆಸುತ್ತಿದ್ದ ಧೀರೋದ್ಧಾತ್ತ ಹೋರಾಟದಿಂದಾಗಿ ಇಡೀ ದೇಶದ ಯೋಜನಾ ಸಂತ್ರಸ್ತರ ಹೋರಾಟಕ್ಕೆ ಹೊಸ ಕಸುವು ಬಂದಿದೆ. ಸಿಂಗೂರಲ್ಲಿ ಫಲವತ್ತಾದ 1,000 ಎಕರೆ ಜಮೀನಿನಿಂದ 12,000ಕ್ಕೂ ಹೆಚ್ಚು ರೈತ ಕುಟುಂಬಗಳನ್ನು ನಿರ್ವಸತಿಗೊಳಿಸಿ ತಲೆ ಎತ್ತಬೇಕಿದ್ದ ಟಾಟಾನ ನ್ಯಾನೋ ಪ್ರಾಜೆಕ್ಟು ಮತ್ತು ನಂದಿಗ್ರಾಮದ 6,000 ಎಕರೆ ಫಲವತ್ತಾದ ಪ್ರದೇಶದಲ್ಲಿ ತಲೆ ಎತ್ತಬೇಕಿದ್ದ ಕೆಮಿಕಲ್ ಎಸ್‌ಇಜೆಡ್ ಎರಡನ್ನು ಬಂಗಾಳದ ರೈತಾಪಿ ಮತ್ತು ಅವರ ಬೆಂಬಲಕ್ಕೆ ನಿಂತಿದ್ದ ಪ್ರಗತಿಪರ ಜನತೆ ಯಶಸ್ವಿಯಾಗಿ ಹಿಮ್ಮೆಟ್ಟಿಸಿತು. ಅದಾದನಂತರದಲ್ಲಿ ಗೋವಾದಲ್ಲಿ ಯೋಜಿಸಲಾಗಿದ್ದ ಹಲವಾರು ಎಸ್‌ಇಜೆಡ್‌ಗಳನ್ನು ಅಲ್ಲಿನ ಜನ ತಮ್ಮ ಮಿಲಿಟೆಂಟ್ ಹೋರಾಟಗಳಿಂದ ಹಿಮ್ಮೆಟ್ಟಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅದರ ಬೆನ್ನಲ್ಲೇ ಕರ್ನಾಟಕದ ನಂದಗುಡಿಯಲ್ಲಿ ತಲೆ ಎತ್ತಬೇಕಿದ್ದ ಎಸ್‌ಇಜೆಡ್ ಅನ್ನು ರದ್ದುಪಡಿಸಲಾಗಿದೆ. ಯಡಿಯೂರಪ್ಪನ ಸರ್ಕಾರದಂಥ ಅತ್ಯಂತ ರೈತ ವಿರೋಧಿ ಸರ್ಕಾರವೂ ಬೆಳಗಾಂ, ದಾವಣಗೆರೆ ಇನ್ನಿತರ ಕಡೆ ರೈತರ ಜಮೀನು ವಶಪಡಿಸಿಕೊಳ್ಳುತ್ತಿದ್ದನ್ನು ಕೈಬಿಟ್ಟಿದೆ. ಬಳ್ಳಾರಿ ಇತ್ಯಾದಿ ಕಡೆ ಇನ್ನೂ ಹೋರಾಟ ನಡೆಯುತ್ತಿದೆ.



ಹೀಗೆ ಭೂಮಿಯನ್ನು ಬಿಟ್ಟರೆ ಬದುಕೇ ಇಲ್ಲದ ರೈತಾಪಿ ತಮ್ಮ ಅಂತಿಮ ಆಸರೆಯನ್ನು ಉಳಿಸಿಕೊಳ್ಳಲು ಎಲ್ಲೆಡೆ ಸಂಗ್ರಾಮ ನಡೆಸುತ್ತಿದ್ದಾರೆ. ಆದ್ದರಿಂದಲೇ ಅನಿವಾರ್ಯವಾಗಿ ಸರ್ಕಾರಗಳು ದೇಶಕ್ಕೆ ಒಂದು 'ಮಾದರಿ'ಯಾದ ಪರಿಹಾರ ಮತ್ತು ಪುನರ್‌ವಸತಿ ನೀತಿಯನ್ನು ರೂಪಿಸುವ ಪ್ರಯತ್ನದಲ್ಲಿ ತೊಡಗಿದೆ. ಅದೂ ದೇಶಕ್ಕೆ ಸ್ವಾತಂತ್ರ್ಯ ಬಂದು 63 ವರ್ಷಗಳ ನಂತರ! 2008ರಲ್ಲಿ ಒಂದು ಪುನರ್‌ವಸತಿ ನೀತಿಯನ್ನು ಮತ್ತು 2009ರಲ್ಲಿ ಒಂದು ಪುನರ್‌ವಸತಿ ಕರಡು ಶಾಸನವನ್ನೂ ಯುಪಿಎ ಸರ್ಕಾರ ಮುಂದಿಟ್ಟಿತ್ತು. ಅದೂ ಸಹ ಎಷ್ಟು ಕುತಂತ್ರದಿಂದ ಕೂಡಿದೆಯೆಂದರೆ ಯುಪಿಎಯ ಅಂಗಪಕ್ಷಗಳೇ ಅದರ ವಿರುದ್ಧ ಅಭಿಪ್ರಾಯ ವ್ಯಕ್ತಪಡಿಸಿವೆ.

ಸ್ಥೂಲರೂಪದಲ್ಲಿ ನೋಡಿದರೂ ಈ ಪುನರ್‌ವಸತಿ ನೀತಿಯೂ ಸಾರಾಂಶದಲ್ಲಿ ಜನರಿಗೆ ಮಾಡುತ್ತಿರುವ ಮತ್ತೊಂದು ದ್ರೋಹವೇ ಆಗಿದೆ.


ದೊಡ್ಡ ದೊಡ್ಡ ಕಾರ್ಪೊರೇಟ್ ಉದ್ಯಮಪತಿಗಳಿಗೆ ಇಡೀ ದೇಶವನ್ನು ಮತ್ತು ಜಗತ್ತನ್ನು ಒತ್ತೆ ಇಡಲು ಹೇರಲಾಗುತ್ತಿರುವ ಜಾಗತೀಕರಣ ನೀತಿಗಳ ವಿರುದ್ಧ ಜನರ ಪ್ರತಿರೋಧ ದಿನಗಳೆದಂತೆ ಹೆಚ್ಚುತ್ತಿರುವುದರಿಂದ ಅದನ್ನು ಅನುಷ್ಠಾನಗೊಳಿಸುವುದು ಹೆಚ್ಚೆಚ್ಚು ಕಷ್ಟವಾಗತೊಡಗಿದೆ. ಹೀಗಾಗಿ ಜನರ ಅರಿವಿಗೇ ಬಾರದಂತೆ ಅಥವಾ ಜನರ ಪರವಾದ ನೀತಿಯೆಂಬ ಸೋಗಿನಲ್ಲಿ ಹಲವಾರು ಯೋಜನೆಗಳ ಅನುಷ್ಠಾನಗೊಳ್ಳುತ್ತಿರುವ ಈ ಹೊತ್ತಿನಲ್ಲಿ ಜನರನ್ನು ಮೋಸಗೊಳಿಸಲು ಅವು ಹಲವು ರೀತಿಯ ತಂತ್ರ ಮತ್ತು ಕುತಂತ್ರಗಳನ್ನು ಹೂಡುತ್ತಿವೆ. ಅದರಲ್ಲಿ ಪ್ರಮುಖವಾದದ್ದು ಜನಪರವಾದ ಭಾಷೆಯನ್ನೇ ತಮ್ಮ ಜನವಿರೋಧಿ ಕುತಂತ್ರಗಳ ಲೇಬಲ್‌ಗಳನ್ನಾಗಿ ಮಾಡಿಕೊಳ್ಳುವುದು.

ಭಾಷೆಯನ್ನು ಅದರ ಅರ್ಥದಿಂದ ಬೇರ್ಪಡಿಸಿ ತಮ್ಮ ಪರವಾಗಿ ದುಡಿಸಿಕೊಳ್ಳುವುದು ಒಂದು ನೀತಿಯಾದರೆ ಜನರ ಪ್ರಬಲವಾದ ಹೋರಾಟಗಳಿಗೆ ಅನಿವಾರ್ಯವಾಗಿ ಮಣಿಯಲೇಬೇಕಾದ ಸಂದರ್ಭಗಳು ಬಂದಾಗ ಜನರ ಪರವಾದ ನೀತಿಗಳನ್ನೇ ಜಾರಿಗೆ ತರಲಾಗಿದೆ ಎಂಬ ಭ್ರಮೆ ಸೃಷ್ಟಿಸಿ ಅಂತರ್ಯದಲ್ಲಿ ಜನರಿಗೆ ಅರ್ಥವಾಗದ ಭಾಷೆಯಲ್ಲಿ ಜನವಿರೋಧಿ ಅಂಶಗಳನ್ನು ಅಡಕಗೊಳಿಸುವುದು ಅದರ ಇನ್ನೊಂದು ಹೊಸ ಕುತಂತ್ರ.

ಈ ಸಾಲಿನಲ್ಲಿ ಮತ್ತೊಂದು ಸೇರ್ಪಡೆ ಸರ್ಕಾರದ ಪ್ರಸ್ತಾಪಿತ ಹೊಸ ಪರಿಹಾರ ಮತ್ತು ಪುನರ್‌ವಸತಿ ಕಾಯಿದೆ ಮತ್ತು ಜನರ ಭೂಮಿಯನ್ನು ವಶಪಡಿಸಿಕೊಳ್ಳುತ್ತಿದ್ದ 1894ರ ಭೂಸ್ವಾಧೀನ ಕಾಯಿದೆಯ ತಿದ್ದುಪಡಿ. ಅದು ಈಗಿರುವಂತೆ ಜಾರಿಗೆ ಬಂದರೆ ಜನತೆಯ ಪರಿಸ್ಥಿತಿ ಬಾಣಲೆಯಿಂದ ಬೆಂಕಿಗೆ ಬಿದ್ದಂತಾಗುವುದರಲ್ಲಿ ಸಂಶಯವಿಲ್ಲ.

1894ರ ಭೂಸ್ವಾಧೀನ ಕಾಯಿದೆಗೆ ಜನತೆ ಕೇಳುತ್ತಿದ್ದ ತಿದ್ದುಪಡಿಯೆಂದರೆ ಸಾರ್ವಜನಿಕ ಹಿತಾಸಕ್ತಿ ಎಂದರೇನೆಂದು ಸ್ಪಷ್ಟವಾಗಿ ನಿರ್ವಚನ ಮಾಡಬೇಕು ಎಂದು. ಏಕೆಂದರೆ ಯಾವುದಾದರೂ ರಸ್ತೆ ಅಥವಾ ಗಣಿ ಯೋಜನೆ ಸಾರ್ವಜನಿಕ

ಶಿವಸುಂದರ್



ಚಾರ್ವಾಕ

ಹಿತಾಸಕ್ತಿಗಾಗಿ ಎಂದು ಘೋಷಿತವಾಗುವ ಮುನ್ನ ಸಾರ್ವಜನಿಕರೇ ಆಗಿರುವ ಆ ಯೋಜನೆಯಿಂದ ಸಂತ್ರಸ್ತರಾಗುವ ಜನತೆಯ ಹಿತಾಸಕ್ತಿಯೂ ಸಾರ್ವಜನಿಕ ಹಿತಾಸಕ್ತಿಯೆಂದೇ ಪರಿಗಣಿಸಬೇಕು. ಆದರೆ ಈ ಬಗೆಯ ಯಾವುದೇ ಯೋಜನೆಗಳ ಲಾಭ ನಷ್ಟಗಳನ್ನು ತೂಕ ಹಾಕುವಾಗ ಸಂತ್ರಸ್ತರಿಗಾಗುವ ನಷ್ಟಗಳನ್ನು ಎಂದೂ ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಅಷ್ಟು ಮಾತ್ರವಲ್ಲ, ಇಂಥ ಯೋಜನೆಗಳಿಂದ ಎಷ್ಟು ವಿದೇಶಿ ವಿನಿಮಯ, ಎಷ್ಟು ವಿದೇಶಿ ಬಂಡವಾಳ ಹೂಡಿಕೆಯಾಗುತ್ತದೆ ಎಂಬುದನ್ನು ಸಾರ್ವಜನಿಕ ಹಿತಾಸಕ್ತಿಯ ಮಾನದಂಡಗಳನ್ನಾಗಿ ಪರಿಗಣಿಸಲಾಗುತ್ತಿದೆಯೇ ವಿನಃ ಸಾಮಾನ್ಯ ಜನರಿಗೆ ಅಂದರೆ ನಿಜವಾದ ಸಾರ್ವಜನಿಕರಿಗೆ ಇದರಿಂದ ಎಷ್ಟು ಲಾಭ ದೊರೆಯುತ್ತದೆ ಎಂಬುದನ್ನು ಎಂದಿಗೂ ಪರಿಗಣಿಸಿಲ್ಲ. ಹೀಗಾಗಿ 1894ರ ಕಾಯಿದೆಯ ತಿದ್ದುಪಡಿಯಲ್ಲಿ ಈ ಸಾರ್ವಜನಿಕ ಹಿತಾಸಕ್ತಿಯೇನೆಂಬುದು ಸ್ಪಷ್ಟವಾಗಿ ನಿರ್ವಚನಗೊಳ್ಳುವುದೂ ಮಾತ್ರವಲ್ಲದೆ ನಿರ್ದಿಷ್ಟ ಯೋಜನೆ ಸಾರ್ವಜನಿಕ ಹಿತಾಸಕ್ತಿಗೆ ಅನುಗುಣವಾಗಿದೆಯೋ ಇಲ್ಲವೋ ಎಂಬ ಬಗ್ಗೆಯೂ ಖಚಿತಪಡಿಸಿಕೊಳ್ಳಲು ಒಂದು ಪರಿಣಿತರ ಮತ್ತು ಸಂತ್ರಸ್ತರ ಸಮಿತಿಯನ್ನು ನೇಮಿಸಿ ಅದರ ಶಿಫಾರಸ್ಸಿಗೆ ತಕ್ಕಂತೆ ನಡೆದುಕೊಳ್ಳಬೇಕೆಂಬುದೂ ಸಹ ಜನತೆಯ ಆಗ್ರಹಗಳಲ್ಲಿ ಒಂದಾಗಿತ್ತು.

ಆದರೆ ಹೊಸ ತಿದ್ದುಪಡಿಯಲ್ಲಿ ಜನರ ಈ ಆಗ್ರಹಗಳಿಗೆ ತದ್ವಿರುದ್ಧವಾಗಿ ಸಾರ್ವಜನಿಕ ಆಸಕ್ತಿ ಎಂಬ ವ್ಯಾಖ್ಯೆಯನ್ನು ಮತ್ತಷ್ಟು ವಿಸ್ತರಿಸಿದೆ. ಇದರಡಿಯಲ್ಲಿ ವಿದ್ಯುತ್, ಕುಡಿಯುವ ನೀರು ಸರಬರಾಜು, ಸಂಪರ್ಕ ಇತ್ಯಾದಿಗಳೆಲ್ಲವನ್ನೂ ತರಲಾಗಿದೆ. ಅಂದರೆ ಇನ್ನು ಮುಂದೆ ಸರ್ಕಾರಗಳು ನಿಭಾಯಿಸಬೇಕಿದ್ದ ಇಂತಹ ಕಾರ್ಯಕ್ರಮಗಳಿಂದಲೂ ಹಿಂದೆ ಸರಿಯುವುದಲ್ಲದೆ ಅದನ್ನು ಖಾಸಗಿ ಕಂಪನಿಗಳಿಗೆ ಪರಭಾರೆ ಮಾಡಲಿದೆ ಎಂದರ್ಥ ಮತ್ತು ಅದಕ್ಕೆ ಜನತೆಯ ಭೂಮಿಯನ್ನು ವಶಪಡಿಸಿಕೊಳ್ಳಲಿದ್ದಾರೆ ಎಂದರ್ಥ. ಅಷ್ಟು ಮಾತ್ರವಲ್ಲದೆ ಗಣಿಗಾರಿಕೆಯನ್ನು ಸಹ ಈ ಪ್ರಸ್ತಾಪಿತ ಕಾನೂನು ಸಾರ್ವಜನಿಕ ಹಿತಾಸಕ್ತಿಯಡಿಯಲ್ಲಿ ಸೇರಿಸಿದೆ. ಇದರ ಲಾಭ ಯಾರಿಗಾಗುತ್ತದೆ ಎಂಬುದನ್ನು ಕನಿಷ್ಠ ಕರ್ನಾಟಕದ ಗಣಿ ರಾಜಕಾರಣ ಬಲ್ಲವರಿಗಂತೂ ಹೇಳುವ ಅಗತ್ಯವಿಲ್ಲವೇ ಇಲ್ಲ. ಇದಲ್ಲದೆ ಈವರೆಗೆ ಭೂಮಿಯನ್ನು ಕೆಲವು ನಿರ್ದಿಷ್ಟ ಬಗೆಯ ಕಂಪನಿಗಳಿಗೆ ಮಾತ್ರ ವಶಪಡಿಸಿಕೊಳ್ಳಲಾಗುತ್ತಿದ್ದರೆ ಈ ಹೊಸ ಕಾನೂನಿನ ಪ್ರಕಾರ "ಯಾವುದೇ ಕಂಪನಿಗಳು ಮತ್ತು ಅಸೋಸಿಯೇಷನ್ನುಗಳು ಮತ್ತು ವ್ಯಕ್ತಿ ಹಾಗೂ ಸಂಸ್ಥೆಗಳು" ಸಹ ವಶಪಡಿಸಿಕೊಳ್ಳಬಹುದೆಂದು ತಿದ್ದುಪಡಿ ಮಾಡಿದೆ.

ಅದೇರೀತಿ ಪರಿಹಾರ ಮತ್ತು ಪುನರ್‌ವಸತಿ ವಿಷಯದಲ್ಲೂ ಜಮೀನು ಕಳೆದುಕೊಂಡ ಪ್ರತಿ ಸಂತ್ರಸ್ತನಿಗೂ ಜಮೀನು ಕೊಡಬೇಕೆಂಬುದು ಜನರ ಆಗ್ರಹವಾಗಿತ್ತು. ಆದರೆ ಪ್ರಸ್ತಾಪಿತ ಕಾನೂನಿನಲ್ಲಿ ಆಶಯಾತ್ಮಕವಾಗಿ ಇದರ ಪ್ರಸ್ತಾಪವಾಗಿದ್ದರೂ ಸರ್ಕಾರಿ ಜಮೀನಿದ್ದರೆ ಮಾತ್ರ ಎಂಬ ಅಡಿ ಟಿಪ್ಪಣಿಯನ್ನು ಸೇರಿಸಲಾಗಿದೆ. ಇದರ ಪರಿಣಾಮವೇನಾಗಬಹುದೆಂಬುದನ್ನು ಈಗಾಗಲೇ ನರ್ಮದಾ ಯೋಜನೆಯಲ್ಲಿ ನಿರ್ವಸಿತರಾದವರ ಪಾಡನ್ನು ನೋಡಿದಾಗ ಅರ್ಥವಾಗುತ್ತದೆ. ನರ್ಮದಾ ಯೋಜನೆಯಲ್ಲಿ ನಿರ್ವಸಿತರಾದವರಿಗೆ ಜಮೀನು ನೀಡಬೇಕೆಂದು ಸುಪ್ರೀಮ್ ಕೋರ್ಟೇ ಆದೇಶ ನೀಡಿದ್ದರೂ ಮಧ್ಯಪ್ರದೇಶ ಸರ್ಕಾರ ಸರ್ಕಾರಿ ಜಮೀನಿಲ್ಲವಾದ್ದರಿಂದ ಕೊಡಲಾಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದೆ. ಹೀಗಾಗಿ ಈಗಲೂ ಅವರು ನಿರ್ವಸಿತರಾಗಿಯೇ ಉಳಿದಿದ್ದಾರೆ.

ಯೋಜನೆಯಿಂದ ಜಮೀನು ಕಳೆದುಕೊಳ್ಳುವ ಪ್ರತಿ ಕುಟುಂಬದ ಒಬ್ಬರಿಗಾದರೂ ಕೆಲಸ ಕೊಡಬೇಕೆಂಬ ಆಗ್ರಹವನ್ನು ತತ್ವಶಃ ಒಪ್ಪಿಕೊಳ್ಳುವ ಆ ಕಾನೂನು ಆ ಕಂಪನಿ ಬಯಸುವ ವಿದ್ಯಾರ್ಹತೆ ಮತ್ತು ಉದ್ಯೋಗ ಲಭ್ಯತೆ ಇದ್ದಲ್ಲಿ ಮಾತ್ರ ಎಂಬ ಅಡಿ ಟಿಪ್ಪಣಿ ಸೇರಿಸಿದೆ. ಅದೇ ರೀತಿ ಸಂತ್ರಸ್ತರಿಗೆ ಆ ಕಂಪನಿಯಲ್ಲಿ ಶೇರುಗಳನ್ನು ಕೊಡಬೇಕೆಂದು ಪ್ರಸ್ತಾಪಿತ ಕಾನೂನು ಸಲಹೆ ಮಾಡುತ್ತದೆ. ಆದರೆ ಅದು ಜಾರಿಗೆ ಬರಬೇಕೆಂದರೆ ಆ ಕಂಪನಿಯ ಬಾಸ್‌ಗಳು ಆ ರೀತಿ ಶೇರುಗಳನ್ನು ಕೊಡುವ ಬಗ್ಗೆ ಒಪ್ಪಿಗೆ ನೀಡಿದರೆ ಮಾತ್ರ ಎಂಬ ಹೊಸ ಅಡ್ಡಿಯನ್ನು ಸೇರಿಸಲಾಗಿದೆ. ಸಂತ್ರಸ್ತರಿಗೆ ಎಲ್ಲಾ ನಾಗರಿಕ ಸೌಲಭ್ಯವನ್ನು ಮಾಡಿಕೊಡಬೇಕು ಎಂಬ ಆಶಯವಿದೆ. ಹಾಗೆಯೇ ದುರ್ಬಲ ಸಂತ್ರಸ್ತರಿಗೆ ಜೀವನಪೂರ್ತಿ ಪಿಂಚಣಿ ಕೊಡಬೇಕೆಂಬ ಆಶಯವನ್ನು ಆ ಕಾನೂನಿನಲ್ಲಿ ಪ್ರದರ್ಶಿಸಲಾಗಿದೆ. ಆದರೆ ಅವೆಲ್ಲಾ ಸರ್ಕಾರ ಮಾಡುತ್ತದೆಯೋ ಅಥವಾ ಅಲ್ಲಿ ಯೋಜನೆ ರೂಪಿಸುವ ಕಂಪನಿ ಮಾಡುತ್ತದೆಯೋ ಎಂಬ ಬಗ್ಗೆ ಯಾವುದೇ ಸ್ಪಷ್ಟತೆ ಇಲ್ಲ.

ಹೀಗೆ ಒಟ್ಟಿನಲ್ಲಿ ಪ್ರಸ್ತಾಪಿತ ಕಾನೂನು ಕಾರ್ಪೊರೇಟ್ ಕಂಪನಿಗಳ ಪರವಾದ ನೀತಿಯೇ ವಿನಃ ಸಂತ್ರಸ್ತರ ಪರವಾದದ್ದಲ್ಲ. ಆದರೂ ಅದಕ್ಕೆ ಜನಪರ ಪರಿಹಾರ ಮತ್ತು ಪುನರ್‌ವಸತಿ ಕಾಯಿದೆ ಎಂದು ಹೆಸರಿಡಲಾಗಿದೆ. ಜಾಗತೀಕರಣದ ಈ ಕಾಲಘಟ್ಟದಲ್ಲಿ ಭಾಷೆ, ಅರ್ಥ ಮತ್ತು ಬದುಕು ಎಲ್ಲವೂ ಭ್ರಷ್ಟಗೊಳ್ಳುತ್ತಿರುವುದಕ್ಕೆ ಇದಕ್ಕಿಂತ ಉದಾಹರಣೆ ಬೇಕೆ?


ಕೊಲೆಯನ್ನು ಸಂಭ್ರಮಿಸುತ್ತಿರುವ ಪಾಕಿ ಮೂಲಭೂತವಾದಿಗಳು



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಪಾಕಿಸ್ತಾನದಲ್ಲಿ ಇಸ್ಲಾಂ ಮೂಲಭೂತವಾದ ಹೇಗೆ ...ಚ್ಚಾಗುತ್ತಿದೆ ಎಂಬುದಕ್ಕೆ ಕಳೆದ ವಾರ ಆ ದೇಶದ ...ಜಾಬ್ ಪ್ರಾಂತ್ಯದ ...ಜ್ಯಪಾಲರಾಗಿದ್ದ ಸಲ್ಮಾನ್ ...ೀರ್ ಅವರ ಕೊಲೆಯೇ ...ಂದು ಆಘಾತಕಾರಿ ...ಕ್ಷಿಯಾಗಿದೆ.



ಸಲ್ಮಾನ್ ಮತ್ತು ತಹ್ಲೀನ್

...ಇಸ್ಲಾಂ ಧರ್ಮದ ...ವಾದಿ ಪೈಗಂಬರರೇ ...ನ್ನ ಟೀಕಾಕಾರರಿಗೆ ವಾಕ್ ...ತಂತ್ರ್ಯವಿದೆ ಎಂದಿದ್ದರೂ ...ುತ್ತು ಇಸ್ಲಾಂ ಧರ್ಮದ ...ನೆಯ ಹೆಸರಲ್ಲಿ ...ನುಷ್ಯರು ರೂಪಿಸಿರುವ ಕಾನೂನಿಗೆ ಪಾಕಿಸ್ತಾನದ ...ೂಲಭೂತವಾದಿಗಳು ಹೆಚ್ಚು ಒತ್ತು ಕೊಡುತ್ತಿದ್ದಾರೆ. ...ದ್ದರಿಂದಲೇ ಸರ್ವಾಧಿಕಾರಿ ಜಿಯಾ ಉಲ್ ಹಕ್ ...ಲದಲ್ಲಿ ಜಾರಿಗೆ ಬಂದಿದ್ದ ಧರ್ಮನಿಂದನೆ ...ನೂನನ್ನು ರದ್ದುಗೊಳಿಸಬೇಕು ಎಂದಿದ್ದಕ್ಕೆ ಸಲ್ಮಾನ್ ...ೀರ್ ಬಲಿಯಾಗುತ್ತಾರೆ. ಅಷ್ಟೇ ಅಲ್ಲ, ಅವರ ...ತಿಮ ಸಂಸ್ಕಾರಗಳನ್ನು ನೆರವೇರಿಸಲೂ ಆ ದೇಶದ ...ುಲ್ಲಾಗಳು ನಿರಾಕರಿಸುತ್ತಾರೆ. ಅದೇ ಹೊತ್ತಿಗೆ ...ಲ್ಮಾನ್ ಅವರನ್ನು ಕೊಂದ ಅವರ ಅಂಗರಕ್ಷಕ ...ುಮ್ತಾಜ್ ಖಾದ್ರಿಯನ್ನು 'ಇಸ್ಲಾಂ ಧರ್ಮದ ...ೋಧ' ಎಂದು ಅದೇ ...ೂಲಭೂತವಾದಿಗಳು ಕೊಂಡಾಡುತ್ತಿದ್ದಾರೆ.

...ಪಾಕಿಸ್ತಾನ ಇಂತಹ ಅಪಾಯದ ಹಾದಿ ...ಡಿಯುತ್ತಿದೆ ಎಂದು ಸಲ್ಮಾನ್ ಅವರಿಗೆ ಈ ...ುದೆಯೇ ಎಚ್ಚರಿಕೆ ನೀಡಿದ್ದು ಅವರ ...ರತೀಯ ಪುತ್ರ ಆತೀಶ್ ತಸೀರ್. ...ಾಕಿಸ್ತಾನದ ರಾಜಕಾರಣಿ ಆಗಿದ್ದ ಸಲ್ಮಾನ್ ...ವರಿಗೆ ಅದು ಹೇಗೆ ಭಾರತೀಯ ಪುತ್ರನಿದ್ದ ...ಬ ಅಚ್ಚರಿಯೇ? ಆದರೂ ಇದು ನಿಜ.

...ದೇಶ ವಿಭಜನೆಯ ಮುನ್ನ ಸಲ್ಮಾನ್ ...ೀರ್‌ನ ತಂದೆ ಒಂದಿಷ್ಟು ಖ್ಯಾತಿ ಪಡೆದಿದ್ದ ...ಹಿತಿ ಆಗಿದ್ದ. ಹಾಗೆಯೇ ಖ್ಯಾತ ಉರ್ದು ...ಫೈಜ್ ಅಹ್ಮದ್ ಫೈಜ್ ಅವರ ಹತ್ತಿರದ ...ಬಂಧಿ ಆಗಿದ್ದ. ಸಲ್ಮಾನ್ ತಸೀರ್ ಇನ್ನೂ ...ುವಕನಾಗಿದ್ದಾಗ ಜುಲ್ಫಿಕರ್ ಆಲಿ ಭುಟ್ಟೋ ಎಂಬ ...ಜಕಾರಣಿ ಬೆಳೆಯಲಾರಂಭಿಸಿದ್ದ. ಆತನಿಂದ ...ಭಾವಿತನಾದ ಸಲ್ಮಾನ್ ಭುಟ್ಟೋ ಸ್ಥಾಪಿಸಿದ ...ಕಿಸ್ತಾನ್ ಪೀಪಲ್ಸ್ ಪಾರ್ಟಿಯನ್ನು ಸೇರಿಕೊಂಡನಲ್ಲದೆ ...ಟ್ಟೋನನ್ನು ಕೊಂಡಾಡಿ ಒಂದು ಪುಸ್ತಕವನ್ನು ಬರೆದ.

...ಆ ಪುಸ್ತಕದ ಪ್ರಚಾರಕ್ಕೆಂದು 1980 ರಲ್ಲಿ ಸಲ್ಮಾನ್ ...ಹಲಿಗೆ ಬಂದ. ಅಷ್ಟು ಹೊತ್ತಿಗಾಗಲೇ ಆತನಿಗೆ ...ದುವೆ ಆಗಿ ಮಕ್ಕಳೂ ಇದ್ದರು. ಆಗ ಆತನನ್ನು ...ದರ್ಶಿಸಿದವರಲ್ಲಿ ತಹ್ಲೀನ್ ಸಿಂಗ್ ಎಂಬ ...ರತೀಯ ಪತ್ರಕರ್ತೆಯೂ ಒಬ್ಬರಾಗಿದ್ದರು.

...ಸಿಖ್ ಸಮುದಾಯದ ತಹ್ಲೀನ್ ಸಾಹುಕಾರ ...ರ್ದಾರ್ ಬಸಾಖಾ ಸಿಂಗ್ ಎಂಬುವವರ ...ೊಮ್ಮಗಳು. ಈ ಬಸಾಖಾ ಸಿಂಗ್ ಆಗಿನ ಕಾಲದಲ್ಲೇ ...ಷ್ಟು ದೊಡ್ಡ ಕಂಟ್ರಾಕ್ಟರ್ ಆಗಿದ್ದರೆಂದರೆ ಅವರು ...ಹಲಿಯ ನಾರ್ತ್ ಬ್ಲಾಕ್ ಅನ್ನು ಕಟ್ಟಿದ್ದರು. ಇಂತಹ ...ತ್ತ ಮತ್ತು ಶ್ರೀಮಂತ ಸಂಸಾರದಲ್ಲಿ ಜನಿಸಿದ್ದ ...ಹ್ಲೀನ್ ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ಮುಗಿಸಿ ಆಗತಾನೇ ...ರತಕ್ಕೆ ಹಿಂದಿರುಗಿದ್ದಳು. ಸುಂದರಿಯಾಗಿದ್ದ ತಹ್ಲೀನ್ ...ಗಸ್ಸು, ಯೌವನದ ಹುಮ್ಮಸ್ಸು ಮತ್ತು ಧೈರ್ಯದಿಂದ ತುಂಬ ತುಳುಕುತ್ತಿದ್ದಳು.

ಸಲ್ಮಾನ್ ಕೂಡ ಸುಂದರನಾಗಿದ್ದ. ಚಾಣಾಕ್ಷ ಮಾತುಗಾರನಾಗಿದ್ದ. ಎಂತಹ ಯುವತಿಯನ್ನೂ ಸೂರೆ ಮಾಡಬಲ್ಲ ಸಾಮರ್ಥ್ಯ ಹೊಂದಿದ್ದ.

ಇಂತಹ ಸಲ್ಮಾನ್ ಮತ್ತು ತಹ್ಲೀನ್ ನಡುವೆ ಪ್ರೇಮಾಂಕುರವಾಯಿತು. ಇಬ್ಬರೂ ಒಂದಿಡೀ ವಾರವನ್ನು ಜೊತೆಯಾಗಿ ಕಳೆದರು. ಅದಾದನಂತರ ಸಲ್ಮಾನ್ ಪಾಕಿಸ್ತಾನಕ್ಕೆ ಹಾರಿಹೋಗಿ ತನ್ನ ರಾಜಕೀಯ, ಬಿಸಿನೆಸ್ ಮತ್ತು ಸಂಸಾರ ಎಂದೆಲ್ಲ ಬ್ಯುಸಿ ಆದ. ಇತ್ತ ತಹ್ಲೀನ್ ಗರ್ಭವತಿಯಾದಳು. ಸಲ್ಮಾನ್ ತನ್ನೊಂದಿಗೆ ಇಲ್ಲದಿರುವುದರಿಂದ ಗರ್ಭಪಾತ ಮಾಡಿಸಿಕೊಳ್ಳುವ ಬಗ್ಗೆ ಯೋಚಿಸಿದಳು. ಹಾಗೆ ಮಾಡಬೇಡ ಎಂದ ಸಲ್ಮಾನ್ ಆಕೆಗಾಗಿ ಲಂಡನ್‌ನಲ್ಲಿ ಒಂದು ಫ್ಲಾಟ್ ಮಾಡಿದ. ಅಲ್ಲಿಗೆ ತಹ್ಲೀನ್‌ಳನ್ನು ಕರೆಸಿಕೊಂಡು ಅವಳೊಂದಿಗೆ ಸ್ವಲ್ಪ ಕಾಲ ಜೀವಿಸಿದ. ಆದರೆ ಹೂವಿಂದ ಹೂವಿಗೆ ಹಾರುವ ವ್ಯಕ್ತಿತ್ವದ ಸಲ್ಮಾನ್ ಇತರೆ ಮಹಿಳೆಯರೊಂದಿಗೆ ಚಕ್ಕಂದ ಶುರುಮಾಡಿದ. ಅಷ್ಟು ಹೊತ್ತಿಗಾಗಲೇ ತಹ್ಲೀನ್ ಓರ್ವ ಪುತ್ರನಿಗೆ ಜನ್ಮ ನೀಡಿದ್ದಳು. ಇತರೆ ಮಹಿಳೆಯರೊಂದಿಗೆ ಸಲ್ಮಾನ್‌ನ ಸರಸ ಸಲ್ಲಾಪಗಳನ್ನು ಕಂಡು ಭ್ರಮನಿರಸನಗೊಂಡ ತಹ್ಲೀನ್ ತನ್ನ ಮಗ ಆತೀಶ್‌ನೊಂದಿಗೆ ಭಾರತಕ್ಕೆ ಹಿಂದಿರುಗಿದಳು. ತಹ್ಲೀನ್ ಸ್ವತಃ ಸಿಖ್ ಸಮುದಾಯದವಳಾಗಿದ್ದರೂ ತನ್ನ ಮಗನನ್ನು ಮುಸಲ್ಮಾನನನ್ನಾಗಿ ಬೆಳೆಸಿದಳು. ಪತ್ರಕರ್ತೆಯಾಗಿ ಖ್ಯಾತಿ ಗಳಿಸಿದಳು.



ಆತೀಶ್

ಅತ್ತ ಪಾಕಿಸ್ತಾನದಲ್ಲಿ ಸಲ್ಮಾನ್‌ನ ಬದುಕಿನ ಹಾದಿಯೇ ಬದಲಾಗಿತ್ತು. ಆತನ ರಾಜಕೀಯ ಗುರು ಜುಲ್ಫಿಕರ್ ಆಲಿ ಭುಟ್ಟೋನನ್ನು ಜಿಯಾ ಉಲ್ ಹಕ್ ಗಲ್ಲಿಗೇರಿಸಿದ ನಂತರ ಭುಟ್ಟೋನ ಅಪ್ಪಟ ಬೆಂಬಲಿಗನಾಗಿದ್ದ ಸಲ್ಮಾನ್‌ನನ್ನೂ ಜೈಲಿಗೆ ದೂಡಿದ. ಅಲ್ಲಿಯತನಕ ಐಷಾರಾಮಿ ಜೀವನ ನಡೆಸುತ್ತಿದ್ದ ಸಲ್ಮಾನ್ ಜೈಲಿನಲ್ಲಿ ನರಕ ಯಾತನೆಯನ್ನು ಅನುಭವಿಸಿದ. ಆತನಿಗೆ ನೀಡಲಾಗಿದ್ದ ಏಕೈಕ ಪುಸ್ತಕ ಖುರಾನ್ ಅನ್ನು ಹಲವಾರು ಬಾರಿ ಓದಿದರೂ ಅದರಿಂದ ತನಗೇನು ಸಿಗಲಿಲ್ಲ ಎಂದ. ಆನಂತರ 1988 ರಲ್ಲಿ ಭುಟ್ಟೋ ಪುತ್ರಿ, ಬೆನಜೀರ್ ಪಾಕಿಸ್ತಾನದ ಪ್ರಧಾನಿ ಆದಾಗ ಸಲ್ಮಾನ್ ಅದೃಷ್ಟವೂ ಖುಲಾಯಿಸಿತು. ಆತ ಹಲವಾರು ಉದ್ಯಮಗಳನ್ನು ಪ್ರಾರಂಭಿಸಿದ, ಪತ್ರಿಕೆಯೊಂದನ್ನು ಸ್ಥಾಪಿಸಿದ, ಕೋಟ್ಯಾಧಿಪತಿಯಾದ, ಎರಡನೆ ಮದುವೆಯಾಗಿ ಇನ್ನೂ ಹಲವು ಮಕ್ಕಳ ತಂದೆಯಾದ.

ಹೀಗೆ ಭುಟ್ಟೋ ಕುಟುಂಬದ ಏಳುಬೀಳುಗಳೊಂದಿಗೆ ಸಲ್ಮಾನ್‌ನ ಬದುಕೂ ಬೆಸೆದುಕೊಂಡಿತ್ತು. ಈ ಮಧ್ಯೆ ರಾಜಕೀಯ, ಸೈನ್ಯ ಮತ್ತು ಮುಲ್ಲಾಗಳ ನಡುವಿನ ಸಂಬಂಧ ಗಟ್ಟಿಗೊಳ್ಳುತ್ತಾ ಹೋದಂತೆ ಪಾಕಿಸ್ತಾನದ ಸಮಾಜವೂ ಮೂಲಭೂತವಾದದೆಡೆಗೆ ಸರಿಯಲಾರಂಭಿಸಿತು. ಅದೆಲ್ಲದರ ಪರಿಣಾಮವೆಂಬಂತೆ 2007 ರ ಡಿಸೆಂಬರ್‌ನಲ್ಲಿ ಚುನಾವಣಾ ಪ್ರಚಾರದಲ್ಲಿದ್ದಾಗ ಬೆನಜೀರ್ ಭಯೋತ್ಪಾದಕರ ದಾಳಿಗೆ ತುತ್ತಾದಳು. ಆದರೂ ಆನಂತರ ಆಕೆಯ ಪಾಕಿಸ್ತಾನ್ ಪೀಪಲ್ಸ್ ಪಾರ್ಟಿ ಅಧಿಕಾರಕ್ಕೆ ಬಂದಿದ್ದರಿಂದ ಸಲ್ಮಾನ್‌ನ ಅದೃಷ್ಟ ಮತ್ತೆ ಖುಲಾಯಿಸಿತು. ಆತನನ್ನು ಪಂಜಾಬ್ ಪ್ರಾಂತ್ಯದ ರಾಜ್ಯಪಾಲನಾಗಿ ಬೆನಜೀರ್‌ಳ ಗಂಡ ಮತ್ತು ಪಾಕಿಸ್ತಾನದ ಅಧ್ಯಕ್ಷ ಜರ್ದಾರಿ ನೇಮಿಸಿದ.

ಇಷ್ಟೆಲ್ಲ ಆಗುಹೋಗುಗಳ ನಡುವೆ ಸಲ್ಮಾನ್ ಮೂರನೆ ಬಾರಿ ಮದುವೆ ಆಗಿ ಒಟ್ಟು ಆರು ಮಕ್ಕಳ ತಂದೆಯಾದರೂ ತನ್ನ ಭಾರತೀಯ ಪ್ರೇಯಸಿ ತಹ್ಲೀನ್‌ನೊಂದಿಗಾಗಲಿ, ಆಕೆಗೆ ಹುಟ್ಟಿದ್ದ ತನ್ನ ಪುತ್ರ ಆತೀಶ್‌ನೊಂದಿಗಾಗಲಿ ಸಲ್ಮಾನ್ ಯಾವ ಸಂಪರ್ಕವನ್ನೂ ಇಟ್ಟುಕೊಂಡಿರಲಿಲ್ಲ. ಮಾತ್ರವಲ್ಲ, ಆತೀಶ್ ಚಿಕ್ಕ ಹುಡುಗನಾಗಿದ್ದಾಗ ಆ ವಯಸ್ಸಿಗೆ ಸಹಜವಾದ ಕುತೂಹಲದಿಂದ ತನ್ನ ತಂದೆಯೊಂದಿಗೆ ಸಂಪರ್ಕವನ್ನು ಏರ್ಪಡಿಸಿಕೊಳ್ಳುವ ಹಂಬಲದಿಂದ ಹಲವಾರು ಪತ್ರಗಳನ್ನು ಬರೆದಿದ್ದರೂ ಅದ್ಯಾವುದಕ್ಕೂ ಸಲ್ಮಾನ್ ಪ್ರತಿಕ್ರಿಯಿಸಿರಲಿಲ್ಲ. ಆದರೆ ಆತೀಶನಿಗೆ 21 ವರ್ಷ ವಯಸ್ಸಾದಾಗ ಆತ ಮತ್ತೊಂದು ಪ್ರಯತ್ನ ಮಾಡಿದ. 2002 ರಲ್ಲಿ ಯಾವ ಮುನ್ಸೂಚನೆಯನ್ನು ನೀಡದೆ ಪಾಕಿಸ್ತಾನಕ್ಕೆ ಹೋದ ಆತೀಶ್ ಲಾಹೋರ್‌ನಲ್ಲಿದ್ದ ತನ್ನ ತಂದೆ ಸಲ್ಮಾನ್ ಮನೆ ಬಾಗಿಲನ್ನು ಬಡಿದ. ಆತೀಶನ ಅಸ್ತಿತ್ವದ ಬಗ್ಗೆ ಸಲ್ಮಾನ್‌ನ ಮೂರನೆ ಹೆಂಡತಿ ಮತ್ತು ಇತರೆ ಮಕ್ಕಳಿಗೆ ಗೊತ್ತಿದ್ದರಿಂದ ಅವರೆಲ್ಲ ಆತೀಶನನ್ನು ಸ್ವಾಗತಿಸಿದರಲ್ಲದೆ ತಂದೆ ಸಲ್ಮಾನ್‌ನೊಂದಿಗೆ ಆತ ಜೊತೆಗೂಡುವುದಕ್ಕೆ ನೆರವಾದರು.

ಆದರೆ ಆತೀಶನದ್ದು ಒಂದು ರೀತಿಯಲ್ಲಿ ವಿಚಿತ್ರ ದ್ವಂದ್ವ. ಆತನ ತಾಯಿ ಭಾರತೀಯಳು, ತಂದೆ ಪಾಕಿಸ್ತಾನಿ. ತಾಯಿ ಸಿಖ್ ಸಮುದಾಯದವಳಾದರೆ ತಂದೆ ಮುಸಲ್ಮಾನ. ಎರಡು ವಿಭಿನ್ನ ಸಮುದಾಯಗಳು, ಎರಡು ವೈರಿ ದೇಶಗಳ ಕುಡಿಯಾದ ಆತೀಶ್ ತನ್ನ ಅಸ್ತಿತ್ವದ ಹುಡುಕಾಟದಲ್ಲಿ ತೊಡಗಿದ್ದ. ಕೊನೆಗೆ ಇಂಗ್ಲೆಂಡಿನಲ್ಲಿ ಪತ್ರಕರ್ತನಾಗಿ ನೆಲೆಸಿದ ಆತೀಶ್ ತನ್ನ ಜೀವನಗಾಥೆಯನ್ನು ಹೇಳುವ ಮೂಲಕ ವಿವಿಧ ದೇಶದ ಮುಸಲ್ಮಾನರಲ್ಲಿ ತಲೆ ಎತ್ತುತ್ತಿರುವ ಮೂಲಭೂತವಾದವನ್ನು ಕುರಿತು **`Stranger to history: A son's journey through Islamic lands'** ಎಂಬ ಪುಸ್ತಕ ಬರೆದ.



ಕೊಲೆಗಡುಕ ಖಾದ್ರಿ ಮತ್ತು ಆತನ ಆರಾಧಕರು

ಆ ಪುಸ್ತಕವನ್ನು ವಿಮರ್ಶಿಸಿದ ಖ್ಯಾತ ಲೇಖಕ ಖುಷ್ವಂತ್ ಸಿಂಗ್ ಅವರು ಹೀಗೆ ಬರೆದಿದ್ದಾರೆ: "ಮುಸಲ್ಮಾನರ ಯುವ ಪೀಳಿಗೆಯೊಂದಿಗಿನ ತನ್ನ ಭೇಟಿಗಳ ಬಗ್ಗೆ ಆತೀಶ್ ನೀಡಿರುವ ಚಿತ್ರ ಜಿಗುಪ್ಸೆಯನ್ನುಂಟುಮಾಡುತ್ತದೆ. ಬ್ರಿಟನ್ನಿನಲ್ಲೇ ಜನಿಸಿದ ಪಾಕಿಸ್ತಾನ ಮೂಲದ ಮುಸಲ್ಮಾನ ಯುವಕರು ಗಡ್ಡವನ್ನು ಬೆಳೆಸಿಕೊಳ್ಳುವ ಮತ್ತು ಟೋಪಿಯನ್ನು ಧರಿಸುವ ಮೂಲಕ ತಮ್ಮ ಅಸ್ತಿತ್ವವನ್ನು ಸಾಬೀತುಮಾಡಲು ಹೊರಟಿದ್ದಾರೆ. ಟರ್ಕಿ ದೇಶದಲ್ಲಿ ಕೆಮಲ್ ಅಟಾತುರ್ಕ್ ತಂದಿದ್ದ ಸುಧಾರಣೆಗಳ ಬಗ್ಗೆ ಪಶ್ಚಾತ್ತಾಪ ಪಡಿಸುವವರು ಎದುರಾಗುತ್ತಾರೆ. ಇಂತಹದ್ದೇ ಪರಿಸ್ಥಿತಿ ಇರಾಕ್ ಮತ್ತು ಸಿರಿಯಾ ದೇಶದಲ್ಲೂ ಇದ್ದು ಅದು ಅಹ್ಮದಿನೆಜಾದ್‌ರ ಇರಾನಿನಲ್ಲಿ ಮತ್ತಷ್ಟು ತೀವ್ರಗೊಂಡಿರುವುದನ್ನು ಆತೀಶ್ ದಾಖಲಿಸುತ್ತಾನೆ. ಸಿಂಧ್ ಪ್ರಾಂತ್ಯದಲ್ಲಿ ಸೂಫಿ ಇಸ್ಲಾಮಿನ ಜಾಗವನ್ನು ವಹಾಬಿ ಮೂಲಭೂತವಾದ ಆಕ್ರಮಿಸುತ್ತಿರುವ ಬಗ್ಗೆ ವ್ಯಥೆ ವ್ಯಕ್ತಪಡಿಸುತ್ತಾನೆ. ಮೆಕ್ಕಾಗೆ ಹೋದಾಗ ತನ್ನ ಕೈ ಮೇಲಿನ ಶಿವನ ಅಚ್ಚೆಯನ್ನೂ, ತನ್ನ ಅಜ್ಜಿ ಕೊಟ್ಟಿದ್ದ ಸಿಖ್ಖರ ಖಡಾವನ್ನೂ ಬಚ್ಚಿಟ್ಟುಕೊಳ್ಳುವ ಪ್ರಯತ್ನದ ಬಗ್ಗೆಯೂ ಆತೀಶ್ ಬರೆದಿದ್ದಾನೆ."

ಈ ಪುಸ್ತಕವೂ ಸೇರಿದಂತೆ ಆತೀಶ್ ಬರೆದಿದ್ದ ಇತರೆ ಲೇಖನಗಳ ಸಾರಾಂಶ: ಹಲವು ಮೂಲಭೂತವಾದಿಗಳಿಂದಾಗಿ ಇಸ್ಲಾಂ ತನ್ನ ಮಾನವತಾವಾದವನ್ನು ಕಳೆದುಕೊಳ್ಳುತ್ತಿದೆ ಎಂಬುದೇ ಆಗಿತ್ತು. ತನ್ನ ತಂದೆ ಸಲ್ಮಾನ್‌ಗೆ ಈ ಬರಹಗಳು ಇಷ್ಟವಾಗುತ್ತದೆ ಎಂದೇ ಆತೀಶ್ ಭಾವಿಸಿದ್ದ. ಅದಕ್ಕೆ ಕಾರಣವೂ ಇತ್ತು.

ಸಲ್ಮಾನ್ ಎಂದೂ ಕಟ್ಟಾ ಮುಸಲ್ಮಾನನಾಗಿರಲಿಲ್ಲ. ಎಂದೂ ಇಸ್ಲಾಮಿನ ಧಾರ್ಮಿಕ ನೀತಿಗಳಾದ ನಮಾಜನ್ನಾಗಲಿ, ಉಪವಾಸವನ್ನಾಗಲಿ ಸಲ್ಮಾನ್ ಪಾಲಿಸುತ್ತಿರಲಿಲ್ಲ. ಬದಲಾಗಿ ದಿನನಿತ್ಯ ಸಲ್ಮಾನ್ ಸ್ಕಾಚ್ ಸೇವಿಸುತ್ತಿದ್ದ. ಆಗಾಗ್ಗೆ ಹಂದಿ ಮಾಂಸವನ್ನು ತಿನ್ನುತ್ತಿದ್ದ. ಧಾರ್ಮಿಕ ಮೌಢ್ಯಗಳನ್ನು ವಿರೋಧಿಸುತ್ತಿದ್ದ. ಇಷ್ಟೆಲ್ಲ ಇದ್ದರೂ ಸಲ್ಮಾನ್‌ನನಿಗೆ ಪಾಕಿಸ್ತಾನ ಒಂದು ಜಾತ್ಯತೀತ ದೇಶ ಎಂಬುದರ ಬಗ್ಗೆ ವಿಶ್ವಾಸವಿತ್ತು.

ಆ ಕಾರಣಕ್ಕಾಗಿಯೇ ತನ್ನ ಪುತ್ರ ಆತೀಶ್, ಯುವ ಪೀಳಿಗೆಯ ಮುಸಲ್ಮಾನರಲ್ಲಿ ಮೂಲಭೂತವಾದ ಹೆಚ್ಚಾಗುತ್ತಿದೆ, ಇದರಿಂದ ಮುಸಲ್ಮಾನ್ ಸಮುದಾಯಕ್ಕೆ ಅಪಾಯವಾಗಲಿದೆ ಎಂದು ಬರೆದದ್ದನ್ನು ಸಲ್ಮಾನ್ ವಿರೋಧಿಸಿದ್ದ. ತನ್ನ ಪುತ್ರನ ವಿರುದ್ಧ ಕೆಂಡ ಕಾರಿದ್ದ. ಪಾಕಿಸ್ತಾನ ಮುಸಲ್ಮಾನ ಮೂಲಭೂತವಾದಿಗಳ ದೇಶವಾಗುವುದಿಲ್ಲ ಎಂದೇ ನಂಬಿದ್ದ ಮಾತ್ರವಲ್ಲ, ತನ್ನ ಪುತ್ರನೇ ಪಾಕಿಸ್ತಾನ ಮತ್ತು ಮುಸಲ್ಮಾನರ ವಿರುದ್ಧ ಪಿತೂರಿ ನಡೆಸುತ್ತಿದ್ದಾನೆ ಎಂದೇ ಸಲ್ಮಾನ್ ಭಾವಿಸಿದ್ದ. ಆದ್ದರಿಂದ ತನ್ನ ಈ ಭಾರತೀಯ ಪುತ್ರನೊಂದಿಗಿನ ಸಂಪರ್ಕವನ್ನು ಮತ್ತೆ ಕಡಿದು ಹಾಕಿದ್ದ.

ಆದರೆ ಯಾವ ಪಾಕಿಸ್ತಾನದ ಬಗ್ಗೆ ಸಲ್ಮಾನ್ ಪ್ರೀತಿ ಹೊಂದಿದ್ದನೊ, ಯಾವ ಇಸ್ಲಾಮಿನ ಮಾನವೀಯತೆ ಬಗ್ಗೆ ವಿಶ್ವಾಸ ಹೊಂದಿದ್ದನೊ, ಅದನ್ನೆಲ್ಲ ಮುಮ್ತಾಜ್ ಖಾದ್ರಿ ಎಂಬ ಅಂಗರಕ್ಷಕ ಸಲ್ಮಾನ್ ತಸೀರ್‌ನ ದೇಹಕ್ಕೆ ಸಿಡಿಸಿದ 29 ಗುಂಡುಗಳೇ ಸುಳ್ಳಾಗಿಸಿದೆ. ಸಲ್ಮಾನ್ ಪುತ್ರ ಆತೀಶ್ ನೀಡಿದ್ದ ಎಚ್ಚರಿಕೆಯೇ ನಿಜವಾಗಿದೆ.

ಪಾಕಿಸ್ತಾನದಲ್ಲಿ ಇವತ್ತು ಸಲ್ಮಾನ್ ತಸೀರ್‌ನ ಕೊಲೆಯನ್ನು ಬಹಳಷ್ಟು ಜನ ಸಂಭ್ರಮಿಸುತ್ತಿದ್ದಾರೆಂದರೆ ಆ ದೇಶ ಎಂತಹ ದುರಂತ ಸ್ಥಿತಿ ತಲುಪಿದೆ ಎಂಬುದನ್ನು ತೋರಿಸುತ್ತದೆ....


ಸತ್ತ ಬಾಲಕ ಅಫ್ಜಲ್

ಹೊನ್ನಾವರ : ಸತ್ತ ಹುಡುಗನ ಸುತ್ತ ಕೋಮು ಹುತ್ತ!

ಉತ್ತರಕನ್ನಡದ ಶಾಂತಿ-ಸೌಹಾರ್ದತೆಯ ನೆಲ ಹೊನ್ನಾವರ ಇತ್ತೀಚಿನ ದಿನಗಳಲ್ಲಿ ಕೋಮು ಕಿತಾಪತಿಗಾರರ ಕಾರಾಸ್ಥಾನದಂತೆ ಆಗುತ್ತಿದೆ. ಮೀನು ತಿನ್ನದ ಬ್ರಾಹ್ಮಣರೆಂಬ 'ಆರೋಪಿತ' ಹೈಗರ ಮತ್ತು ಮೀನು-ಮಾಂಸ ಭಕ್ಷಕ ಬ್ರಾಹ್ಮಣರೆಂಬ 'ಮುಜುಗರ'ದ ಕೊಂಕಣಿ (ಗೌಡ ಸಾರಸ್ವತ ಬ್ರಾಹ್ಮಣ) ಕುಲದ ಒಂದಿಷ್ಟು ಅಡ್ಡ ಕಸುಬಿಗಳು-ಅವಾಂತರಕಾರಿಗಳು ಸೇರಿಕೊಂಡು ಮತಾಂಧ ಮಸಲತ್ತು ಮೇಲಿಂದ ಮೇಲೆ ಮಾಡುತ್ತಿದ್ದಾರೆ. ಈ ಅನಾಹುತಕಾರಿ ಆರೆಸ್ಸೆಸ್ ಪಡೆ ಬುದ್ಧಿಗೇಡಿ ಶೂದ್ರರನ್ನು ಛೂಬಿಟ್ಟು ಸಾಮಾಜಿಕ-ರಾಜಕೀಯ-ಆರ್ಥಿಕ ಮೈಲೇಜು ಪಡೆಯಲು ಹರಾಮಿ ಹಿಂದೂತ್ವದ ಪ್ರಯೋಗ ನಡೆಸುತ್ತಿದ್ದಾರೆ! ಹೊನ್ನಾವರದ ಹಳ್ಳಿಗಳಲ್ಲಿ ಹೈಗರ ಚೆಡ್ಡಿಗಳ ಹಾವಳಿಯಾದರೆ, ನಗರದಲ್ಲಿ ಕೊಂಕಣಿ ಕಾವಿಗಳ ಕೈಚಳಕ ವಿಪರೀತ.

ಕೆಲವು ತಿಂಗಳ ಹಿಂದೆ ಕೊಂಕಣಿಗರ ಹುಡುಗಿಯೊಬ್ಬಳು ಕ್ರಿಶ್ಚಿಯನ್ ಹುಡುಗನ ಮದುವೆಯಾದಾಗ ಸಂಘಪರಿವಾರದ ಸರದಾರರು ಕುಂಡೆ ಸುಟ್ಟ ಬೆಕ್ಕಂತೆ ಬೊಬ್ಬೆ ಹೊಡೆದಿದ್ದರು. ಆದರೆ ಆ ಕ್ರಿಶ್ಚಿಯನ್ ವಿದ್ಯಾರ್ಥಿಯ ತಂದೆ ಜತೆ ನಿಕಟ ಸ್ನೇಹ-ಸಂಬಂಧ ಹೊಂದಿದ್ದ 'ಗೌರವಾನ್ವಿತ' ಕೊಂಕಣಿ ಹಿರಿಯರೇ ಹಿಂದೂತ್ವದ ಭಂಡಾಟಕ್ಕೆ ಬ್ರೇಕ್ ಹಾಕಿದ್ದರು. ಇದು ಮತಾಂಧರಲ್ಲಿ ಹತಾಶೆಯ ಒಳಗುದಿ ಮೂಡಿಸಿತ್ತು. ಹೇಗಾದರೂ ಮಾಡಿ ಹೊನ್ನಾವರದ ನೆಮ್ಮದಿ ಕೆಡಿಸಿ ಆ್ಯಂಟಿ ಹೀರೋ ಆಗುವ ತೆವಲಿನ ಹಠಕ್ಕೆ ಬಿದ್ದಿದ್ದರು. ಕ್ರಿಶ್ಚಿಯನ್-ಕೊಂಕಣಿ ಪ್ರೇಮ ಪರಿಣಯದ ಬೆನ್ನಿಗೆ ಹೊನ್ನಾವರದ ತಾಲ್ಲೂಕಾಫೀಸು ಮತ್ತು ಪೊಲೀಸ್ ಸ್ಟೇಷನ್ ನಡುವೆಯಿರುವ 'ಹೋಲಿ ಕ್ರಾಸ್' ಮೇಲೆ ರಾತ್ರೋರಾತ್ರಿ ದಾಳಿಯಾಗಿತ್ತು. ಹಿಂದೂ-ಮುಸ್ಲಿಂ-ಕ್ರಿಶ್ಚಿಯನ್ನರ ಶ್ರದ್ಧಾ ಕೇಂದ್ರವಿದು. ಇದರ ಮೇಲೆ ಕಲ್ಲೆಸೆದು ಪುಡಿಮಾಡಿದಾಗ ಪಾಪಿ ಸನಾತನಿಗಳ ಸೋಗಲಾಡಿ ಸಂಸ್ಕಾರ ಬಯಲಾಗಿತ್ತೇ ಹೊರತು ಕ್ರಿಶ್ಚಿಯನ್ನರು ಸಂಯಮ ಕಳೆದುಕೊಂಡಿರಲಿಲ್ಲ.

ಈ ಹಿನ್ನಡೆಯ ನಂತರ ಹಿಂದೂತ್ವದ ಹರಿಕಾರರ ಬಣ್ಣ ಬಯಲಾಗಿದ್ದು ಅಕ್ರಮ ಜಾನುವಾರು ಸಾಗಾಣಿಕೆ ತಡೆಯಲು ಮುನ್ನುಗ್ಗಿದ್ದಾಗ. ಸಾಬರು ಮಾತ್ರ ದನ ಸಾಗಿಸುತ್ತಾರೆಂದು ಹುಯಿಲೆಬ್ಬಿಸುತ್ತಿದ್ದ ಈ ಭಜರಂಗಿಗಳ ಕೈಗೆ ಸಿಕ್ಕಿಬಿದ್ದಾತ 'ಶುದ್ಧ-ಮರ್ಯಾದಸ್ಥ ಬಿಜೆಪಿ ಮುಖಂಡ ಎಂ. ಆರ್. ಹೆಗಡೆ ಎಂಬ ಬ್ರಾಹ್ಮಣ ಭೂಪ! ಆಗಲೂ ಒಂದಿಷ್ಟು ರಂಪ-ರಾದ್ಧಾಂತ ಆಯಿತ್ತಾದರೂ ಅಸಲಿ ಅವತಾರ ಅನಾವರಣವಾಗಿದ್ದು ಸಂಘಪರಿವಾರದ್ದೇ! ಈ ಹೆಗಡೆ ಜಾನುವಾರುಗಳನ್ನು ಸಾಬರಿಗೆ ಕಳ್ಳ ಸಾಗಣಿಕೆ ಮಾಡಿಯೇ ಲಕ್ಷ-ಲಕ್ಷ ಸಂಪಾದಿಸಿರುವಾತ. ಇದು ಗೊತ್ತಿದ್ದೂ ಬಿಜೆಪಿಯ ದೊಡ್ಡ ದೊಡ್ಡ ನಾಯಕರು ಈತನಿಗೆ ಸಪೋರ್ಟ್ ಮಾಡಿ ಪೊಲೀಸರನ್ನಷ್ಟೇ ಅಲ್ಲ ಸ್ವ-ಪಕ್ಷದ ಜಿಲ್ಲಾ ಮಂತ್ರಿ ಕಾಗೇರಿಯನ್ನೇ 'ಹೇತ್ಲಾಂಡಿ' ಎಂದು ಜರೆದಿದ್ದರು.


ಧ್ವಂಸಗೊಂಡ ಶಾಲೆ....

ಈಗ ನಗರದ ಪ್ರತಿಷ್ಠಿತ ನ್ಯೂ ಇಂಗ್ಲಿಷ್ ಹೈಸ್ಕೂಲ್‌ನಲ್ಲಿ ಮುಸ್ಲಿಂ ವಿದ್ಯಾರ್ಥಿಯೊಬ್ಬ ಅಸುನೀಗಿದ್ದು ಮತ್ತು ಮುಸ್ಲಿಮರು ದುಃಖಾಕ್ರೋಶದಿಂದ ಮಾಡಿದ ದಾಂಧಲೆಯನ್ನೇ ಬಂಡವಾಳ ಮಾಡಿಕೊಂಡು 'ತಮ್ಮತನ' ತೋರಿಸಲು ಹಿಂದೂ ಪುಂಡರು ಪುಂಗಿಯೂದುತ್ತಿದ್ದಾರೆ. ಎದೆಯೆತ್ತರಕ್ಕೆ ಬೆಳೆದ ಮಗನನ್ನು ಕಳೆದುಕೊಂಡ ಹೆತ್ತವರ ನಿರಂತರ ಶೋಕ-ಸಂಕಟಕ್ಕಿಂತಲೂ ಹಿಂದೂತ್ವದ (ಕೊಂಕಣಿಗರ) ಹುಚ್ಚು ಪ್ರತಿಷ್ಠೆಯೇ ಸದ್ದು-ಸುದ್ದಿ ಮಾಡುತ್ತಿರುವುದು ಅಮಾನುಷವಾಗಿದೆ. ಈ ಲಜ್ಜೆಗೇಡಿ ವಿಪರ್ಯಾಸದ ಕೋಮು ಆಯಾಮ ನೋಡುವ ಮೊದಲು ನ್ಯೂ ಇಂಗ್ಲಿಷ್ ಸ್ಕೂಲ್‌ನ 'ಇತಿಹಾಸ'ವನ್ನೊಮ್ಮೆ ಅವಲೋಕಿಸಲೇಬೇಕು!

ಕೊಂಕಣಿಗರ ಶಾಲೆ

ಹೊನ್ನಾವರದ ನ್ಯೂ ಇಂಗ್ಲಿಷ್ ಸ್ಕೂಲ್ ನಗರದ ವ್ಯಾಪಾರ-ವಹಿವಾಟು -ವಾಣಿಜ್ಯವನ್ನು ಏಕಸ್ವಾಮ್ಯಕ್ಕೆ ಒಳಪಡಿಸಿಕೊಂಡಿರುವ ಕೊಂಕಣಿ ಬ್ರಾಹ್ಮಣ ಪ್ರತಿಷ್ಠೆಯ 'ಸಂಕೇತ'ಗಳಲ್ಲಿ ಒಂದು! ನಗರದಲ್ಲಿ ಕ್ರಿಶ್ಚಿಯನ್ ಮಿಷನರಿಗಳು ಮತ್ತು ಕ್ಯಾಥೋಲಿಕ್‌ಗಳು ನಡೆಸುವ ಶಾಲೆ-ಹೈಸ್ಕೂಲ್‌ಗಳಲ್ಲಿ ಕೊಂಕಣಿಗರ (ನಾನ್ ಮೈನಾರಿಟಿಗಳ) ಏಕೈಕ ಶಾಲೆಯಿದು. ಕೊಂಕಣಿಗರದು ವರ್ತಕ ವರ್ಗ. ಪುರಾತನ ಕನ್ನಡ ಮಾಧ್ಯಮ ಹೈಸ್ಕೂಲ್ ನಡೆಸಿಕೊಂಡು ಬರುವುದರ ಜೊತೆಗೆ ಡೊನೇಷನ್ ಇಂಗ್ಲಿಷ್ ಮೀಡಿಯಮ್ ಸ್ಕೂಲೂ ಈ ಕೊಂಕಣಿಗರು ಶುರುಮಾಡಿದ್ದಾರೆ. ಕೊಂಕಣಿ ಕುಲದ ಪ್ರತಿಷ್ಠಿತ ವರ್ತಕರು-ಲಾಯರ್ ಈ ಶಾಲೆಯ ಆಡಳಿತ ಮಂಡಳಿಯಲ್ಲಿದ್ದಾರೆ.

ಎಲ್ಲ ಜಾತಿ-ಧರ್ಮದವರು ಇಲ್ಲಿ ಕಲಿಯುತ್ತಾರಾದರೂ 'ಹಾಮ್ಗೆಲೆ' ಮಂದಿಗೆ-ವಿದ್ಯಾರ್ಥಿಗಳಿಗೆ ಅವಕಾಶ ಜಾಸ್ತಿ ಎಷ್ಟು ಜಾಸ್ತಿಯೆಂದರೆ, ಪ್ರತಿಭಾನ್ವಿತ ಇತರ ಜಾತಿ ವಿದ್ಯಾರ್ಥಿಗಿಂತ ದಡ್ಡ ಕೊಂಕಣಿಗರಿಗೇ ಪ್ರಾಶಸ್ತ್ಯ ಜಾಸ್ತಿ ಎಂಬುದು ಟಾಕ್ ಆಫ್ ದಿ ಟೌನ್. ಪ್ರಸಿದ್ಧ ಚಿತ್ರನಟ ಅನಂತ್‌ನಾಗ್ ತಮ್ಮ ಶಾಲೆಯ ಸ್ಟೂಡೆಂಟ್ ಎಂದು ಬೀಗುವ ಆಡಳಿತಗಾರರು ತಾರತಮ್ಯ, ಡೊನೇಷನ್, ಶಿಕ್ಷಕರ ನಡುವಿನ ಗುಂಪುಗಾರಿಕೆ, ವಿಚಿತ್ರ ಶಿಕ್ಷೆ ಕೊಡುವ ಪದ್ಧತಿಯಿಂದ ನ್ಯೂ ಇಂಗ್ಲಿಷ್ ಸ್ಕೂಲನ್ನು ಸುಪ್ರಸಿದ್ಧಗೊಳಿಸಿಬಿಟ್ಟಿದ್ದಾರೆ.

ಇಲ್ಲಿಯ ಹೆಡ್‌ಮಾಸ್ಟರ್ ಜೆ.ಟಿ.ಹೆಬ್ಬಾರ್ ರಾಷ್ಟ್ರ ಪ್ರಶಸ್ತಿ ವಿಜೇತ. ಹೊಣೆಗೇಡಿತನಕ್ಕಾಗಿ ಹಿಂದೊಮ್ಮೆ ಅಮಾನತ್ತೂ ಆಗಿದ್ದವ. ಒಣ ಗತ್ತಿನ ಹವ್ಯಕ ಹೆಬ್ಬಾರ್‌ನ ಕಂಡರೆ ಇತರ ಶಿಕ್ಷಕರಿಗೆ ಮತ್ತು ಪರಂಪರಾಗತ ಹೈಗರ ಎದುರಾಳಿಗಳಾದ ಕೊಂಕಣಿಗರ ಆಡಳಿತ ಮಂಡಳಿಗೆ ಅಷ್ಟಕ್ಕಷ್ಟೇ.

ಶಿಕ್ಷಕರ ನಡುವಿನ ಶೀತಲಸಮರ ಶಾಲೆಯ ಶಿಸ್ತು ಕೆಡಿಸಿಬಿಟ್ಟಿದೆ. ಕೆಲವು ಶಿಕ್ಷಕರು ಕಠೋರವಾಗಿ ವಿದ್ಯಾರ್ಥಿಗಳನ್ನು ದಂಡಿಸುತ್ತಾರೆಂಬ ಆರೋಪವೂ ಇದೆ. ಹಿಂದೊಮ್ಮೆ ಬಡಕೊಂಕಣಿ ವಿದ್ಯಾರ್ಥಿಯೊಬ್ಬ ಗುರುಗಳು ಬೈದರೆಂದು ಶರಾವತಿ ನದಿಗೆ ಹಾರಿದಾಗ ಈ ಶಾಲೆ ಪ್ರಸಿದ್ಧವಾಗಿತ್ತು. ಕಳೆದ ವರ್ಷ ದೈಹಿಕವಾಗಿ ಅಸಮರ್ಥನಾಗಿದ್ದ ವಿದ್ಯಾರ್ಥಿಯೊಬ್ಬನನ್ನು ಕ್ರೀಡಾಕೂಟಕ್ಕೆ ಕಳಿಸಿದಾಗ ಆತ ಮೈದಾನದಲ್ಲೇ ಬಿದ್ದು ಸತ್ತು ಹೋಗಿದ್ದಾಗ ಈ ಶಾಲೆ ಸುದ್ದಿಯಾಗಿತ್ತು. ಹಾಗೆಯೇ ಪ್ರವಾಸಕ್ಕೆಂದು ವಿದ್ಯಾರ್ಥಿಗಳೊಂದಿಗೆ ಹೋಗಿದ್ದ ಶಿಕ್ಷಕಿಗೆ ಟೆಂಪೋ ಡ್ರೈವರ್ ಡ್ರೈವಿಂಗ್ ಕಲಿಸಿದ್ದನೆಂದು ಗುಲ್ಲೆದ್ದಿತ್ತು. ಹಾಗೆಯೇ ಈ ಶಾಲೆಯಲ್ಲಿ ಕಲಿತು ದೊಡ್ಡ-ದೊಡ್ಡ ಹುದ್ದೆಗೇರಿದ, ಪ್ರಸಿದ್ಧಿ ಪಡೆದ ಕೀರ್ತಿವಂತರೂ ರಾಷ್ಟ್ರ-ರಾಜ್ಯ-ಅಂತರರಾಷ್ಟ್ರ ಮಟ್ಟದಲ್ಲಿದ್ದಾರೆ.


ಶಾಲೆ ವಿರುದ್ಧ ಪ್ರತಿಭಟನೆ.....

ಇಂಥ ಶಾಲೆ ಇತ್ತೀಚಿನ ದಿನಗಳಲ್ಲಿ ಅಪಖ್ಯಾತಿ-ಅನಾಹುತಕ್ಕೆ ತುತ್ತಾಗುತ್ತಲೇ ಇದೆ. ಅದಕ್ಕೆ ಮುಖ್ಯ ಕಾರಣ-ಆಡಳಿತ ಮಂಡಳಿಯ ಮಿಸ್ ಮ್ಯಾನೇಜ್‌ಮೆಂಟ್-ಉದಾಸಿನ- ಒಣಪ್ರತಿಷ್ಠೆ, ಜಾತಿ, ದೊಡ್ಡಸ್ತನ ಪ್ರದರ್ಶನಕ್ಕೆ ಈ ಸಂಸ್ಥೆ ವರ್ತಕ ಮಹಾಶಯರಿಗೆ ಬೇಕೇ ಹೊರತು ಅದರ ಆಗು-ಹೋಗುಗಳ ಬಗ್ಗೆ ತಲೆಕೆಡಿಸಿಕೊಳ್ಳಲು ಪುರುಸೊತ್ತು ಮಾತ್ರ ಇಲ್ಲ. ದಿನದ ಇಪ್ಪತ್ತ ನಾಲ್ಕು ತಾಸು ಲಾಭಕೋರ ದಂಧೆಯಲ್ಲೇ ಕಳೆಯುವ ಬಿಸಿನೆಸ್‌ಮನ್‌ಗಳಿಗೆ ಶಿಕ್ಷಣವೂ ಒಂದು ದುಡ್ಡು ದೋಚುವ ವ್ಯಾಪಾರಿ ಸರಕಷ್ಟೇ!

ಇದೆಲ್ಲದರ ಅಡ್ಡಪರಿಣಾಮ ಒಂದು ಕಾಲದಲ್ಲಿ ಅಕಾಡೆಮಿಕ್ ಪರಿಸರಕ್ಕೆ ಪ್ರಸಿದ್ಧವಾಗಿದ್ದ ನ್ಯೂ ಇಂಗ್ಲಿಷ್ ಸ್ಕೂಲ್ ಮೇಲಾಗುತ್ತಿದೆ. ಸರಸ್ವತಿ ಮತ್ತು ಲಕ್ಷ್ಮೀ ಒಂದೇ ಕಡೆಗಿರಲು ಸಾಧ್ಯವೇ? ಹಾಗಂತ ಈ ಶಾಲೆಯ ಭಾನ್ಗಡಿ ಬಲ್ಲವರು ಬೇಸರದಿಂದ ಹೇಳುತ್ತಾರೆ.

ಅಫ್ಜಲ್ ಅವಸಾನ

ದಡ್ಡ ಮತ್ತು ಅಶಿಸ್ತಿನ ವಿದ್ಯಾರ್ಥಿಗಳಿಗೆ ದೈಹಿಕವಾಗಿ ದಂಡಿಸುತ್ತಾರೆಯೇ ಹೊರತು ಮಾನಸಿಕವಾಗಿ ತಿದ್ದುವುದಿಲ್ಲ ಎಂಬುದು ಈ ಶಾಲೆಯ ಬಗ್ಗೆ ಇರುವ ಸಾರ್ವತ್ರಿಕ ಅಳಲು. ಉದ್ಧಟರಿಗೆ, ಶಾಲೆಗೆ ಲೇಟಾಗಿ ಬರುವವರಿಗೆ, ಯೂನಿಫಾರ್ಮ್ ತೊಡದವರಿಗೆ ಶಾಲೆಯ ದೊಡ್ಡ ಮೈದಾನದಲ್ಲಿ ಐದೈದು ಸುತ್ತು ಜೋರಾಗಿ ಓಡುವ 'ನಿಯಮ' ಹೆಡ್‌ಮಾಸ್ಟರ್ ಹೆಬ್ಬಾರ್ ಸರ್ ರೂಪಿಸಿದ್ದಾರೆ. ರಾಷ್ಟ್ರ ಪ್ರಶಸ್ತಿ ವಿಜೇತ ಗುರುಗಳ ಶಿಸ್ತಿನ ಪದ್ಧತಿಯಿದು! ವಿದ್ಯಾರ್ಥಿಗಳು ಓಡುವಾಗ ಸುಸ್ತಾದರೂ ಬಿಡದೆ ಬೆದರಿಸಿ ಓಡಿಸುತ್ತಾರೆ ಹೆಡ್‌ಮಾಸ್ಟರ್ ಮತ್ತು ದೈಹಿಕ ಶಿಕ್ಷಕ ನಾಯ್ಕ!

ಇಂಥದೊಂದು ಶಿಕ್ಷೆಗೆ ಕಾಸರಗೋಡು ಟೊಂಕದ ಮಲಬಾರಿ ಮುಸ್ಲಿಂ ಮನೆಯ ಹುಡುಗ ಅಫ್ಜಲ್ ಹಮ್ಜಾ ಸಾಬ್ ಪಟೇಲ್ ಎಂಬಾತ ಮೊನ್ನೆ ಸೋಮವಾರ (10-1-11) ಶಾಲೆ ಶುರುವಾಗುವ ಹೊತ್ತಿಗೇ ಬಲಿಯಾಗಿದ್ದಾನೆ. ಇದೊಂದು ಅನುದ್ದೇಶಿತ ಅಚಾತುರ್ಯವೇನೋ ನಿಜ. ಆದರೆ ರಾಷ್ಟ್ರಪ್ರಶಸ್ತಿ ವಿಜೇತ ಹೆಡ್‌ಮಾಸ್ಟರ್ ಮತ್ತು ನಿವೃತ್ತಿಯ ಅಂಚಲ್ಲಿರುವ ದೈಹಿಕ ಶಿಕ್ಷಕನಂಥವರಿಗೂ ಸೂಕ್ಷ್ಮತೆ, ಕೌನ್ಸೆಲಿಂಗ್ ಚಾಕಚಕ್ಯತೆ, ಶಿಕ್ಷಕ ವೃತ್ತಿಯ ಮೂಲಭೂತ ಆಶಯವೇ ಗೊತ್ತಿಲ್ಲದಿದ್ದರೆ ಅದೆಂಥ ಅನಾಹುತ ಆದೀತೆಂಬುದಕ್ಕೆ ನತದೃಷ್ಟ ಅಫ್ಜಲ್ ಶಾಲೆಯ ಅಂಗಳದಲ್ಲೇ ಬಿದ್ದು ಸತ್ತುಹೋಗಿರುವುದು ಸಾಕ್ಷಿಯಂತಿದೆ.

ಅಫ್ಜಲ್ ತುಂಬ ಅಶಿಸ್ತಿನ, ರೆಗ್ಯುಲರ್ ಅಲ್ಲದ, ಒಂಥರ ಉದ್ಧಟ ವಿದ್ಯಾರ್ಥಿಯಾಗಿದ್ದ. ಇದಕ್ಕೆ ಆತನ ಸಾಮಾಜಿಕ-

▶▶ 6


ಶಿಕ್ಷಕರಿಗೊಂದು ಪಾಠ!

ಎಳೆಯ ಮನಸ್ಸುಗಳಿಗೆ ಘಾಸಿಯಾಗದಂತ ದಂಡನೆ-ತನಿಖೆ-ಅಪಮಾನಕ ಮಾತುಗಳ ಬಿಟ್ಟು ಪ್ರೀತಿಯ ಆಪ್ತ ಸಲಹೆಗಳಿಂದ ವಿದ್ಯಾರ್ಥಿಗಳನ್ನು ತಿದ್ದಲು ಶಿಕ್ಷಕರಿಂದ ಸಾಧ್ಯವಿಲ್ಲವಾ? ಆಧುನಿಕ ವಿದ್ಯಾರ್ಥಿ/ನಿಯರು ಅಷ್ಟು ಉದ್ಧಟರಾಗಿರುತ್ತಾರಾ? ಅಥವಾ ಮಾಡರ್ನ್ ಮಾಸ್ತರ್‌ಗಳೇ ಮಾನವೀಯ ಸಂವೇದನೆಗಳಿಲ್ಲದ, ವಿದ್ಯಾರ್ಥಿಗಳನ್ನು ಸ್ಥೂಲವಾಗಿ ಅರಿಯದ ಭಾವಶೂನ್ಯರಾಗಿದ್ದಾರಾ? ಇಂಥ ಗಂಭೀರ ಪ್ರಶ್ನೆಗಳನ್ನು ಅಲ್ಲಲ್ಲಿ ವಿದ್ಯಾರ್ಥಿಗಳ ಮೇಲೆ ಶಿಕ್ಷಕರು ಮಾಡುತ್ತಿರುವ ಹಲ್ಲೆ-ಸಾವು-ನೋವು ಹುಟ್ಟುಹಾಕಿದೆ. ವೈಪರೀತ್ಯ ನೋಡಿ, ಶಾಲಾಮಕ್ಕಳಿಗೆ ದೈಹಿಕ-ಮಾನಸಿಕ ಹಿಂಸೆ ಕೊಡಬಾರದೆಂದು ಸರ್ಕಾರಿ ಸುತ್ತೋಲೆ ಹೊರಟ 15 ದಿನಗಳಲ್ಲೇ ಹೊನ್ನಾವರದ ವಿದ್ಯಾರ್ಥಿ ಅಫ್ಜಲ್ ಪಟೇಲ್ ಶಿಕ್ಷಕರ ಶಿಕ್ಷೆಗೆ ಬಲಿಯಾಗಿದ್ದಾನೆ. ಆ ನಂತರ ದೊಡ್ಡ ದೊಂಬಿ, ಶಿಕ್ಷಕರಿಗೆ, ಧರ್ಮದೇಟು, ಕೋಮು ಕಿತಾಪತಿಯೆಲ್ಲ ನಡೆದು ಸಾಮಾಜಿಕ-ಶೈಕ್ಷಣಿಕ ಪರಿಸರ ಅಯೋಮಯವಾಗಿದೆ.

ಇದು ಶಿಕ್ಷಕರಿಗೊಂದು ಪಾಠವಾಗಬೇಕು! ಮಕ್ಕಳಿಗೆ ಶಿಕ್ಷಣ ಕೊಡುವುದೊಂದೇ ಶಿಕ್ಷಕರ ಡ್ಯೂಟಿಯಲ್ಲ, ಶಿಸ್ತು-ಸಂಯಮ-ಸಂವೇದನೆ-ಮಾನವೀಯತೆಯನ್ನೂ ಕಲಿಸಬೇಕು. ಈ ನಿಟ್ಟಿನಲ್ಲಿ ಶಿಕ್ಷಕ/ಕಿಯ ಪ್ರತಿಯೊಂದು ವರ್ತನೆಯೂ ವಿದ್ಯಾರ್ಥಿ ಭವಿಷ್ಯದ ಮೇಲೆ ಪರಿಣಾಮ ಬೀರುತ್ತದೆ. ಹಾಗಾಗಿ ಶಿಕ್ಷಕ ಪ್ರತಿ ವಿದ್ಯಾರ್ಥಿಯ ಕೌಟುಂಬಿಕ-ದೈಹಿಕ-ಮಾನಸಿಕ-ಸಾಮಾಜಿಕ ಸ್ಥಿತಿಗತಿ ಅರಿಯದೇ ಬೇಕಾಬಿಟ್ಟಿಯಾಗಿ ತಿದ್ದುವ ಕೆಲಸ ಮಾಡಬಾರದು. ಇದು ಆಪ್ತ ಸಲಹೆ (ಕೌನ್ಸೆಲಿಂಗ್) ಬಿಟ್ಟು ಕಠಿಣ ಮಾರ್ಗ ಅನುಸರಿಸಿದರೆ ಹೊನ್ನಾವರದಲ್ಲಾದಂಥ ವಿದ್ಯಾರ್ಥಿ ಬಲಿ ಆಗುತ್ತದಷ್ಟೇ. ಅದು ಉದ್ದೇಶಪೂರ್ವಕ ಅಲ್ಲದಿರಬಹುದು; ಆದರೆ ಅನಾಹುತಕಾರಿ ನಿಜ.

ಶಿಕ್ಷಕರಿಗೆ ಕಡಿಮೆ ವೇತನ, ಹೆಚ್ಚು ವಿದ್ಯಾರ್ಥಿಗಳು, ಆಡಳಿತಮಂಡಳಿ-ಸರ್ಕಾರ ಹೊರಿಸುವ ಇತರ ಕೆಲಸಗಳು, ಕೊಡುವ ಕಿರುಕುಳದಂಥ ಅನೇಕ ಒತ್ತಡ-ಸಮಸ್ಯೆಗಳಿರಬಹುದು. ಶಿಕ್ಷಕ-ಶಿಕ್ಷಕಿಯರಿಗೆ ವೈಯಕ್ತಿಕ ತೊಂದರೆ-ತಾಪತ್ರಗಳೂ ಇರಬಹುದು. ಇದೆಲ್ಲ ಮೀರಿದ ವ್ಯಕ್ತಿತ್ವ ಶಿಕ್ಷಕ/ಶಿಕ್ಷಕಿಯರಲ್ಲಿರಬೇಕು. ಮಾಸ್ತರರ ಗೊಂದಲಗಳು ವಿದ್ಯಾರ್ಥಿ ಮೇಲೆ ದುಷ್ಪರಿಣಾಮ ಬೀರುವಂತಾಗಬಾರದು; ಶಿಕ್ಷಕರು ತಾಳ್ಮೆ ಕಳಕೊಂಡರೆ, ಸೂಕ್ಷ್ಮತೆ ಇಲ್ಲದಿದ್ದರೆ ಎಳೆಯ ಮನಸ್ಸಿನ ಮೇಲಾಗುವ ಪರಿಣಾಮ ಅಥವಾ ಪ್ರಾಣಹಾನಿ ಘಟನೆ ಘೋರವಾದುದಾಗುತ್ತದೆ. ಹುಂಬತನ ಮಾಸ್ತರಿಗೆ ತರವಲ್ಲ.

ವಿದ್ಯಾರ್ಥಿಗಳೊಂದಿಗೆ ವ್ಯವಹರಿಸುವ ಅರಿವು ಶಿಕ್ಷಕರಲ್ಲಿ ಮೂಡಿಸುವ ಅಗತ್ಯ ಶಿಕ್ಷಣ ಇಲಾಖೆ-ಶಿಕ್ಷಣ ತಜ್ಞರಿಗೆ ಇನ್ನೂ ಅರ್ಥವಾಗದಿರುವುದು ವಿಚಿತ್ರ. ಬೇಡವಾದ ಟ್ರೈನಿಂಗ್-ಕೋಚಿಂಗ್‌ಗೆ ಶಿಕ್ಷಕರನ್ನು ಲಕ್ಷಲಕ್ಷ ವ್ಯಯಿಸಿ ಕಳಿಸಿಕೊಡುವ ಶಿಕ್ಷಣ ಇಲಾಖೆ ಶಿಕ್ಷಕರಿಗೆ 'ಕೌನ್ಸೆಲಿಂಗ್' ನೀಡಬೇಕಾದ ಜರೂರತ್ತಿದೆ. ಮಕ್ಕಳಿಗೆ 'ಆಪ್ತ ಸಲಹೆ' ಬೇಕಾಗಿರುವಂತೆಯೇ ಶಿಕ್ಷಕ/ಶಿಕ್ಷಕಿಯರಿಗೂ 'ಕೌನ್ಸೆಲಿಂಗ್' ವರ್ತಮಾನದ ಅನಿವಾರ್ಯ!




ನ್ಯಾಯಮೂರ್ತಿ ಬಾಲಕೃಷ್ಣನ್‌ರ ಭ್ರಷ್ಟಾಚಾರ!

• ಸಂತೋಷ್ ಬಾಗಿಲಗದ್ದೆ

ಊಹ್ಞುಂ, ಪ್ರಶ್ನೆ ಮಾಡಕೂಡದು......

ನ್ಯಾಯಾಂಗದ ಬಗ್ಗೆ ಗುಮಾನಿ ಹೊಗೆಯಾಡಿ ಆಕ್ರೋಶದ ಬೆಂಕಿ ಹೊತ್ತಿಕೊಂಡಾಗಲೆಲ್ಲಾ ಮೇಲ್ಕಂಡ ಕಟ್ಟಾಜ್ಞೆಯ ಮೂಲಕವೇ ಅದನ್ನ ಹತ್ತಿಕ್ಕಲಾಗುತ್ತದೆ. ಇದಕ್ಕೆ ಅದೆಷ್ಟೋ ಸತ್ಯಗಳು ಬಲಿ ಬಿದ್ದಿರುವುದು ಸತ್ಯ. ಇದೆಲ್ಲವನ್ನು ಮೀರಿ ಹುಂಬತನ ಪ್ರದರ್ಶಿಸಿದರೆ ನ್ಯಾಯಾಂಗ ನಿಂದನೆಯ ಚಾಟಿ ಬೀಸಿ ಬಾಯ್ಮುಚ್ಚಿಸಲಾಗುತ್ತದೆ. ಆದರೆ ಇತ್ತೀಚೆಗೆ ನ್ಯಾಯಾಂಗದೊಳಗಿನ ಹುಳುಕುಗಳು ತಾನೇತಾನಾಗಿ ಹೊರಬರುತ್ತಿವೆ. ಇವು ನ್ಯಾಯ ಹೇಳುವವರನ್ನೇ ಕಟಕಟೆಯಲ್ಲಿ ನಿಲ್ಲಿಸುತ್ತಿರುವುದು ವಿಪರ್ಯಾಸ. ಸದ್ಯ ಸುಪ್ರೀಂಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಕೆ.ಜಿ. ಬಾಲಕೃಷ್ಣನ್ ಅಂತಹುದೇ ಕಟಕಟೆಯಲ್ಲಿದ್ದಾರೆ.

ಪ್ರಸ್ತುತ ರಾಷ್ಟ್ರೀಯ ಮಾನವಹಕ್ಕು ಆಯೋಗದ ಅಧ್ಯಕ್ಷರಾಗಿರುವ ಬಾಲಕೃಷ್ಣನ್ ಈ ರೀತಿ ಬಣ್ಣ ಬದಲಿಸುತ್ತಾರೆಂದು ಯಾರೂ ಅಂದುಕೊಂಡಿರಲಿಕ್ಕಿಲ್ಲ. ಯಾಕೆಂದರೆ ಈತ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಹುದ್ದೆಗೇರಿದ ದೇಶದ ಮೊಟ್ಟಮೊದಲ ದಲಿತ ಎಂಬ ಕೀರ್ತಿಗೆ ಪಾತ್ರರಾಗಿದ್ದರು. ದೇಶದ ಬಹುತೇಕ ದಮನಿತರು ಇದು ತಮ್ಮದೇ ಸಾಧನೆ ಅಂತ ಹಿಗ್ಗಿದ್ದೂ ಹೌದು. ಜನಪರ ನಿಲುವಿನ ಅನೇಕರೂ ಇದನ್ನು ಸಂಭ್ರಮಿಸಿದ್ದರು. ಆದರೀಗ ಅದೆಲ್ಲ ಅದಲುಬದಲಾಗಿದೆ.




ಸೋನಿ-ಶ್ರೀನಿಜನ್

ಬಾಲಕೃಷ್ಣನ್ ನೆರಳಲ್ಲಿ ನಡೆದಿರುವ ವಂಚನೆಗಳೇ ಅಂಥಾದ್ದು!

ಈ ಮನುಷ್ಯ ಜನವರಿ 14, 2007 ರಿಂದ ಮೇ 12, 2010 ರವರೆಗೆ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಕಾರ್ಯನಿರ್ವಹಿಸಿದ್ದರು. ಬಂದ ಹೊಸತರಲ್ಲಿ ಕೆಲವಾರು ಪ್ರಮುಖ ತೀರ್ಪು ಕೊಟ್ಟಿದ್ದು ನಿಜ. ಆದರೆ ಬಾಲಕೃಷ್ಣನ್ ಅಂಥ ತೀರ್ಪುಗಳಿಂದ ಪ್ರಚಾರ ಪಡೆದುದಕ್ಕಿಂತ ಹೆಚ್ಚಾಗಿ ಭ್ರಷ್ಟರ ಪರ ವಕಾಲತ್ತು ವಹಿಸಿ ಸುದ್ದಿಗೆ ಗ್ರಾಸವಾದದ್ದೇ ಹೆಚ್ಚು.

ಶೈಲೇಂದ್ರ ಕುಮಾರ್ ಎಂಬ ಜನಪರ ನ್ಯಾಯಮೂರ್ತಿ ಸ್ವಯಂ ಇಚ್ಛೆಯಿಂದ ತಮ್ಮ ಆಸ್ತಿ ವಿವರ ಬಹಿರಂಗಪಡಿಸಿದ್ದರು. ಜೊತೆಗೆ ಪ್ರತೀ ನ್ಯಾಯಾಧೀಶರುಗಳೂ ತಂತಮ್ಮ ಆಸ್ತಿ ವಿವರ ಬಹಿರಂಗಪಡಿಸುವುದು ಅವಶ್ಯವಿದೆ ಅಂತಲೂ ಪ್ರತಿಪಾದಿಸಿದ್ದರು. ಇಡೀ ದೇಶ ಅಂತಿಮವಾಗಿ ನ್ಯಾಯಾಂಗದ ಬಗ್ಗೆ ಅಪಾರ ಗೌರವ, ನಂಬುಗೆ ಇಟ್ಟುಕೊಂಡಿದೆ. ಅಂಥ ಸ್ಥಿತಿಯಿಂದಲೇ ಶೈಲೇಂದ್ರ ಕುಮಾರ್‌ರ ಪಾರದರ್ಶಕ ನಿಲುವಿಗೆ ದೇಶಾದ್ಯಂತ ಮೆಚ್ಚುಗೆಗಳ ಮಹಾಪೂರವೇ ಹರಿದುಬಂದಿತ್ತು. ಪ್ರತೀ ನ್ಯಾಯಾಧೀಶನೂ ತನ್ನ ಆಸ್ತಿ ವಿವರ ಬಹಿರಂಗಪಡಿಸಬೇಕೆಂಬ ಅವರ ಒತ್ತಾಸೆಗೂ ಸಾರ್ವತ್ರಿಕ ಬೆಂಬಲ ವ್ಯಕ್ತವಾಗಿತ್ತು. ಆದರೆ ಒಬ್ಬ ಜವಾಬ್ದಾರಿಯುತ ಮನುಷ್ಯ ಮಾತ್ರ ಅದನ್ನು ವಿಪರೀತ ವಿರೋಧಿಸಿ ಶೈಲೇಂದ್ರ ಕುಮಾರ್ ಪ್ರಚಾರಪ್ರಿಯ ಅಂತೆಲ್ಲ ಹುಯಿಲೆಬ್ಬಿಸಿದ್ದರು. ಆತ ಕೆ.ಜಿ. ಬಾಲಕೃಷ್ಣನ್!



ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿ ದಿನಕರನ್ ಭೂಹಗರಣದಲ್ಲಿ ಸಿಲುಕಿಕೊಂಡಿದ್ದರಲ್ಲಾ? ಆಗ ಇಡೀ ದೇಶವೇ ಅಸಹ್ಯಪಟ್ಟುಕೊಂಡಿತ್ತು. ಅಂಥಾ ದಿನಕರ್‌ರನ್ನು ಸುಪ್ರೀಂಕೋರ್ಟ್‌ಗೆ ಸೆಳೆದುಕೊಳ್ಳಲೂ ಸಹ ಒಂದು ಪ್ರಬೃತ್ತಿ ಶತಾಯಗತಾಯ ಪ್ರಯತ್ನಿಸಿ ನ್ಯಾಯಾಂಗದ ಭಾಗವಾಗಿರುವವರ ಕಡೆಯಿಂದಲೇ ತೀವ್ರ ವಿರೋಧ ಎದುರಿಸಿತ್ತು. ನೋ ಡೌಟ್, ಅದು ಕೂಡಾ ಇದೇ ಬಾಲಕೃಷ್ಣನ್!

ಬಾಲಕೃಷ್ಣನ್‌ರ ಇಂಥ ಚಟುವಟಿಕೆಗಳಿಂದ ಈ ನೆಲದ ಪ್ರಜ್ಞಾವಂತರನೇಕರೊಳಗೆ 'ಈ ಆಸಾಮಿಗೆ ಭ್ರಷ್ಟರ ಮೇಲೆ ಏಕಿಂತಾ ಪ್ರೀತಿ' ಅಂತೊಂದು ಕುತೂಹಲ, ಗುಮಾನಿಗಳ ಪ್ರಶ್ನೆ ಹುಟ್ಟಿಕೊಂಡಿತ್ತು. ಆದಕ್ಕೀಗ ಯಾವುದೇ ಗೊಂದಲಕ್ಕೆ ಅವಕಾಶವಿಲ್ಲದಂತೆ ಉತ್ತರ ಸಿಕ್ಕಿದೆ. ಬಾಲಕೃಷ್ಣನ್ ಹಾಗೆ ಭ್ರಷ್ಟರ ಪರ ವಕಾಲತ್ತು ವಹಿಸಿಕೊಳ್ಳುವ ಘಳಿಗೆಯಲ್ಲೇ ತಾವೂ ಸಹ ಅಖಂಡ ಭ್ರಷ್ಟಾಚಾರಕ್ಕೆ ಚಾಲನೆ ನೀಡಿದ್ದರು ಮತ್ತು ಅವರ ಮಕ್ಕಳು, ಅಳಿಯಂದಿರು, ಸಂಬಂಧಿಕರೆಲ್ಲ ಆದಾಗಲೇ ಕೋಟಿಕೋಟಿ ನುಂಗಿ ಕೊಬ್ಬಿ ಹೋಗಿದ್ದರು!

ಈ ಬಾಲಕೃಷ್ಣನ್‌ಗೆ ಸೋನಿ ಹಾಗೂ ರಾಣಿ ಎಂಬ ಇಬ್ಬರು ಹೆಣ್ಮಕ್ಕಳಿದ್ದಾರೆ. ಇವರನ್ನು ಮದುವೆಯಾದ ಅಬ್ಬೇಪಾರಿಗಳಿಗೆ ಬಾಲಕೃಷ್ಣನ್‌ರ ದಯೆಯಿಂದಲೇ ನಾಲ್ಕೈದು ವರ್ಷಗಳ ಅಂತರದಲ್ಲಿ ಅದೃಷ್ಟ ಖುಲಾಯಿಸಿಬಿಟ್ಟಿದೆ. ಆ ವಿವರ ಬಲು ರೋಚಕವಾಗಿದೆ.

ದೊಡ್ಡ ಮಗಳು ಸೋನಿಯ ಕೈ ಹಿಡಿದಾತ ಶ್ರೀನಿಜನ್. ಈತನೀಗ ಕೋಟಿಗಳು ಲೆಕ್ಕಕ್ಕಿಲ್ಲ. ಹಾಗಂತ ಈತ ಹುಟ್ಟು ಶ್ರೀಮಂತನಿರಬೇಕೆಂದುಕೊಂಡರೆ ಅದು ಮೂರ್ಖತನ. ಯಾಕೆಂದರೀತ ತೀರಾ ಬಡ ಕುಟುಂಬವೊಂದರ ಕೂಸು. ಈತನ ತಂದೆ ಕೇರಳದಲ್ಲಿ ಪ್ರೀಮಿಯರ್ ಟೈರ್ ಫ್ಯಾಕ್ಟರಿಯಲ್ಲಿ ಸಾಮಾನ್ಯ ಕೆಲಸಗಾರನಾಗಿದ್ದಾತ. ಆದರೂ ಸಹ ಶ್ರೀನಿಜನ್ ಓದಿ ಲಾಯರ್ ಆದ. ತದನಂತರ ಬಾಲಕೃಷ್ಣನ್‌ರ ಹಿರಿಮಗಳು ಸೋನಿಯನ್ನು ಮದುವೆಯಾದ.

ತದನಂತರ ರಾಜಕೀಯ ಪುಢಾರಿಗಿರಿಯತ್ತಲೂ ಆಕರ್ಷಿತನಾದ ಶ್ರೀನಿಜನ್ ಕೇರಳ ಯುವ ಕಾಂಗ್ರೆಸ್ ಘಟಕಕ್ಕೆ ಉಪಾಧ್ಯಕ್ಷನೂ ಆದ. ಒಂದಷ್ಟು ಕ್ಲಿಕ್ ಆದ ಆತ 2006 ರಲ್ಲಿ ನಡೆದ ಚುನಾವಣೆಯಲ್ಲಿ ಮೀಸಲು ಕ್ಷೇತ್ರವೊಂದರಿಂದ ಕಣಕ್ಕಿಳಿದ. ಆ ಸಂದರ್ಭದ ಆಸ್ತಿ ವಿವರ ಸಲ್ಲಿಕೆಯಲ್ಲಿ ಕೇವಲ 25 ಸಾವಿರ ರೂಪಾಯಿ ಬ್ಯಾಂಕ್ ಬ್ಯಾಲೆನ್ಸ್ ಹಾಗೂ 24 ಗ್ರಾಂ ಚಿನ್ನದ ಲೆಕ್ಕ ತೋರಿಸಿದ್ದ. ಆ ಚುನಾವಣೆಯಲ್ಲೀತ ಗೋತಾ ಹೊಡೆದದ್ದು ಬೇರೆ ವಿಚಾರ.

ಇದಾಗಿ ಒಂದೇ ವರ್ಷದಲ್ಲಿ ಅಂದರೆ 2007 ರಲ್ಲಿ ಮಾವ ಬಾಲಕೃಷ್ಣನ್ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಾಧೀಶರಾದರು. ಅಲ್ಲಿಂದಲೇ ಈ ಅಬ್ಬೇಪಾರಿ ಅಳಿಯನ ಲಕ್ಕು ಲಕಲಕಿಸಲಾರಂಭಿಸಿತ್ತು. ಅದೇ ವರ್ಷ ಈತ ತನ್ನ ಹೆಂಡತಿ ಸೋನಿ ಹೆಸರಲ್ಲಿ 6 ಲಕ್ಷ ಮೌಲ್ಯದ ಪ್ಲಾಟೊಂದನ್ನು ಖರೀದಿಸಿದ. ಅದಾಗಿ ಒಂದೇ ಒಂದು ತಿಂಗಳು ಕಳೆಯುವಷ್ಟರಲ್ಲಿ ಹೆಂಡತಿ ಹೆಸರಲ್ಲೇ ಮಾಥೆರ್ ಸ್ಕೇರ್‌ನಲ್ಲಿ 1.49 ಲಕ್ಷಕ್ಕೆ ಮತ್ತೊಂದು ಪ್ಲಾಟ್ ಖರೀದಿಸಿದ. ವಾಸ್ತವವಾಗಿ ಅದರ ನಿಜ ಬೆಲೆ ಸುಮಾರು 66 ಲಕ್ಷದಷ್ಟಿತ್ತು!

ಇನ್ನು 2008 ರಲ್ಲಿ ಶ್ರೀನಿಜನ್ ತ್ರಿಚೂರ್ ಜಿಲ್ಲೆಯ ನದಿ ಪಕ್ಕದಲ್ಲಿ ಅಖಂಡ 277.51 ಸೆಂಟ್ ಭೂಮಿ ಖರೀದಿಸಿದ್ದ. ಇದೀಗ ಅದರಲ್ಲಿ ಐಷಾರಾಮಿ ರೆಸಾರ್ಟ್ ಒಂದು ತಲೆ ಎತ್ತುತ್ತಿವೆ. ಈ ಭೂಮಿಯ ಒಟ್ಟು ಮೊತ್ತ 16 ಲಕ್ಷ ಅಂತ ಶ್ರೀನಿಜನ್ ಪತ್ರಿಕೆಗಳಲ್ಲಿ ದಾಖಲಿಸಿದ್ದ. ಆದರೆ ಈ ಭಾಗದಲ್ಲಿ 1 ಸೆಂಟ್ ಭೂಮಿಗೆ 1 ಲಕ್ಷದಷ್ಟು ಬೆಲೆಯಿದೆ. ಅಂದರೆ ಇದು ಅಖಂಡ ಮೂರು ಕೋಟಿಯಷ್ಟು ಬೆಲೆ ಬಾಳುವ ಭೂಮಿ!

2009ರಲ್ಲಿ ಶ್ರೀನಿಜನ್‌ನ ಭೂಮಿ ಕೊಳ್ಳುವ ಯಾಗ ಯಥಾವತ್ತು ಮುಂದುವರೆದಿತ್ತು. ಈ ವರ್ಷ ಎರ್ನಾಕುಲಂನ ದೇಶಾಭಿಮಾನಿ ರಸ್ತೆಯಲ್ಲಿ ಇನ್ನೊಂದು ಆಸ್ತಿಯನ್ನು ಶ್ರೀನಿಜನ್ 30 ಲಕ್ಷಕ್ಕೆ ಖರೀದಿಸಿದ. ಇದಾಗಿ ಕೆಲವೇ ದಿನಗಳಲ್ಲಿ ಆ ಭೂಮಿಯ ಬಾಜಿನಲ್ಲೇ ತನ್ನ ತಾಯಿ ಶ್ರೀಮತಿ ವಾಸು ಹೆಸರಲ್ಲಿ 3.5 ಸೆಂಟ್ ಭೂಮಿ ಖರೀದಿಸಿದ್ದಾನೆ. 2006ರಲ್ಲಿ ಕೇವಲ 25 ಸಾವಿರ ಮತ್ತು 24 ಗ್ರಾಂ ಬಂಗಾರ ಹೊಂದಿದ್ದ ಶ್ರೀನಿಜನ್ ಮೂರ್ನಾಲ್ಕು ವರ್ಷದಲ್ಲಿ ಈ ಪರಿ ಆಸ್ತಿ ಸಂಪಾದಿಸಿದ್ದು ಹೇಗೆ? ಇದಕ್ಕೆ ಆ ಸಂದರ್ಭದಲ್ಲಿ ಆತನ ಮಾವ ಬಾಲಕೃಷ್ಣನ್ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಾಧೀಶರಾಗಿದ್ದರೆಂಬ ಏಕೈಕ ಉತ್ತರದ ಹೊರತಾಗಿ ಬೇರ್‍ಯಾವ ಪವಾಡಗಳೂ ಕಾಣಸಿಗುವುದಿಲ್ಲ!

ಇನ್ನು ಬಾಲಕೃಷ್ಣನ್‌ರ ಎರಡನೇ ಮಗಳು ರಾಣಿಯ ಗಂಡ ಎಂ.ಜೆ. ಬೆನ್ನಿಯದ್ದೂ ಇದೇ ಕಥೆ. ಸಾಮಾನ್ಯ ಕ್ರಿಶ್ಚಿಯನ್ ಕುಟುಂಬವೊಂದರಿಂದ ಬಂದ ಈತ ವೃತ್ತಿಯಲ್ಲಿ ವಕೀಲ. ವಕೀಲಿಕೆ ಓದುತ್ತಿದ್ದಾಗಲೇ ರಾಣಿಗೆ ಮನಸೋತು ಈತ 2006 ರಲ್ಲಿ ಆಕೆಯನ್ನು ವರಿಸಿದ್ದ.

ಈತ ಕೂಡಾ 2008 ಮಾರ್ಚ್ ತಿಂಗಳಿಂದ 2010 ಮಾರ್ಚ್ 26 ರ ನಡುವೆ ಅಂದರೆ ಕೇವಲ ಎರಡು

▶▶ 6

ದಲಿತರೆಂಬ ಕಾರಣಕ್ಕೆ ಒಪ್ಪಿಕೊಳ್ಳಬೇಕೆ?

ದಮನಿತ ವರ್ಗದವರು ಉನ್ನತ ಸ್ಥಾನಕ್ಕೇರಿದಾಗ ಆ ಸಮುದಾಯದವರಿಗೆ ಮಾತ್ರವಲ್ಲ ಸಮಾನತೆಯನ್ನು ಕನಸುವ ಎಲ್ಲರಿಗೂ ಸಂತಸವಾಗುತ್ತದೆ. ಹೆಮ್ಮೆಯೂ ಮೂಡುತ್ತದೆ. ಆದರೆ ಹಾಗೆ ಉನ್ನತ ಸ್ಥಾನಕ್ಕೇರಿದಾತ ಭ್ರಷ್ಟನಾದರೂ ಆತನನ್ನ ಒಪ್ಪಿಕೊಳ್ಳಬೇಕಾ? ಇದು ಈ ಸಂದರ್ಭದಲ್ಲಿ ಚರ್ಚಿಸಲೇ ಬೇಕಾದ ಪ್ರಶ್ನೆ.

ಯಾಕೆಂದರೆ, ಬಾಲಕೃಷ್ಣನ್‌ರ ತಮ್ಮ ಭಾಸ್ಕರನ್ ಅಖಂಡ ಭ್ರಷ್ಟಾಚಾರ ಮಾಡಿ ತನಿಖೆ ಎದುರುಗೊಂಡನಲ್ಲಾ? ಆ ಸಂದರ್ಭದಲ್ಲಿ 'ನಾವು ದಲಿತರೆಂಬ ಕಾರಣಕ್ಕೇ ಈ ರೀತಿಯಲ್ಲಿ ಪಿತೂರಿ ನಡೆಸಲಾಗುತ್ತಿದೆ. ನಾವೇನು ಆಸ್ತಿ-ಪಾಸ್ತಿ ಮಾಡಿಕೊಳ್ಳಬಾರದೆ? ನಾವೆಲ್ಲ ಮೇಲ್ಜಾತಿಯವರ ಕೆಳಗೇ ಇರಬೇಕಾ' ಅಂತೆಲ್ಲ ಒದರಾಡಿದ್ದ!

ಮೇಲ್ಕಂಡ ವಿಚಾರವನ್ನು ಸೂಕ್ಷ್ಮವಾಗಿ ಗಮನಿಸಿ. ಭಾಸ್ಕರನ್ ತಾನು ಮಾಡಿದ ಭ್ರಷ್ಟಾಚಾರವನ್ನ ಸಮರ್ಥಿಸಿಕೊಳ್ಳುವಾಗ ತನ್ನ ಇಡೀ ದಲಿತ ಸಮುದಾಯವನ್ನು ಸೇರಿಸಿಕೊಂಡು 'ನಾವು' ಅನ್ನುತ್ತಾನೆ. ಇದು ಆ ಸಮುದಾಯದ ಸಿಂಪಥಿ ಗಿಟ್ಟಿಸುವ, ಭ್ರಮೆ ಬಿತ್ತುವ ಪ್ರಯತ್ನವಷ್ಟೆ. ಉನ್ನತ ಸ್ಥಾನಕ್ಕೇರಿದ ದಲಿತನೊಬ್ಬ ಭ್ರಷ್ಟಾಚಾರ ನಡೆಸಿದರೆ ಅದು ಶಿಕ್ಷಾರ್ಹವೇ. ಅದರಲ್ಲೂ ವಿನಾಯಿತಿ ಬೇಡಿದರೆ ಹಡಬೆಹಣದಲ್ಲಿ ಪಾಲು ಕೇಳಿದಂತೆಯೇ ಪಾಪದ ಕೆಲಸವಾಗುತ್ತದೆ. ಭಾಸ್ಕರನ್‌ನ ಅವಿವೇಕ ಎಂತಹುದಿದೆ ಯೋಚಿಸಿ. ಆತ ನಾವೆಲ್ಲ ಮೇಲ್ವರ್ಗದವರ ಕೈಕೆಳಗೇ ಇರಬೇಕಾ ಅಂತ ಪ್ರಶ್ನೆ ಕೇಳಿದ್ದಾನೆ. ಇದು ದಲಿತ ಸಮುದಾಯದವರು ಅಡ್ಡಾದಿ ದಂಧೆ ಮಾಡಿಯಾದರೂ ಮೇಲ್ವರ್ಗದವರಂತೆ ಕೊಬ್ಬಬೇಕೆಂಬ ಸಂದೇಶದಂತಿದೆ. ಅಷ್ಟಕ್ಕೂ ಮೇಲ್ವರ್ಗದ ಮಂದಿಯೆಲ್ಲ ಬೇಡದ ದಂಧೆ ಮಾಡಿಯೇ ಹಾಗಾಗಿದ್ದಾರೆನ್ನುವುದು ಶುದ್ಧ ಸಿನಿಕತನ.

ಇನ್ನು ಕೆಲ ದಲಿತ ಪರ ಚಿಂತಕರಂತೆ ಪೋಸುಕೊಡುವ ಮಂದಿಯದ್ದು ಚಿಂತಾಜನಕ ಸ್ಥಿತಿ. ಕರ್ನಾಟಕದ ಹೈಕೋರ್ಟ್ ನ್ಯಾಯಮೂರ್ತಿಯಾಗಿದ್ದ ದಿನಕರನ್ ಭೂಹಗರಣದಲ್ಲಿ ಸಿಕ್ಕಿ ಬಿದ್ದಾಗಲೂ ಅವರ ವಿರುದ್ಧ ಬರೆದವರಿಗೆಲ್ಲ ಅಂಥವರು ಅಟಕಾಯಿಸಿಕೊಂಡಿದ್ದರು. ಅವರ ಪ್ರಕಾರ ದಲಿತರೆಂಬ ಕಾರಣಕ್ಕಾದರೂ ದಿನಕರನ್ ಭ್ರಷ್ಟಾಚಾರಕ್ಕೊಂದು ರಿಯಾಯ್ತಿ ಕೊಡಬೇಕಿತ್ತು!

ವ್ಯವಸ್ಥೆ ಎಕ್ಕುಟ್ಟುತ್ತಿರುವುದು ಇಂಥ ಮನಸ್ಥಿತಿಯಿಂದಲೇ ಅಲ್ಲವೆ?

ಭ್ರಷ್ಟರ ನಡುವಲ್ಲೂ ನಿಷ್ಠುರ ಧ್ವನಿ!

ಸರ್ವೋಚ್ಛ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳೇ ಈ ಪರಿ ಹೆಸರು ಕೆಡಿಸಿಕೊಂಡಿರುವುದರಿಂದ ಯಾರಿಗಾದರೂ ಖೇದ ಉಂಟಾಗದಿರದು. ಹಾಗಂತ ಇಡೀ ನ್ಯಾಯಾಂಗವೇ ಕೆಟ್ಟು ಹೋಗಿದೆ ಅಂದಕೊಳ್ಳಬೇಕಿಲ್ಲ. ಅಲ್ಲೂ ಸಹ ಪ್ರಾಮಾಣಿಕೆ, ನ್ಯಾಯ-ನಿಷ್ಠುರತೆಯನ್ನೇ ದೇವರೆಂದುಕೊಂಡ ಒಂದಷ್ಟು ಜನರಿದ್ದಾರೆ.

ಅಂಥವರ ಸಾಲಿನಲ್ಲಿ ಡೆಲ್ಲಿ ಹೈಕೋರ್ಟ್‌ನ ನಿವೃತ್ತ ಮುಖ್ಯನ್ಯಾಯಮೂರ್ತಿ ಅಜಿತ್ ಪ್ರಕಾಶ್ ಷಾ ಮೊದಲಿಗರು. ಜನಸಾಮಾನ್ಯರು ನ್ಯಾಯಾಂಗವನ್ನು ಯಾವ ಎತ್ತರದಲ್ಲಿಟ್ಟು ಗೌರವಿಸುತ್ತಾರೋ ಅದಕ್ಕೆ ತಕ್ಕುದಾಗಿ ನಡೆದುಕೊಳ್ಳುವುದು ಷಾರ ಸ್ಪೆಷಾಲಿಟಿ. ನೇರ, ನಿಷ್ಠುರ ಹಾಗೂ ಬಡವರ ಪರ ದನಿಯನ್ನೇ ಮೌಲ್ಯವನ್ನಾಗಿಸಿಕೊಂಡಿರುವ ಷಾ ನೀಡಿದ ಅನೇಕ ತೀರ್ಪುಗಳೂ ಅದನ್ನೇ ಧ್ವನಿಸುತ್ತವೆ. ಇಂಥ ನಿಷ್ಠುರ ನಡುವಳಿಕೆಗೆ ಹತ್ತಾರು ಉದಾಹರಣೆಗಳು [illegible]ಗುತ್ತವೆ.

ಅವುಗಳಲ್ಲಿ ಡೆಲ್ಲಿ ಸರ್ಕಾರ ಸೈಕಲ್ ರಿಕ್ಷಾ ಬ್ಯಾನ್ ಮಾಡುವ ನಿರ್ಧಾರ ತಳೆದ ಸಂದರ್ಭದಲ್ಲಿ ಷಾ ನೀಡಿದ ತೀರ್ಪು ಗಮನಾರ್ಹವಾದುದು. ಸೈಕಲ್ ರಿಕ್ಷಾ ಚಾಲಕರಿಗೆ ಮೊದಲು ಜೀವನೋಪಾಯ ಕಲ್ಪಿಸಿ ತದನಂತರ ಬ್ಯಾನ್ ಮಾಡಿ ಅಂತ ನಿಷ್ಠುರ ತೀರ್ಪು ನೀಡಿದ್ದರು. ಇನ್ನು ಕಾಮನ್ವೆಲ್ತ್ ಕ್ರೀಡಾಕೂಟದ ಹಿನ್ನೆಲೆಯಲ್ಲಿ ದೆಹಲಿಯನ್ನು 'ಚೆಂದ'ಗೊಳಿಸುವ ಕಸರತ್ತುಗಳು ನಡದವಲ್ಲಾ? ಆಗ ಕೊಬ್ಬಿದ ಕಾರ್ಪೋರೇಟ್ ಕಣ್ಣುಗಳಿಗೆ ಬಡವರ ಮನೆಗಳು ಅಸಹ್ಯದಂತೆ ಕಂಡು ಅವುಗಳನ್ನು ಕೆಡಹುವ ನಿರ್ಧಾರಕ್ಕೆ ಬಂದಿದ್ದರು. ಈ ಸಂದರ್ಭದಲ್ಲಿ ಷಾರವರು 'ಬಡವರ ಮನೆಗಳು ಕುರೂಪವಾಗಿ ಕಾಣುವ ನಿಮ್ಮದೆಂಥಾ ಸೌಂದರ್ಯ ಪ್ರಜ್ಞೆ' ಅಂತ ನೇರವಾಗಿ ಚಾಟಿ ಬೀಸಿ ನೆಲೆ ಕಳಕೊಂಡ ಬಡವರಿಗೆ ಕೂಡಲೆ ಪುನರ್ವಸತಿ ಕಲ್ಪಿಸಬೇಕೆಂದು ತೀರ್ಪು ಹೊರಡಿಸಿದ್ದರು.

ದುರಂತವೇನು ಗೊತ್ತಾ? ಇಂಥಾ ನ್ಯಾಯ, ನಿಷ್ಠುರತೆ, ಜನಪರ ನಿಲುವು ಹೊಂದಿರುವ ಷಾ ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಾಧೀಶರಾಗುವುದನ್ನು ಕಾಣದ ಕೈಗಳು ತಡೆಯುತ್ತಲೇ ಇದ್ದವು. ಇಂಥವರು ಸುಪ್ರೀಂ ಕೋರ್ಟ್‌ನಲ್ಲಿ ನಿರ್ಣಾಯಕರಾದರೆ ಭ್ರಷ್ಟಾಚಾರದ ಮೂಲಕ್ಕೆ ಕೊಡಲಿಯೇಟು ಬೀಳುತ್ತದೆಂಬುದು ಇದಕ್ಕೆ ಕಾರಣ.

▶▶ 5

ವರ್ಷಗಳಲ್ಲಿ 98.5 ಸೆಂಟ್ ಭೂಮಿ ಕೊಂಡಿದ್ದಾನೆ. ಈ ಭೂಮಿಗೆ ಆಗ 1 ಸೆಂಟ್‌ಗೆ ನಾಲ್ಕು ಲಕ್ಷದಷ್ಟು ಬೆಲೆಯಿದ್ದರೆ ಈಗ 10 ಲಕ್ಷದವರೆಗೆ ಏರಿದೆ. ಈ ಬೆನ್ನಿ ಎಂಥಾ ವಂಚಕನೆಂದರೆ, 2008 ರಿಂದ 2010 ರ ವರೆಗೆ ಆದಾಯ ತೆರಿಗೆ ಇಲಾಖೆಗೆ ಕೊಟ್ಟಿದ್ದು ಬರೀ ಐದೂವರೆ ಲಕ್ಷದ ಲೆಕ್ಕ. ಹಾಗಾದರೆ 80 ಲಕ್ಷಕ್ಕೂ ಅಧಿಕ ಹಣ ಎಲ್ಲಿಂದ ಬಂತು ಎಂಬ ಪ್ರಶ್ನೆ ಮೂಡುತ್ತದೆ. ಉತ್ತರವೆಂಬುದು ಮಾವಯ್ಯ ಬಾಲಕೃಷ್ಣರತ್ತಲೇ ಮುಖ ಮಾಡುತ್ತದೆ!

ಇನ್ನು ಬಾಲಕೃಷ್ಣನ್‌ರ ತಮ್ಮ ಕೆ.ಜಿ. ಭಾಸ್ಕರನ್‌ನ ಕಥೆ. ಈತ ಕೇರಳ ಹೈಕೋರ್ಟ್‌ನಲ್ಲಿ ಸರ್ಕಾರಿ ವಕೀಲ. ಈತ ಅಣ್ಣ ಬಾಲಕೃಷ್ಣ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಾಧೀಶನಾದ ಬಳಿಕ ತಮಿಳುನಾಡಿನ ದಿಂಡಿಗಲ್‌ನಲ್ಲಿ ಏಕಾಏಕಿ 50 ಎಕರೆ ಭೂಮಿ ಖರೀದಿಸಿದ್ದ! ಇಷ್ಟು ದುಡ್ಡು ಸರ್ಕಾರಿ ವಕೀಲ ಭಾಸ್ಕರನ್‌ಗೆ ಎಲ್ಲಿಂದ ಬಂತು ಅಂತ ಆ ನೆಲದ ಪ್ರಜ್ಞಾವಂತರನೇಕರು ಪಟ್ಟುಹಿಡಿದದ್ದೇ, ಖುದ್ದು ಕೇರಳ ಮುಖ್ಯಮಂತ್ರಿ ಅಚ್ಯುತಾ ನಂದನ್ ಈ ಬಗ್ಗೆ ವಿಚಾರಣೆ ಆದೇಶಿಸಿದ್ದಾರೆ. ಜೊತೆಗೆ ಬಾಲಕೃಷ್ಣನ್ ಕುಟುಂಬದ ಆಸ್ತಿ ವಿಚಾರವಾಗಿಯೂ ತನಿಖೆ ನಡೆಸಲು ಅಚ್ಯುತಾನಂದನ್ ಅಂಕಿತ ಹಾಕಿದ್ದಾರೆ. ಇದೆಲ್ಲದರಿಂದಾಗಿ ಜೈಲು ಗ್ಯಾರಂಟಿ ಅಂತ ಖಾತ್ರಿಪಡಿಸಿಕೊಂಡ ಕಳ್ಳ ಭಾಸ್ಕರನ್ ಸ್ವಯಂನಿವೃತ್ತಿ ಪಡೆದು ಭೂಗತನಾಗಿರುವ ಸುದ್ದಿಯಿದೆ!

ಈ ನ್ಯಾಯಮೂರ್ತಿಯ ನೆರಳಲ್ಲಿ ತಲೆಯೆತ್ತಿದ ಈ ಅನ್ಯಾಯಗಾಥೆ ಇಷ್ಟಕ್ಕೇ ಕೊನೆಯಾಗದೆ ಕುಟುಂಬದ ಚಳ್ಳೆಪಿಳ್ಳೆಗಳವರೆಗೂ ಹರಡಿಕೊಂಡಿದೆ. ಅದಕ್ಕೆ ಬಾಲಕೃಷ್ಣನ್‌ರ ಹತ್ತಿರದ ಸಂಬಂಧಿ ಅಭಿಲಾಷ್ ಎಂಬಾತನೇ ಸ್ಪಷ್ಟ ಸಾಕ್ಷಿ. ಈತ ಕೇರಳದ ಸರ್ಕಾರಿ ಇಲಾಖೆಯೊಂದರಲ್ಲಿ ಕ್ಲರ್ಕ್ ಆಗಿರುವಾತ. ಆದರೆ ಬಾಲಕೃಷ್ಣನ್ ಮುಖ್ಯ ನ್ಯಾಯಮೂರ್ತಿದ ಬಳಿಕ ಈತನೂ ಕೋಟಿ ಕೋಟಿ ಸುರಿದು ಕಂಪ್ಯೂಟರ್ ಸಾಫ್ಟ್‌ವೇರ್ ಕಂಪೆನಿಯೊಂದನ್ನು ತೆರೆದ. ಆದೀಗ ನಾಲ್ಕೈದು ಮರಿ ಹಾಕಿವೆ. ಇದಲ್ಲದೆ ಅಭಿಲಾಷ್ ವಿದೇಶಗಳಲ್ಲೂ ಬೇನಾಮಿಯಾಗಿ ಚಿನ್ನಾಭರಣ ಮಳಿಗೆ ಹಾಗೂ ಸ್ಟಾರ್ ಹೋಟೆಲ್‌ಗಳನ್ನು ತೆರೆದಿರುವ ಗುಮಾನಿಗಳೂ ಇವೆ.

ಮೇಲ್ಕಂಡ 'ಪವಾಡ'ಗಳನ್ನು ಕಂಡು ನಿಟ್ಟುಸಿರಿಡುತ್ತಿದ್ದೀರೇನೋ. ಆದರೆ ಇದು ಈವರೆಗೆ ಬಯಲಾದ ರಖಮುಗಳಷ್ಟೆ. ಸರಿಯಾದುದೊಂದು



ತನಿಖೆ ನಡೆದರೆ, ಇನ್ನೆಷ್ಟೋ ಹುಳುಕುಗಳು ಬಯಲಾಗುವುದು ಖಚಿತ. ಇದೆಲ್ಲ ನ್ಯಾಯಮೂರ್ತಿಗಳಾಗಿದ್ದ ಬಾಲಕೃಷ್ಣನ್ ಅವರಿವರ ಭಿಕ್ಷೆಗೆ ಬಾಯ್ತೆರೆದು ಸಂಪಾದಿಸಿದ ಹಣದ ವಹಿವಾಟುಗಳೇ ಎಂಬುದು ಈಗಿರುವ ಆರೋಪ. ಎಲ್ಲವನ್ನು ವಿಸ್ತೃತವಾಗಿ ಗಮನಿಸಿದರೆ ಅದನ್ನು ಯಾವ ಕಾರಣಕ್ಕೂ ತಳ್ಳಿ ಹಾಕಲಾಗುವುದಿಲ್ಲ.

ಇದು ಈ ನೆಲದ ಸಾಮಾನ್ಯನಿಗೂ ಕಟ್ಟಕಡೆಯದಾಗಿ ನ್ಯಾಯ ದೊರಕಿಸಿಕೊಡುವ ಸರ್ವೋಚ್ಚ ನ್ಯಾಯಾಲಯವೂ ಕೆಟ್ಟು ಕೆರ ಹಿಡಿದ ಸೂಚನೆಗಳು. ನ್ಯಾಯಾಂಗವನ್ನೇ ವಸೂಲಿಗೆ ಬಳಸಿಕೊಳ್ಳುವ ಬಾಲಕೃಷ್ಣನ್‌ರಂಥವರಿಂದ ನ್ಯಾಯಾಂಗದ ಪಾವಿತ್ರ್ಯಕ್ಕೆ ಅಳಿಸಲಾಗದಂಥ ಕಪ್ಪು ಚುಕ್ಕೆ ಅಂಟಿಕೊಂಡಂತಾಗಿದೆ.

ಇದರ ವಿರುದ್ಧ ದನಿಯೆತ್ತುವುದನ್ನು ನ್ಯಾಯಾಂಗನಿಂದನೆಯೆಂಬ ಅಸ್ತ್ರದಿಂದ ಬಗ್ಗುಬಡಿದರೆ ಪ್ರಜಾಪ್ರಭುತ್ವ ನಿಧಾನಕ್ಕೆ ನಿರಂಕುಶ ಹಾದಿ ಹಿಡಿಯುವುದು ಖಚಿತ.

ಈ ಅನಾಹುತವನ್ನು ತಡೆಯುವವರ್‍ಯಾರು? ●

ಪ್ರಶ್ನೆಗಳನ್ನೇ ಹತ್ತಿಕ್ಕಿದರೆ ಹೇಗೆ?

ನ್ಯಾಯಾಂಗವನ್ನು ಯಾರೂ ಪ್ರಶ್ನಿಸುವಂತಿಲ್ಲ ಅಂತೊಂದು ನಿಯಮವಿದೆ. ಅದು ಅಂತಹುದೊಂದು ಪಾವಿತ್ರ್ಯ ಉಳಿಸಿಕೊಂಡ ಸಂದರ್ಭದಲ್ಲಿ ಆ ಹುಕುಂ ಅನ್ನು ಪಾಲಿಸಬಹುದು. ಆದರೆ ಅದರಲ್ಲೂ ಏನೋ ಐಬಿದೆ ಎಂಬ ಸೂಚನೆ ಸಿಕ್ಕರೂ, ಅದಕ್ಕೆ ದಂಡಿ ದಂಡಿ ಸಾಕ್ಷಿಗಳಿದ್ದರೂ ಆ ಕುರಿತು ಪ್ರಶ್ನಿಸಬಾರದೆಂದರೆ ಅದು ಸರ್ವಾಧಿಕಾರಿ ಧೋರಣೆಯಲ್ಲದೆ ಬೇರೆನೂ ಅಲ್ಲ.

ಸದ್ಯ ಸುಪ್ರೀಂ ಕೋರ್ಟ್ ವಕೀಲ ಶಾಂತಿ ಭೂಷಣ್ ಆಘಾತಕಾರಿ ವಿಚಾರವೊಂದನ್ನು ಬಯಲು ಮಾಡಿದ್ದಾರೆ. ಈವರೆಗೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಾಧೀಶರಾದ 16 ಮಂದಿಯ ಪೈಕಿ ಅರ್ಧದಷ್ಟು ಜನ ಭ್ರಷ್ಟರೆಂಬುದು ಆ ವಿಚಾರ. ಇದು ನಿಜಕ್ಕೂ ಆಘಾತದ ಸಂಗತಿ. ನ್ಯಾಯಾಂಗದಲ್ಲೂ ಭ್ರಷ್ಟಾಚಾರವೆಂದರೆ ನ್ಯಾಯದ ಕಗ್ಗೊಲೆ ಅಂತಲೇ ಅರ್ಥ.

ಆದರೆ ಇಂಥಾದ್ದರ ವಿರುದ್ಧ ಪ್ರಶ್ನೆ ಎತ್ತಿದವರಿಗೆಲ್ಲ ನ್ಯಾಯಾಂಗ ನಿಂದನೆಯ ನೆಪದಲ್ಲಿ ಹಿಂಸೆ ನೀಡಲಾಗುತ್ತಿದೆ. ಬಾಲಕೃಷ್ಣನ್‌ಗೂ ಮುಂಚೆ ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಮೂರ್ತಿಯಾಗಿದ್ದ ವೈ.ಕೆ. ಸಬರ್‌ವಾಲ್ ವಿರುದ್ಧ ತನಿಖಾ ವರದಿ ಪ್ರಕಟಿಸಿ 'ಭ್ರಷ್ಟಾಚಾರದ ಆರೋಪ ಮಾಡಿದ್ದ 'ಮಿಡ್ಡೆ' ಪತ್ರಿಕಾ ಬಳಗಕ್ಕೂ ವಿಪರೀತ ಹಿಂಸೆ ನೀಡಲಾಗಿತ್ತು, ಸತ್ಯ ಹೇಳಿದ್ದಕ್ಕಾಗಿ ಮಿಡ್ಡೆ ಪತ್ರಿಕೆಯ ಪ್ರಕಾಶಕರು, ಸಂಪಾದಕರು ಹಾಗೂ ವರದಿಗಾರರಿಗೆ ಸುಪ್ರೀಂ ಕೋರ್ಟ್ ಜೈಲು ಶಿಕ್ಷೆ ವಿಧಿಸಿತ್ತು!

ವಿಪರ್ಯಾಸವೆಂದರೆ ಭ್ರಷ್ಟಾಚಾರದ ಆರೋಪ ಹೊತ್ತವರಿಗೆ ಪ್ರಮೋಷನ್‌ಗಳು ಬಳುವಳಿಯಾಗಿ ಸಿಗುತ್ತಿವೆ. ಪ್ರಶ್ನೆ ಕೇಳಿದವರಿಗೆ ಜೈಲು ಖಚಿತ.

ಪ್ರಶ್ನೆಗಳನ್ನೇ ಹತ್ತಿಕ್ಕುವ ಕಾಯಿಲೆ ಪ್ರಜಾಪ್ರಭುತ್ವದ ಅರ್ಥವನ್ನೇ ಬುಡಮೇಲು ಮಾಡುತ್ತಿದೆ.

▶▶ 4 ಸತ್ತ ಹುಡುಗನ ಸುತ್ತ...

ಸಾಂಸ್ಕೃತಿಕ ಹಿನ್ನೆಲೆಯೇ ಕಾರಣ. ಇದನ್ನು ತಿಳಿದುಕೊಳ್ಳುವಲ್ಲಿ ವಿಫಲರಾಗಿದ್ದ ನ್ಯೂ ಇಂಗ್ಲಿಷ್ ಸ್ಕೂಲ್ ಮಾಸ್ತರರು ಸೋಮವಾರ ಶಾಲೆಗೆ ತಡವಾಗಿ ಬಂದಿದ್ದಕ್ಕೆ ಮತ್ತು ಮುಂಚಿನೆರಡು ದಿನ ಹೇಳದೇ-ಕೇಳದೆ ಗೈರಾಗಿದ್ದಕ್ಕೆ ಅಫ್ಜಲ್‌ಗೆ ಐದು ಸುತ್ತು ಶಾಲಾ ಆವರಣ ಸುತ್ತು ಹೊಡೆಯುವಂತೆ ಹೆಡ್‌ಮಾಸ್ಟರ್ ಹೆಬ್ಬಾರ್ ಮತ್ತು ಪಿಟಿ ಮಾಸ್ಟರ್ ಕುಮಾರ್ ನಾಯ್ಕ ಆಜ್ಞೆ ಮಾಡಿದ್ದಾರೆ. ಎರಡು ಸುತ್ತು ಓಡುತ್ತಲೇ ಅಫ್ಜಲ್‌ಗೆ ಎದೆ ಒತ್ತಿದಂತಾಗಿ ಕುಳಿತಿದ್ದಾನೆ. ಈತನ ಬಗ್ಗೆ ಒಳ್ಳೆಯ ಅಭಿಪ್ರಾಯವಿಲ್ಲದ ಮಾಸ್ಟರ್‌ದ್ವಯರು ಜಬರ್ದಸ್ತಿನಿಂದ ಓಡಿಸಿದ್ದಾರೆ. ನಿತ್ರಾಣನಾದ ಹುಡುಗ ನೆಲಕ್ಕೆ ಬಿದ್ದವನೇ ಆ ಕ್ಷಣದಲ್ಲೇ ಹೃದಯ ಸ್ತಂಭನದಿಂದ ಜೀವಬಿಟ್ಟಿದ್ದಾನೆ. ಗಡಿಬಿಡಿಗೆ ಬಿದ್ದ ಮಾಸ್ಟರ್ ಮಹಾಶಯರೆಲ್ಲ ಹುಡುಗನ ಶವ ಎತ್ತಿ ಸರ್ಕಾರಿ ಆಸ್ಪತ್ರೆಗೊಯ್ದಿದ್ದಾರೆ. ಅಲ್ಲಿ ವೈದ್ಯರು ಸಾವು ದೃಢಪಡಿಸಿದ್ದಾರಷ್ಟೇ.

ದೊಂಬಿ-ಧ್ವಂಸ

ಅಫ್ಜಲ್ ಅಸ್ವಸ್ಥನಾಗಿದ್ದಾನೆಂದು ಶಾಲೆಯವರೇ ಆತನ ಮನೆಗೆ ತಿಳಿಸಿದ್ದಾರೆ. ಕಂಗಾಲಾಗಿದ್ದ ಶಿಕ್ಷಕರು-ಸಿಬ್ಬಂದಿ ಹುಡುಗ ಎಲ್ಲಿದ್ದಾನೆಂದು ಶಾಲೆಗೆ ಬಂದ ಆತನ ಪಾಲಕರಿಗೆ ಸರಿಯಾಗಿ ತಿಳಿಸಲಿಲ್ಲ. ಶಾಲಾ ಸಿಬ್ಬಂದಿಯ ಸಂಶಯದ ವರ್ತನೆಯಿಂದ ಅಫ್ಜಲ್ ಪಾಲಕರ ಆತಂಕ-ಆಕ್ರೋಶ ಜೋರಾಗಿದೆ. ಆಗ ಸರ್ಕಾರಿ ಆಸ್ಪತ್ರೆಗೊಯ್ದಿರುವುದು ತಿಳಿದು ಅಲ್ಲಿಗೋಡಿದ್ದಾರೆ. ಅದಾಗಲೇ ಕಾಸರಕೋಡಿನ ಅಫ್ಜಲ್‌ನ ಕೇರಿಯಿಂದ ಸುಮಾರು 200 ಜನ ಆಸ್ಪತ್ರೆಯಲ್ಲಿ ಜಮಾಯಿಸಿದ್ದರು. ಅಫ್ಜಲ್ ಸತ್ತಿರುವುದು ತಿಳಿಯುತ್ತಲೇ ಮೀನುಗಾರ ಕಸುಬಿನ-ಹಿಂದುಳಿದ ಬಡ ಮಲೆಯಾಳಿ ಮುಸ್ಲಿಮ್ ಸಮೂಹದ ದುಃಖಾಕ್ರೋಶ ಸ್ಫೋಟಿಸಿದೆ. ಆಸ್ಪತ್ರೆಯ ಸಿಬ್ಬಂದಿಗಳ ಅಧಿಕ ಪ್ರಸಂಗದಿಂದ ಕೆರಳಿದ ಮಂದಿ ಅಲ್ಲೆ ದೊಂಬಿ ಎಬ್ಬಿಸಿದ್ದಾರೆ; ಕೈಗೆ ಸಿಕ್ಕಿದ್ದನ್ನು ಧ್ವಂಸ ಮಾಡಿದ್ದಾರೆ.

ಸಂಬಂಧಿಸಿದ ಶಿಕ್ಷಕರು ಇದೊಂದು ಆಕಸ್ಮಿಕ ಅನಾಹುತ ಎಂದು ಪರಿಪರಿಯಾಗಿ ಕೇಳಿದರೂ ಹುಡುಗನನ್ನು ಕಳೆದುಕೊಂಡ ಶಾಕ್‌ನಲ್ಲಿ ಸ್ತಿಮಿತ ಕಳಕೊಂಡ ಮಂದಿ ಕೇಳುವ ಸ್ಥಿತಿಯಲ್ಲಿರಲಿಲ್ಲ. ಅಫ್ಜಲ್‌ನ ಹೆಣ ಅನಾಮತ್ತಾಗಿ ಎತ್ತಿ ಸೀದಾ ಶಾಲೆಗೆ ತಂದು ಆಡಳಿತ ಮಂಡಳಿಯ ಜವಾಬ್ದಾರಿಯುತ ವ್ಯಕ್ತಿ ಬಂದು ಸಾವಿಗೆ ಕಾರಣ ತಿಳಿಸಬೇಕೆಂದು ಹಠ ಹಿಡಿದರು. ಎಷ್ಟೊತ್ತಾದರೂ ಆಡಳಿತ ಮಂಡಳಿಯವರು ಬರದಿದ್ದಾಗ ಸಹನೆ ಕಳಕೊಂಡ ಸಾಬಿಗಳು ಮತ್ತವರ ಜತೆಗಿದ್ದ ಒಂದಿಷ್ಟು ಹಿಂದೂಗಳು ಸೇರಿಯೇ ಶಾಲೆಯ ಮೇಲೆ ದಾಳಿ ಮಾಡಿದ್ದಾರೆ. ಪೀಠೋಪಕರಣ-ಪಾಠೋಪಕರಣ-ಕಿಟಕಿ-ಬಾಗಿಲು-ಡೆಸ್ಕ್-ಬೆಂಚ್‌ಗಳೆಲ್ಲ ಪುಡಿಗುಟ್ಟಿದ್ದಾರೆ. ಅಷ್ಟೊತ್ತಿಗೆ ಬಂದ ಲೋಪಾಪ್ಯುಲರ್‌ನ ಸೆಕ್ರೆಟರಿಯೊಬ್ಬನಿಗೆ ಸಮರ್ಥವಾಗಿ ದೊಂಬಿಕೋರರ ಕಂಟ್ರೋಲ್ ಮಾಡಲಾಗಿಲ್ಲ. ಆತನ ತೂಕವಿಲ್ಲದ ಮಾತುಗಳು ಪ್ರತಿಭಟನಾಕಾರರನ್ನು ಇನ್ನಷ್ಟು ಪ್ರಚೋದಿಸಿತ್ತಷ್ಟೇ. ಆ ಸೆಕ್ರೆಟರಿ ಮಹಾಶಯ ಶಾಲೆಗೆ ರಜೆ ಘೋಷಿಸಿ ಜಾಗ ಖಾಲಿ ಮಾಡಿದ್ದಾನೆ.

ಆಡಳಿತ ಮಂಡಳಿ ಅಚಾತುರ್ಯ

ಆಡಳಿತ ಮಂಡಳಿಯ ದೊಡ್ಡವರು ಬಂದು ನ್ಯಾಯ ಹೇಳದ ಹೊರತು ಹೆಣ ಶಾಲೆಯಿಂದ ಎತ್ತುವುದಿಲ್ಲವೆಂದು ಧರಣಿ ನಿರತರು ಹಠಹಿಡಿದರು. 'ತಪ್ಪಿತಸ್ಥ' ಮಾಸ್ತರರಿಗೆ, ಅಡ್ಡಬಂದ ಸಿಬ್ಬಂದಿಗೆ, ಒಂದಿಬ್ಬರಿದ್ದ ಪೋಲೀಸರಿಗೆಲ್ಲ 'ಧರ್ಮದೇಟು' ಒಂದೇಸಮನೆ ಕೊಡತೊಡಗಿದರು. ಶಿಕ್ಷಕ-ಶಿಕ್ಷಕಿಯರನ್ನು ಕೂಡಿಹಾಕಿ ಸತಾಯಿಸಿದರು. ಹೆಡ್‌ಮಾಸ್ಟರ್, ಪಿಟಿ ಮಾಸ್ಟರ್ ಪೆಟ್ಟು ತಿನ್ನಲಾಗದೇ ಓಡಿಹೋದರು. ಕೆಲವು ಮಂದರು ಶಿಕ್ಷಕಿಯರೊಂದಿಗೆ ಅಸಭ್ಯವಾಗಿ ವರ್ತಿಸಿದರು. ಇಷ್ಟಾದರೂ ಹೊಣೆಗೇಡಿ-ಹೇಡಿ ಆಡಳಿತ ಮಂಡಳಿ ಮುಖ್ಯಸ್ಥರು ಬರಲೇ ಇಲ್ಲ, ಬರಲು ಭಯವಿದ್ದರೆ ಕನಿಷ್ಠ ಪೊಲೀಸ್ ಠಾಣೆಗಾದರೂ ಬಂದು ಎಸ್ಪಿ-ಡಿಸಿ-ಡಿಡಿಪಿಐರ ಮುಂದೆ ನ್ಯಾಯದ-ಸಾಂತ್ವನದ-ವಿಷಾದದ ಮಾತಾಡಿದ್ದರೆ ಇಷ್ಟು ದೊಡ್ಡ ದೊಂಬಿ ಗಲಭೆ ಆಗುತ್ತಲೇ ಇರಲಿಲ್ಲ. ದೂರದ ಕಾರವಾರದಿಂದ ಎಸ್ಪಿ-ಡಿಸಿ-ಡಿಡಿಪಿಐ ಬಂದರೂ ಊರಲ್ಲೇ ಇದ್ದ ಆಡಳಿತ ಮಂಡಳಿ ಭೂಪರು ಬರಲಿಲ್ಲ.

ಈಗ ಶಾಲೆಗೆ ಕಮ್ಮಿಯೆಂದರೂ ಹತ್ತು ಲಕ್ಷದಷ್ಟು ಲಾಸ್ ಆಗಿದೆ. ಹೈಸ್ಕೂಲಿನ ಗ್ಯಾದರಿಂಗ್‌ಗಳಲ್ಲಿ, ಖುಷಿಯ ಸಮಾರಂಭದಲ್ಲಿ ವೇದಿಕೆಯೇರಿ ಠೀವಿಯಿಂದ ಬೀಗುವ ಆಡಳಿತ ಮಂಡಳಿ ಪ್ರಭೃತಿಗಳು ಕಷ್ಟದ ಹೊತ್ತಲ್ಲಿ ಸಂಸ್ಥೆಯ-ಶಿಕ್ಷಕ-ವಿದ್ಯಾರ್ಥಿಗಳ ರಕ್ಷಿಸಲು ಬರದೇ ಅಡಗಿಕೊಂಡಿದ್ದು ಈಗ ವ್ಯಾಪಕ ಟೀಕೆ-ಕಿಚಾಯಿಸುವಿಕೆಗೆ ಕಾರಣವಾಗಿದೆ. ಶಾಸಕ ದಿನಕರ ಶೆಟ್ಟಿ, ಡಿಸಿ ಕೃಷ್ಣಯ್ಯ, ಎಸ್ಪಿ ರಮಣ ಗುಪ್ತಾ, ಡಿಡಿಪಿಐ ಜಯಕುಮಾರ್ ದೊಂಬಿಕೋರರು-ಪ್ರತಿಭಟನಾಕಾರರ ಸಮಾಧಾನಿಸಿ ಕಳಿಸುವಾಗ ಮಧ್ಯಾಹ್ನ ಗಂಟೆ ಒಂದಾಗಿತ್ತು. ಎಲ್ಲಿ ಭಾನಗಡಿ ಮುಗಿದು ತಮ್ಮ ಶಾಲೆಯ ಶಿಕ್ಷಕರು-ಶಿಕ್ಷಕಿಯರು ಹಿಂಸೆ ಅನುಭವಿಸಿದ ನಂತರ ಆಡಳಿತ ಮಂಡಳಿಯ ಕಾಮತ್, ಪೈ, ಪ್ರಭು ವಗೈರೆ ಕೊಂಕಣಿ ಅನ್ವರ್ಥ ನಾಮದವರು ಬಿಲದಿಂದ ಹೊರಬಿದ್ದು ಅಫ್ಜಲ್‌ನ ಸಾವಿನ ಬಗ್ಗೆ ತೋರಿಕೆಗೆ ವಿಷಾದ-ಶೋಕ ಪ್ರಕಟಿಸಿದ್ದಾರೆ.

ಇದಕ್ಕಿಂತಲೂ ಹೆಚ್ಚಾಗಿ "ಶಾಲೆಗೆ ಹತ್ತು ಲಕ್ಷ ಹಾನಿಯಾಗಿದೆ, ತಪ್ಪಿತಸ್ಥರ ಬಂಧಿಸಿ... " ಎಂದು ಪತ್ರಿಕಾಗೋಷ್ಠಿ ಕರೆದು ಕೂಗಾಡಿದ್ದಾರೆ. ವಿದ್ಯಾರ್ಥಿ ಸಾವಿನಿಂದ ಆತನ ಹೆತ್ತವರಿಗಾದ ಹಾನಿಗಿಂತಲೂ ತಮ್ಮ ಜಾತಿ ಸಂಸ್ಥೆಗಾದ ಆರ್ಥಿಕ ಹಾನಿಯೇ ಬಲುದೊಡ್ಡದೆಂದು ಪರೋಕ್ಷವಾಗಿ ಬಿಂಬಿಸಿದ ಆಡಳಿತ ಮಂಡಳಿಯ ಜೀವವಿರೋಧಿ ನೀತಿ-ನಿಯಮ ಅಕ್ಷಮ್ಯವೇ ಸರಿ. ಆಡಳಿತ ಮಂಡಳಿಯ ಮಹಾಮಹಿಮರು ಸಮಯಪ್ರಜ್ಞೆಯಿಂದ ವರ್ತಿಸಿ ಆಕ್ರೋಶಿತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಾಂತ್ವನ-ಪರಿಹಾರ ಹೇಳಿ ತಪ್ಪಿತಸ್ಥ ಶಿಕ್ಷಕರ ಮೇಲೆ ಕ್ರಮಕೈಗೊಳ್ಳುವ ಮಾತಾಡಿದ್ದರೆ ಆರಂಭದಲ್ಲೇ ಎಲ್ಲ ತಣ್ಣಗಾಗುತ್ತಿತ್ತು. ಮತಾಂಧ ಸಂಘಪರಿವಾರಿಗಳಿಗೆ ಘಟನೆಯ ದುರ್ಲಾಭ ಪಡೆಯುವ ಆಸ್ಪದವೇ ಆಗುತ್ತಿರಲಿಲ್ಲ. ಉಗುರಲ್ಲಿ ಹೋಗುವುದಕ್ಕೆ ಕೊಡಲಿ ಎತ್ತಿಕೊಂಡಂತಾಗಿದೆ ಆಡಳಿತ ಮಂಡಳಿಯ ಕೊಂಕಣಿ ಕುಳಗಳು.

ಹೊಣೆಗೇಡಿ ಪೊಲೀಸರು

ಇಡೀ ಘಟನೆಯಲ್ಲಿ ಜಿಲ್ಲಾ ಪೊಲೀಸರ ಲೋಪ ಎದ್ದು ಕಾಣುತ್ತದೆ. ಆಸ್ಪತ್ರೆ ಬಳಿಯೇ ಆಕ್ರೋಶಿತರು ದೊಂಬಿ ಎಬ್ಬಿಸಿದಾಗ ಪೊಲೀಸರು ಎಚ್ಚೆತ್ತುಕೊಳ್ಳಬೇಕಿತ್ತು. ಪಕ್ಕದ ತಾಲ್ಲೂಕಿನಿಂದ ಹೆಚ್ಚಿನ ಪೊಲೀಸ್ ಸಿಬ್ಬಂದಿ ತರಿಸಿ ಬಂದೋಬಸ್ತ್ ಮಾಡಬೇಕಿತ್ತು. ಶಾಲೆಯ ಗೇಟ್ ಬಂದ್ ಮಾಡಬೇಕಿತ್ತು, ಶಾಲೆಗೆ ತಕ್ಷಣ ರಜೆ ಘೋಷಿಸಬೇಕಿತ್ತು. ಅಂದು ಪಿಎಸ್‌ಐ ರೇವತಿ ಸಿಪಿಐ ಜಗದೀಶ್ ಇಬ್ಬರೂ ತಾಲ್ಲೂಕಿನಲ್ಲಿರಲಿಲ್ಲ. ಓನ್ ಡ್ಯೂಟಿ ಹೊರಹೋಗಿದ್ದರು. ಇದ್ದವನೊಬ್ಬ ಕ್ರೈಮ್ ಎಸ್‌ಐ ತಿಗಡಿ ಎಂಬ ಸಿಪಿಐ ಸಾಹೇಬರ ಬಂಟ ಈತನಿಗೆ ಸಾಹೇಬರಿಗೆ ಬೇಕಾದ್ದು ಸಪ್ಲೈ ಮಾಡೋದು ಬಿಟ್ಟು ಬೇರೇನೂ ತಿಳಿಯದ್ದು. ಪೊಲೀಸರಿಗೆ ಮಾರ್ಗದರ್ಶನ ಮಾಡುವ ಜವಾಬ್ದಾರಿಯುತ ಪೊಲೀಸ್ ಅಧಿಕಾರಿಗಳ್ಯಾರೂ ನಗರದಲ್ಲಿಲ್ಲ. ಎಸ್ಪಿ ಮತ್ತು ಮೀಸಲು ಪಡೆ ಬರುವಾಗ ನಾಲ್ಕು ತಾಸುಗಳೇ ಕಳೆದುಹೋಗಿತ್ತು. ಇಂಥ ಸಂದರ್ಭದಲ್ಲಿ ಜನ ಸಹನೆ ಕಳೆದುಕೊಳ್ಳುವುದು ಸಹಜ. ಅದಕ್ಕೆ ಹಿಂದೂ-ಮುಸ್ಲಿಂ-ಕ್ರೈಸ್ತರೆಂಬ ಭೇದವಿಲ್ಲ. ಮುಸ್ಲಿಮರು ಹಿಂದೂ ಶಾಲೆ ಮೇಲೆ ದಾಳಿ ಮಾಡಿದ್ದಾರೆಂದು ಚೆಡ್ಡಿಗಳು-ಮೇಲ್ವರ್ಗದ ಧಗಾಕೋರರು ಮತಾಂಧ ಮಾತನಾಡುವುದು ಅರ್ಥಹೀನ. ಆಡಳಿತ ಮಂಡಳಿಯವರು ಮತ್ತು ಪೊಲೀಸರು ಸಿಟ್ಟಿಗೆದ್ದ



ಪ್ರತಿಭಟನಾಕಾರರ ವಿಶ್ವಾಸಕ್ಕೆ ತೆಗೆದುಕೊಂಡು ಪರಿಸ್ಥಿತಿ ವಿಕೋಪಕ್ಕೆ ಹೋಗದಂತೆ ತಡೆಯಬಹುದಿತ್ತು. ಇದು ಸರಳ ಸತ್ಯ.

ಚೆಡ್ಡಿಗಳು ಫೀಲ್ಡಿಗೆ

ಹೊನ್ನಾವರದಲ್ಲಿ ಆರೆಸ್ಸೆಸ್ ಅಂದರೆ ಕೊಂಕಣಿಗಳು; ಕೊಂಕಣಿಗರೆಂದರೆ ಆರೆಸ್ಸೆಸ್! ಹೀಗಾಗಿ ಸ್ವಜಾತಿಯ ನ್ಯೂ ಇಂಗ್ಲಿಷ್ ಸ್ಕೂಲ್ ಸಂಸ್ಥೆಯಲ್ಲಾದ ದೊಂಬಿ-ಹಾನಿಯಿಂದ ಆರೆಸ್ಸೆಸ್ ಘಂಟರ್‌ಗಳು ಸಾಬರ ವಿರುದ್ಧ ತಿರುಗಿ ಬಿದ್ದಿದ್ದಾರೆ. ಹೊನ್ನಾವರ ಬಂದ್ ಕೂಡ ಮಾಡಿ ಮುಗಿಸಿದ್ದಾರೆ. ಬಂದ್ ಪ್ರತಿಭಟನೆ ಮಾಡಿ ಮುಸ್ಲಿಮರ ವಿರುದ್ಧ ತುಚ್ಛವಾಗಿ-ಅವಹೇಳನಕಾರಿಯಾಗಿ ಕೂಗಾಡಿದ್ದಾರೆ. ಕೋಮುಗಲಭೆಗೆ ಪ್ರಚೋದಿಸುವ ಘೋಷಣೆ-ಭಾಷಣ ಪೊಲೀಸರೆದುರೇ ಹಿಂದೂ ಪ್ರತಿಭಟನಾಕಾರರು ಮಾಡಿದ್ದಾರೆ. ಈ ಮೇಲ್ವರ್ಗದ ಚೆಡ್ಡಿಗಳ ಜತೆ ಸಂಘಪರಿವಾರದ ಹಿಂದೂತ್ವದ ಅಸಲಿಯತ್ತು ಗೊತ್ತಿಲ್ಲದ ಹಿಂದುಳಿದ ವರ್ಗದ ಒಂದಿಷ್ಟು ನಾಯ್ಕ, ಮೇಸ್ತರಂಥವರು ಸೇರಿಕೊಂಡಿದ್ದಾರೆ. ಶ್ರೀರಾಮಸೇನೆಯ ಪ್ರಮೋದ್ ಮುತಾಲಿಕ್ ಬಂದು ಮತಾಂಧ ಮಸಲತ್ತು ಮಾಡಿ ಹೋಗಿದ್ದಾನೆ!

ಹಿಂದೂಗಳು ಆಡಳಿತ ಮಂಡಳಿ ಕೊಟ್ಟಿರುವ ದೂರಿನಲ್ಲಿರುವ 9 ಜನ ಮಲೆಯಾಳಿ ಮುಸ್ಲಿಮರ ಬಂಧಿಸಲು ಪೊಲೀಸರಿಗೆ ಒತ್ತಡ ಹೇರುತ್ತಿದ್ದಾರೆ. ಆದರೆ ಮೃತ ಬಾಲಕ ಅಫ್ಜಲ್‌ನ ತಾಯಿ ಕೊಟ್ಟಿರುವ ದೂರಿನಂತೆ ಹೆಡ್‌ಮಾಸ್ಟರ್ ಹೆಬ್ಬಾರ್, ಪಿಟಿ ಮಾಸ್ಟರ್ ನಾಯ್ಕನನ್ನು ಬಂಧಿಸಿ ಕಸ್ಟಡಿಯಲ್ಲಿಡಲಾಗಿದೆ. ಕೊಂಕಣಿ ಮುಖಂಡರು ಇದನ್ನು ಪ್ರತಿಷ್ಠೆಯ ಪ್ರಶ್ನೆಯಾಗಿಸಿಕೊಂಡಿದ್ದಾರೆ. ಇಡೀ ಪ್ರಕರಣಕ್ಕೀಗ ಕಮ್ಯುನಲ್ ಕಲರ್ ಬಂದುಬಿಟ್ಟಿದೆ. ಆಡಳಿತ ಮಂಡಳಿ ಮೃತ ಅಫ್ಜಲ್‌ನ ಮನೆಯವರಿಗೆ ಒಂದು ಲಕ್ಷ ಪರಿಹಾರ ಘೋಷಿಸಿದರೂ ಇದರಿಂದ ಅವರ ಹೊಟ್ಟೆಯುರಿ ತಣಿಯಲಾರದು, ಬಿಡಿ.

ಎರಡೂ ಕಡೆಯವರಿಂದ ತಪ್ಪು ಯಥೇಚ್ಛವಾಗಿ ನಡೆದಿದೆ. ಅಫ್ಜಲ್‌ನ ಬಗ್ಗೆ ಮಾಸ್ತರರಿಗೆ ಹೇಗೆ ನಿಗಾ ಇರಲಿಲ್ಲವೋ ಹಾಗೆ ಆತನ ಪಾಲಕರಿಗೂ ಕಾಳಜಿ ಇದ್ದಂತಿರಲಿಲ್ಲ. ಹುಡುಗ ಆಗಾಗ ಶಾಲೆಗೆ ಚಕ್ಕರ್ ಹೊಡೆದರೂ ಪಾಲಕರು ಶಾಲೆಗ ಬಂದು ಕಾರಣ ತಿಳಿಸಿರಲಿಲ್ಲ. ಆ ಹುಡುಗನ ಹಿನ್ನೆಲೆ-ಮುನ್ನೆಲೆ ಅಭ್ಯಸಿಸಿ ಶಿಕ್ಷಕರು ಆಪ್ತ ಸಲಹೆ ನೀಡಲಿಲ್ಲ. ಕಾಟಾಚಾರದ ಡ್ಯೂಟಿ ಮಾಸ್ತರುಗಳು ಮಾಡುತ್ತಿದ್ದಾರಷ್ಟೇ. ಆದರೆ ಅಫ್ಜಲ್‌ನ ಸಾವಿದೆಯಲ್ಲ, ಅದು ಮಾಸ್ತರರಿಂದಾದ ಅನುದ್ದೇಶಿತ ಅನಾಹುತ. ಅದನ್ನು ಅಫ್ಜಲ್‌ನ ಕಡೆಯವರು ಸಂಯಮದಿಂದಲೇ ಎದುರಿಸಬೇಕಿತ್ತು. ವಿದ್ಯಾಸಂಸ್ಥೆ ಧ್ವಂಸ-ಶಿಕ್ಷಕ ಶಿಕ್ಷಕಿಯರ ಮೇಲೆ ಹಲ್ಲೆ ಮಾಡಿದ್ದು ತಪ್ಪು! ಮಾಸ್ತರರು ಮತ್ತು ಅಫ್ಜಲ್‌ನ ಕಡೆಯವರಿಗಿಂತ ದೊಡ್ಡ ಅಪರಾಧ ಆಡಳಿತ ಮಂಡಳಿಯ ಭೂಪರು ಮತ್ತು ಪೊಲೀಸರು ಮಾಡಿದ್ದಾರೆ. ಇದೆಲ್ಲ ಜಗಳಗಂಟಿ ಚೆಡ್ಡಿ-ಕಾವಿ ಗ್ಯಾಂಗ್ ತಮ್ಮ ಹಿಡನ್ ಹಿಂದೂತ್ವದ ಜಾರಿಗೆ ಅನಾಹುತಕಾರಿಯಾಗಿ ಬಳಸಿಕೊಳ್ಳುತ್ತಿದೆ. ಈಗಲಾದರೂ ಎರಡೂ ಕಡೆಯವರು ಮನುಷ್ಯತ್ವದಿಂದ ವರ್ತಿಸಬೇಕಿದೆ. ಹೊನ್ನಾವರದ-ಉತ್ತರ ಕನ್ನಡದ ನೆಮ್ಮದಿ-ಸೌಹಾರ್ದದ ದೃಷ್ಟಿಯಿಂದ ರಾಜಿ ಸಂಧಾನ ಮಾಡಿಕೊಳ್ಳಬೇಕಿದೆ. ಅಫ್ಜಲ್‌ನಿಗೆ ಕೊಟ್ಟಿರುವ ಶಿಕ್ಷೆ ಆತನ ಹಿತದೃಷ್ಟಿಯಿಂದಲೇ ಕೊಟ್ಟಿದ್ದಾಗಿತ್ತು. ಉದ್ದೇಶ ಒಳ್ಳೆಯದಿದ್ದರೂ ಹುಂಬ ಮಾಸ್ತರರಿಗೆ ಅದನ್ನು ಸೌಮ್ಯವಾಗಿ ಬಳಸುವುದು ಗೊತ್ತಿರಲಿಲ್ಲವಷ್ಟೇ. ಹಾಗಾಗಿ ಅಫ್ಜಲ್‌ನ ಹೆತ್ತವರು ದೊಡ್ಡಮನಸ್ಸು ಮಾಡಿ ಮಾಸ್ತರರ ಕ್ಷಮಿಸಬೇಕಿದೆ. ಹಾಗೆಯೇ ಆಡಳಿತ ಮಂಡಳಿಯ ಅವಾಂತರಕಾರಿಗಳು ಪ್ರತಿಷ್ಠೆ ಬಿಟ್ಟು ದೊಂಬಿದಾರರ ಮೇಲೆ ಪೊಲೀಸರಿಂದ ಅಥವಾ ಚೆಡ್ಡಿಗಳಿಂದ ಹಣಿಸಿ ಸೇಡು ತೀರಿಸಿಕೊಳ್ಳುವ ಮೂರ್ಖತನಕ್ಕೆ ಇಳಿಯಬಾರದು. ಎರಡೂ ಕಡೆಯವರು ಪೊಲೀಸ್ ದೂರು ವಾಪಸ್ ಪಡೆದು ತಾಲ್ಲೂಕಿನ ಶಾಂತಿ-ಸೌಹಾರ್ದತೆ ಮತ್ತು ಶೈಕ್ಷಣಿಕ ಪರಿಸರ ಕೆಡದಂಥ 'ಪುಣ್ಯ ಕಾರ್ಯ' ಮಾಡಬೇಕಿದೆ.


ಜ್ವಾಲಾಮುಖಿ ಮೇಲಿರುವಂತೆ ಚಡಪಡಿಸುತ್ತಿರುವ ಹೊನ್ನಾವರಕ್ಕೆ, ಸಣ್ಣ ಸಂಶಯ-ಅಪನಂಬಿಕೆಯ ಗಾಳಿ ಸೋಕಿದರೂ ಸಾಕು; ಅನಾಹುತ ಗ್ಯಾರಂಟಿ. ಹಾಗಾದರೆ ಇತಿಹಾಸ ಅಫ್ಜಲ್‌ನ ಕಡೆಯ ಸಾಬಿಗಳಿಗಾಗಲಿ, ಆಡಳಿತ ಮಂಡಳಿಯ ಹಿಂದೂಗಳಿಗಾಗಲಿ ಕ್ಷಮಿಸದು! 'ಪತ್ರಿಕೆ'ಯ ಕಳಕಳಿ ಜಿಲ್ಲೆಯ ಮಂತ್ರಿ-ಶಾಸಕ-ಜಿಲ್ಲಾಡಳಿತಕ್ಕೆ ಅರ್ಥವಾದೀತಾ? ಮೃತ ಬಾಲಕ ಅಫ್ಜಲ್‌ನ ಕಡೆಯವರು ಮತ್ತು ನ್ಯೂ ಇಂಗ್ಲಿಷ್ ಸ್ಕೂಲ್ ಆಡಳಿತ ಮಂಡಳಿಯವರು ಮಾನವೀಯತೆಯಿಂದ ವರ್ತಿಸುವರಾ?

ಒಣ ಪ್ರತಿಷ್ಠೆಯ ಹಠದಿಂದ ಯಾರಿಗೂ ಒಳಿತಾಗದು!!

● ನಹುಶ

ತೆಲುಗು ಸಿನಿಮಾಗಳಿಗೆ ಹಂತಕರ ದುಡ್ಡು

ಸೂರಿ ಹಂತಕನ ಜೊತೆ ರವಿ ಪೂಜಾರಿ ಗ್ಯಾಂಗ್?


ಸೂರಿ

ತೆಂಧ್ರದ ಫ್ಯಾಕ್ಷನಿಸ್ಟ್ ರೆಡ್ಡಿಗಳ ದಂಡನಾಯಕನಂತಿದ್ದ ಲ ಸೂರಿ ಅಲಿಯಾಸ್ ಸೂರ್ಯನಾರಾಯಣ ರೆಡ್ಡಿಯ ಕೇಸು ಎತ್ತಿಂದೆತ್ತ ಹೊರಳಿದರೂ ಅಂತಿಮವಾಗಿ ಸೂರಿಗೇ ಬಂದು ನಿಲ್ಲುತ್ತಿದೆ!


ಸದ್ಯ ಆಂಧ್ರಕ್ಕೆ ಗೃಹಮಂತ್ರಿಯಾಗಿರುವ ಸಬೀತಾ ಇಂದ್ರರೆಡ್ಡಿಯ ಮಗ ಕಾರ್ತಿಕ್ ರೆಡ್ಡಿಯಿಂದ ಹಿಡಿದು ಮುವಾಡಾಕ್ಕೆ ಎಸ್ಪಿಯಾಗಿದ್ದ ಆಂಧ್ರದ ಐಪಿಎಸ್ ಅರಿ ಸೀತಾರಾಮಾಂಜನೇಯಲು, ಹೈದ್ರಾಬಾದಿನ ರ್ ಎಸ್ಟೇಟ್ ಕುಳ ಪವನ್ ರೆಡ್ಡಿ, ಆಂಧ್ರದ ನೀರಾವರಿ ಖೆಯ ಇಂಜಿನಿಯರ್ ಶೈಲೇಂದ್ರ ರೆಡ್ಡಿ; ಇತ್ಯಾದಿಯಾಗಿ ಯಾರನ್ನೋ ಹಾದು ಸಾಗುವ ಸೂರಿ ಹತ್ಯೆಯ ಮರ್ಮ ಮವಾಗಿ ಬಂದು ನಿಲ್ಲುವುದು ಬೆಂಗಳೂರಿಗೇ!

ಸೂರಿಯ ಬಲಗೈ ಬಂಟನಂತಿದ್ದ ಭಾನುಕಿರಣ್ ತನ್ನ ಸುನ್ನೇ ಕೊಂದು ಹಾಕಿದ್ದರ ಹಿಂದೆ ಆತನ ಕೋಟಿ ಆಸ್ತಿಯೇ ಮೂಲವಾಗಿತ್ತೆಂಬುದು ಮೇಲುನೋಟಕ್ಕೆ ಬರುವ ಕಾರಣವಾದರೂ ಹಕೀಕತ್ತು ಬೇರೆಯೇ ರಾಮೋಜಿ ಸ್ಟುಡಿಯೋದ ಬಾಂಬ್ ಸ್ಫೋಟ ಮತ್ತು ಲ ರವಿ ಹತ್ಯೆ ಕೇಸಲ್ಲಿ ವರ್ಷಾನುಗಟ್ಟಲೇ ಜೈಲಿನಲ್ಲಿದ್ದ ಜೈಲಲ್ಲಿದ್ದೇ ಆಂಧ್ರದ ರಿಯಲ್ ಎಸ್ಟೇಟ್

ರಕ್ತ ಚರಿತ್ರ'ಕ್ಕೂ ರಕ್ತದ ರೊಕ್ಕ?

ಸಾಮ್ರಾಜ್ಯವನ್ನು ಸಂಭಾಳಿಸುತ್ತಿದ್ದ. ಅದಕ್ಕೆ ಆತ ನಂಬಿದ್ದು ನುಕಿರಣ್‌ನನ್ನು. ಈ ಭಾನುಕಿರಣ್‌ಗೂ ಬೆಂಗಳೂರು ರ್‌ವರ್ಲ್ಡ್‌ಗೂ ಸಂಬಂಧವಿತ್ತೆಂಬ ಬಗ್ಗೆ ಆಂಧ್ರದ ೀಸರಿಗೆ ಸ್ಪಷ್ಟ ಮಾಹಿತಿಯಿದೆ. ಅದೂ ಬೆಂಗಳೂರಿನ ಪೂಜಾರಿಯ ಶಿಷ್ಯರ ಜೊತೆ ಭಾನು ಆಪ್ತ ಒಡನಾಟ ಕೊಂಡಿದ್ದ. ರವಿ ಪೂಜಾರಿಯ ಜೊತೆ ನೇರವಾಗೇ ರ್ ಸಂಪರ್ಕವನ್ನೂ ಸಾಧಿಸಿದ್ದ. ಯಲಹಂಕ ಶಾಸಕ ನಾಥ ರೆಡ್ಡಿ. ಸೂರಿ ಜೊತೆ ಕೂತು ಕಾವೇರಿ ಮಂದಿರದಲ್ಲಿ ರಾಮ್‌ಗೋಪಾಲ್ ವರ್ಮನ 'ರಕ್ತ ' ಚಿತ್ರ ನೋಡಿದ ದೃಶ್ಯಾವಳಿಗಳು ಅನೇಕ ಟಿವಿ ಲ್ಗಳಲ್ಲಿ ಪ್ರಸಾರವಾಗಿತ್ತಲ್ಲ; ಹೀಗೆ ಶಾಸಕ ವಿಶ್ವನಾಥ್ ಸೂರಿ ಮಧ್ಯೆ ಕೊಂಡಿಯಂತಿದುದ್ದೇ ಭಾನುಕಿರಣ್.

ವಿಶ್ವನಾಥ್ ಪಾಲಿಗೆ ರಾಜಕೀಯ ಯಾಗಿದ್ದ ಬುಲೆಟ್ ರವಿಯನ್ನು ದ್ದು ಸೈಲೆಂಟ್ ಸುನೀಲ ಮತ್ತು ಾಗರ ಗ್ಯಾಂಗು ಎಂಬುದು ಳೂರು ಪೊಲೀಸರು ಹೊಸೆದ ದರೂ ಅಷ್ಟೊಂದು ತವಾಗಿ ಮುಗಿಸಿದ್ದು ಮಾತ್ರ ಯುದೇ ಕೈಚಳಕವಾಗಿತ್ತೆಂಬುದು ಪೊಲೀಸರಿಗಿರುವ ಗುಮಾನಿ!



ಭಾನುಕಿರಣ್

ಅತ್ತ ಆಂಧ್ರದ ಜೈಲುಗಳಲ್ಲಿ ಎಣಿಸುತ್ತ ಸೂರಿ ಹೈರಾಣಾದರೆ ಾಗಿದ್ದ ಭಾನುಕಿರಣ್ ಆತನ ಇದೀ ಸಾಮ್ರಾಜ್ಯಕ್ಕೆ ವಾರಸುದಾರನಂತಿದ್ದ, ಬಂಟ ಭಾನುವನ್ನು ಬಟ್ಟಗೆ ನಂಬಿದ್ದೇ ಸೂರಿಯ ಮಹಾಪರಾಧವಾಗಿತ್ತು ಸೂರಿಯ ಹೆಸರಲ್ಲಿ ಯಾವ ಮಟ್ಟಕ್ಕೆ ಬೆಳೆದನೆಂದರೆ ದ ಸಿನಿಮಾ ಜಗತ್ತಿನ ದೊಡ್ಡದೊಡ್ಡ ಕುಳಗಳೇ ತನ್ನೆದುರು ನಿಲ್ಲುವಂತೆ ಮಾಡಿಕೊಂಡ. ಮಹೇಶ್‌ಬಾಬು ಯದ 'ಕಲೇಜ ಎಂಬ ಸೂಪರ್‌ಹಿಟ್ ಚಿತ್ರಕ್ಕೆ ಭಾನು ವಾಳ ಹಾಕಿದ್ದ. ಚಿರಂಜೀವಿ ತಮ್ಮ ಪವನ್ ಕಲ್ಯಾಣ ದ್ದ ಮತ್ತೊಂದು ಹಿಟ್ ಚಿತ್ರ 'ಕುಮರಂ ಪುಲಿ' ಈತನೇ ಗುಪ್ತ ನಿರ್ಮಾಪಕನಾಗಿದ್ದ. ಆಂಧ್ರ ೀಸರಿಗೆ ಇವತ್ತಿಗೂ ಇರುವ ಮತ್ತೊಂದು ಗುಮಾನಿ ದರೆ ರಾಮ್‌ಗೋಪಾಲ್ ವರ್ಮನ 'ರಕ್ತಚರಿತ್ರ' ಭಾಗ


ಕೊಲೆಯಾದ ಸೂರಿ

2 ರ ತೆಲುಗು ಅವತರಣಿಕೆಗೆ ಭಾನುವಿನ ಮೂಲಕ ಸೂರಿಯೇ ದುಡ್ಡು ಹಾಕಿದ್ದ!

ಬರುಬರುತ್ತಾ ಭಾನು ತೆಲುಗು ಸಿನಿಮಾ ಲೋಕದಲ್ಲಿ ಯಾಪಾಟಿ ಬೆಳೆದನೆಂದರೆ ಹಣಕಾಸಿನ ಸಂಕಟಕ್ಕೆ ಸಿಲುಕಿ ಅರ್ಧಕ್ಕೆ ನಿಂತಿದ್ದ ಅರ್ಧ ಡಜನ್ ಸಿನಿಮಾಗಳ ನಿರ್ಮಾಪಕರನ್ನು ಕರೆಸಿಕೊಂಡು ಅವುಗಳ




ರೈಟ್ಸ್ ಬರೆಸಿಕೊಂಡು ಫೈನಾನ್ಸ್ ಮಾಡಿದ್ದ. ಜೈಲಲ್ಲಿದ್ದ ಸೂರಿಗೆ ತನ್ನ ಹೆಸರಲ್ಲಿ ಭಾನು ನಡೆಸುತ್ತಿದ್ದ ಬಹುತೇಕ ವಹಿವಾಟಿನ ಪ್ರಜ್ಞೆಯೇ ಇರಲಿಲ್ಲ. ಹುಂಬನಂತೆ ಭಾನು ಹೇಳಿದ್ದನ್ನೇ ನಂಬಿದ. ಕಾಲಕ್ರಮೇಣ ಭಾನು ಡ್ರೈವರ್ ಮಧುಸೂದನ ರೆಡ್ಡಿಯನ್ನೂ ಬುಟ್ಟಿಗೆ ಹಾಕಿಕೊಂಡ.

ಇಲ್ಲಿಗೆ ಎಂಟು ತಿಂಗಳ ಹಿಂದೆ ಜೈಲಿಂದ ಹೊರ ಬಂದಿದ್ದೇ ಸೂರಿಗೆ ಸತ್ಯ ಗೋಚರವಾಗಲಾರಂಭಿಸಿತ್ತು. ಹಾಗಿದ್ದೂ ಭಾನುವನ್ನು ಜೊತೆಗೆ ಇಟ್ಟುಕೊಂಡಿದ್ದು ಆತನ ಯಡವಟ್ಟಾಗಿತ್ತು. ಸೂರಿಗೆ ಬೇರೆ ವಿಧಿಯೇ ಇರಲಿಲ್ಲ. ಏಕೆಂದರೆ ತನ್ನೆಲ್ಲಾ ಗಳಿಕೆಯನ್ನು ಆತನ ಮೂಲಕವೇ ಸೂರಿ ಬೇರೆ ಬೇರೆ ದಂಧೆ ತೊಡಗಿಸಿದ್ದನಲ್ಲ. ಉಪಾಯವಾಗಿ ಅದೆಲ್ಲವನ್ನು ತನ್ನ ವಶಕ್ಕೆ ಪಡೆದ ನಂತರವೇ ಭಾನುವನ್ನು ನಿಕಾಲಿ ಮಾಡುವ ಹುನ್ನಾರ ಸೂರಿಯದಾಗಿತ್ತು. ಆದರೆ ಹೈದರಾಬಾದಿನ ರಿಯಲ್ ಎಸ್ಟೇಟ್ ಮಾಫಿಯಾ ಬಿಡಬೇಕಲ್ಲ. ಸದ್ಯ ಹೈದರಾಬಾದಿನ ರಿಯಲ್ ಎಸ್ಟೇಟ್ ಮಾಫಿಯಾ ಅನ್ನು ಸಂಭಾಳಿಸುತ್ತಿರುವವನು ಆಂಧ್ರದ ಹೋಮ್ ಮಿನಿಸ್ಟರ್ ಸಬಿತಾ ಇಂದ್ರಾ ರೆಡ್ಡಿಯ ಮಗ ಕಾರ್ತಿಕ್ ರೆಡ್ಡಿ. ಮೊದ ಮೊದಲು ಸೂರಿಗೆ ವಿಧೇಯನಾಗೇ ಇದ್ದ ಕಾರ್ತಿಕ್ ರೆಡ್ಡಿ ಕಾಲಕ್ರಮೇಣ ತಾನೇ ಸ್ವತಂತ್ರವಾಗಿ ಡೀಲಿಗಿಳಿದ. ತಾಯಿಯೇ ಪೊಲೀಸು ಖಾತೆ ಮಂತ್ರಿಯಾದ್ದರಿಂದ ಬಹುತೇಕ ಪೊಲೀಸ್ ಅಧಿಕಾರಿಗಳೆಲ್ಲ ಈತನಿಗೆ ಸಲಾಮು ಹಾಕತೊಡಗಿದರು. ಈ ಮಧ್ಯೆ ಸೂರಿ ಬಂಟ ಭಾನು ಕಾರ್ತಿಕ್ ರೆಡ್ಡಿಯ ಜೊತೆ ಬಿದ್ದು ಲ್ಯಾಂಡ್ ಡೀಲುಗಳನ್ನು ನಡೆಸಲಾರಂಭಿಸಿದ.

ತಾನು ಸೂರಿಯನ್ನು ಮೀರಿಸಿ ಡಾನ್ ಪಟ್ಟಕ್ಕೇರಬೇಕೆಂಬ ದುರಾಸೆ ಆತನ ತಲೆ ಹೊಕ್ಕಿತ್ತು, ಇದಕ್ಕೆ ತಕ್ಕಂತೆ ಕೃಷ್ಣಾ ಜಿಲ್ಲೆಯ ಬೆದವಾಡದ ಅನ್ನಪೂರ್ಣ ಪ್ಯಾಕೇಜಿಂಗ್ ಇಂಡಸ್ಟ್ರಿಯ ರಾದ್ಧಾಂತಕ್ಕೆ ಭಾನು ಕೈಹಾಕ್ಕಿ. ಅದು ಅಣ್ಣ ತಮ್ಮಂದಿರ ಮಧ್ಯದ ಪಾಲಿನ ಜಗಳ. ಇಂಥದೊಂದು ಡೀಲನ್ನು ಭಾನುವುಗೆ ತಂದೊಪ್ಪಿಸಿದವನು ಚಿತ್ತೂರಿನ ಪವನ್ ರೆಡ್ಡಿ,


ಈತ ಹೈದರಾಬಾದ್ ನಟೋರಿಯಸ್ ಲ್ಯಾಂಡ್ ಡೀಲರ್. ಹೋಮ್ ಮಿನಿಸ್ಟರ್ ಇಂದ್ರಾರೆಡ್ಡಿಯ ಮಗ ಕಾರ್ತಿಕ್ ರೆಡ್ಡಿ ಪರಮಾಪ್ತ.


ಪವನ್ ರೆಡ್ಡಿ ಮತ್ತು ಕಾರ್ತಿಕ್ ರೆಡ್ಡಿ ಸೇರಿ ಡೀಲಿಗಿಳಿದಿದ್ದ ಒಂದೆರಡು ಪ್ರಕರಣಗಳಲ್ಲಿ ಸೂರಿ ತಲೆಹಾಕಿದ್ದೇ ಯಡವಟ್ಟಾಗಿತ್ತು. ಆ ಹೊತ್ತಿಗಾಗಲೇ ಭಾನು, ಪವನ್ ರೆಡ್ಡಿಯ ಮೂಲಕ ಕಾರ್ತಿಕ್ ರೆಡ್ಡಿಗೆ ಆಪ್ತನಾಗಿದ್ದ. ಬೆದವಾಡದ ಅನ್ನಪೂರ್ಣ ಪ್ಯಾಕೇಜಿಂಗ್ ಇಂಡಸ್ಟ್ರೀಸ್‌ನ ಡಿಸ್‌ಪ್ಯೂಟಗೆ ಸೂರಿಯ ಹೆಸರಲ್ಲಿ ಎಂಟ್ರಿ ಕೊಟ್ಟ ಭಾನು ಕ್ರಮೇಣ ತಾನೇ ಅದಕ್ಕೆ ಡೈರೆಕ್ಟರ್ ಆಗಿಬಿಟ್ಟಿದ್ದ. ಕಿತ್ತಾಡುತ್ತಿದ್ದ ಅಣ್ಣತಮ್ಮಂದಿರ ಪೈಕಿ ಓರ್ವನನ್ನು ಎತ್ತಾಕಿಕೊಂಡು ಹೋಗಿ ಖಾಲಿ ಕಾಗದಪತ್ರಗಳಿಗೆ ಸಹಿ ಹಾಕಿಸಿಕೊಂಡ. ಈ ಬಗ್ಗೆ ಪೊಲೀಸ್ ಠಾಣೆಗೆ ದೂರು ಹೋಗಿತ್ತಾದರೂ ಆಗ ವಿಜಯವಾಡಕ್ಕೆ ಎಸ್ಪಿಯಾಗಿದ್ದ ಸೀತಾರಾಮಾಂಜನೇಯಲು ಲ್ಯಾಂಡ್ ಡೀಲರ್ ಪವನ್ ರೆಡ್ಡಿಯ ಖಾಸಾ ಗೆಳೆಯ.


ಪೆರಿಟಾಲ್‌ರವಿ

ಸದ್ಯ ಲೇಡಿ ಡಾಕ್ಟರ್ ಒಬ್ಬಳ ಜೊತೆ ಲೈಂಗಿಕ ಹಗರಣದಲ್ಲಿ ಸಿಕ್ಕಿಬಿದ್ದು ಸಸ್ಪೆಂಡಾಗಿರುವ ಆಂಧ್ರ ಐಪಿಎಸ್ ಅಧಿಕಾರಿ ಸೀತಾರಾಮಾಂಜನೇಯಲು ಆವತ್ತು ಭಾನುಕಿರಣ್‌ನನ್ನು ಬಂಧಿಸಿ ಜೈಲಿಗೆ ಹಾಕಿದ್ದರೆ ಬಹುಶಃ ಸೂರಿ ಬದುಕಿರುತ್ತಿದ್ದನೇನೊ!

ಹೀಗೆ ಜೈಲಿಗೆ ಹೋಗಬೇಕಿದ್ದ ಭಾನುಕಿರಣ್‌ನನ್ನು ಸೇಫಾಗಿ ಬೆಂಗಳೂರು ಸೇರಿಕೊಳ್ಳುವಂತೆ ಮಾಡಿದ ಎಸ್ಪಿ; ರಾಮಾಂಜನೇಯಲುಗೆ ಭಾನು ಪರವಾಗಿ ಕಾರ್ತಿಕ್ ರೆಡ್ಡಿಯಿಂದ 'ಲ್ಯಾಂಡ್ ಡೀಲರ್ ಪವನ್ ರೆಡ್ಡಿ ಫೋನ್ ಮಾಡಿಸಿದ್ದ. ಹಾಗೇ ಹೈದ್ರಾಬಾದ್‌ನಿಂದ ಎಸ್ಕೇಪಾಗಿ ಬಂದ ಭಾನು ನೇರವಾಗಿ ಬೆಂಗಳೂರಿಗೆ ಬಂದವನೇ ಅಮೃತಹಳ್ಳಿಯ ಸಾಯಿ ಕುಟೀರ ಅಪಾರ್ಟ್‌ಮೆಂಟ್ ಸೇರಿಕೊಂಡ. ಈ ಸಾಯಿ ಕುಟೀರ ಅಪಾರ್ಟ್‌ಮೆಂಟ್ ಚಿತ್ತೂರಿನ ಶೈಲೇಂದ್ರ ರೆಡ್ಡಿ ಎಂಬಾತನಿಗೆ ಸೇರಿದ್ದು. ಕೊಡಿಗೇಹಳ್ಳಿ ಗೇಟ್ ಸಮೀಪದ ಈ ಸಾಯಿ ಕುಟೀರ ಅಪಾರ್ಟ್‌ಮೆಂಟ್ ಅನ್ನು ಸೂರಿ ಶಿಷ್ಯ ಭಾನುಗೆಂದು ಬಿಟ್ಟುಕೊಟ್ಟಿದ್ದ ಚಿತ್ತೂರಿನ ಶೈಲೇಂದ್ರ ರೆಡ್ಡಿ ಸದ್ಯ ಆಂಧ್ರದ ನೀರಾವರಿ ಇಲಾಖೆಯಲ್ಲಿ ಇಂಜಿನಿಯರ್ ಆಗಿದ್ದನಾದರೂ ಕಳೆದೆರಡು ವರ್ಷಗಳಿಂದ ಕೆಲಸಕ್ಕೆ ಚಕ್ಕರ್ ಹಾಕಿ ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟ್ ದಂಧೆ ನಡೆಸುತ್ತಾನೆ. ಯಲಹಂಕದ ಬಿಜೆಪಿ ಶಾಸಕ ವಿಶ್ವನಾಥ್‌ಗೆ ಈತನೂ ಪರಮಾಪ್ತನೆ. ಈತನ ಅಮೃತಹಳ್ಳಿಯ ಅಪಾರ್ಟ್‌ಮೆಂಟ್‌ನಲ್ಲಿ ಸೂರಿ ಕೂಡಾ ತಂಗುತ್ತಿದ್ದ. ಸಾಲದ್ದಕ್ಕೆ ಯಲಹಂಕದ ಜ್ಯುಡಿಷಿಯಲ್ ಲೇಔಟ್‌ನಲ್ಲಿ ಬಾಡಿಗೆ ಮನೆಯೊಂದನ್ನು ಹಿಡಿದ. ಪತ್ನಿ ಭಾನುಮತಿಯ ಜೊತೆ ಸೂರಿ ಯಾವತ್ತೋ ಮಾತು ಬಿಟ್ಟಿದ್ದ. ಡೈವೋರ್ಸ್ ಇನ್ನೂ ಆಗಿಲ್ಲ ಎಂಬುದನ್ನು ಬಿಟ್ಟರೆ ಆರ್.ಟಿ. ನಗರದಲ್ಲಿದ್ದ ಭಾನುಮತಿಗೂ ಹೈದ್ರಾಬಾದಿನ ಜೈಲಲ್ಲಿದ್ದ ಸೂರಿಗೂ ಮಾತೇ ಇರಲಿಲ್ಲ.


ಮಹೇಶ್‌ಬಾಬು


ಪವನ್‌ಕಲ್ಯಾಣ್


ರಾಮ್‌ಗೋಪಾಲ್

ಬಹುಶಃ ದುಡ್ಡುಕಾಸು-ಆಸ್ತಿಯ ಮಟ್ಟಿಗಾದರೂ ಸೂರಿ ತನ್ನ ಪತ್ನಿಯನ್ನೋ ಸಂಬಂಧಿಕರನ್ನೋ ನಂಬಬೇಕಿತ್ತು, ಬದಲಿಗೆ ಕ್ರಿಮಿನಲ್ ಭಾನುವನ್ನು ನಂಬಿದ. ಆತನ ಹೆಸರಿಗೆ ತನ್ನ ಗಳಿಕೆಯ ಎಂಬತ್ತು ಕೋಟಿಯಷ್ಟನ್ನು ಹಾಕಿದ್ದ. ಬೆಂಗಳೂರಿನ ಜ್ಯುಡಿಷಿಯಲ್ ಲೇಔಟನ ಬಂಗಲೆ, ಅಮೃತಹಳ್ಳಿಯ ಸಾಯಿಕುಟೀರ ಅಪಾರ್ಟ್‌ಮೆಂಟ್, ಬನಶಂಕರಿಯ ಮತ್ತೊಂದು ಮನೆ, ಹೈದರಾಬಾದಿನಲ್ಲಿ ಬಂಗಲೆ, ವಿಜಯವಾಡಾದಲ್ಲಿ ಆಸ್ತಿ, ತೆಲುಗು ಸಿನಿಮಾಗಳ ಮೇಲೆ ಮಾಡಿದ್ದ ಫೈನಾನ್ಸ್; ಹೀಗೆ ಪ್ರತಿಯೊಂದನ್ನು ಭಾನು ಹೆಸರಿಗೆ ಮಾಡಿದ್ದ.

ಈ ಮಧ್ಯೆ ದೇವನಹಳ್ಳಿ ಏರ್‌ಪೋರ್ಟ್ ಪಕ್ಕದಲ್ಲಿ ಶಾಜಿ ಎಂಬ ಮಂಗಳೂರು ಮೂಲದ ಲ್ಯಾಂಡ್ ಡೀಲರ್ ಒಬ್ಬನ ಹನ್ನೆರಡು ಎಕರೆ ಭೂಮಿಯನ್ನು ಸೂರಿ ಖರೀದಿಸಿದ್ದ. ಅದನ್ನು ಭಾನು ಹೆಸರಿಗೆ ನೋಂದಾಯಿಸಿದ್ದ. ಯಾವತ್ತು, ಕಾರ್ತಿಕ್ ರೆಡ್ಡಿ ಮತ್ತು ಪವನ್ ರೆಡ್ಡಿ ಕೈಹಾಕಿದ್ದ ಹೈದರಾಬಾದಿನ ಲ್ಯಾಂಡ್ ಡಿಸ್‌ಪ್ಯೂಟುಗಳಿಗೆ ಸೂರಿ ಕೈಯಿಟ್ಟನೋ ಕಾರ್ತಿಕ್ ರೆಡ್ಡಿ ರೊಚ್ಚಿಗೆದ್ದ. ಮೊದಲೇ ಆಂಧ್ರದ ಗೃಹ ಮಂತ್ರಿಣಿಯ ಮಗ. ಜಗನ್ ರೆಡ್ಡಿ ಬೇರೆ ಸರ್ಕಾರದ ವಿರುದ್ಧ ತಿರುಗಿ ಬಿದ್ದಿದ್ದನಲ್ಲ. ಗಣಿರೆಡ್ಡಿಗಳನ್ನೂ ಸೇರಿಸಿ ಜಗನ್‌ನ ಎಲ್ಲಾ ಕಾರ್ಯಾಚರಣೆಗೂ ಆಂಧ್ರ ಸರ್ಕಾರ ನಿರ್ಬಂಧ ವಿಧಿಸಿದ್ದ ಸಮಯವನ್ನೇ ಕಾದು ಕಾರ್ತಿಕ್ ರೆಡ್ಡಿ ದಾಳ ಉರುಳಿಸಿಬಿಟ್ಟ. ಸೂರಿಯ ಎಲ್ಲಾ ಕಾಂಟ್ರ್ಯಾಕ್ಟುಗಳು ಮತ್ತು ಡೀಲುಗಳು ಗೊತ್ತಿದ್ದದ್ದು ಭಾನುವಿಗೆ ಮಾತ್ರ. ಸೂರಿಯ ಕಣ್ಣು ಕಿವಿ, ಮೆದುಳು ಎಲ್ಲವೂ ಆಗಿದ್ದ ಭಾನುಕಿರಣ್‌ನನ್ನೇ ಎತ್ತಿಕಟ್ಟಿಬಿಟ್ಟರೆ?

ಇಂಥ ಲೆಕ್ಕ ಹಾಕಿಯೇ ಪವನ್ ಮತ್ತು ಕಾರ್ತಿಕ್ ರೆಡ್ಡಿದ್ವಯರು ಮುಹೂರ್ತವಿಟ್ಟದ್ದಾರೆ. ಹೋಮ್ ಮಿನಿಸ್ಟರ್ ಮಗನೇ ಜೊತೆಗಿದ್ದಾನೆಂದರೆ ಯಾವ ಪೊಲೀಸರು ತಾನೇ ಏನು ಮಾಡಿಯಾರು? ಸೂರಿಯ ಎಲ್ಲಾ ಕಾಂಟ್ಯಾಕ್ಟುಗಳು ತನ್ನ ಮೂಗಿನ ನೇರಕ್ಕೆ ಇದ್ದುದರಿಂದ ತನಗೆ ಅಂಥಾ ಅಪಾಯ ಸಾಧ್ಯವಿಲ್ಲ. ಜೊತೆಗೆ ಪೆರಿಟಾಲ ರವಿ ಗ್ಯಾಂಗ್ ಕೂಡಾ ತನ್ನನ್ನು ಮುಟ್ಟುವುದಿಲ್ಲ. ಕೋಟಿಗಟ್ಟಲೇ ಆಸ್ತಿ ಬೇರೆ ತನ್ನ ಪಾಲಾಗುತ್ತದೆಯಲ್ಲ.

ಇಂಥ ಎಲ್ಲಾ ಲೆಕ್ಕ ಹಾಕಿಯೇ ಭಾನು ಸ್ಕೆಚ್ ಹಾಕಿದ್ದಾನೆ. ಬೆಂಗಳೂರಿಗಿಂತಲೂ ಹೈದ್ರಾಬಾದಿನಲ್ಲಾದರೇನೇ ಪೊಲೀಸ್ ನೆರವು ಸಾಧ್ಯವೆಂದು ಜ್ಯೂಬಿಲಿ ಹಿಲ್ಸ್ ಏರಿಯಾ ಅನ್ನೇ ಹತ್ಯೆಗೆ ಆಯ್ದುಕೊಂಡಿದ್ದಾನೆ. ಸದ್ದಿಲ್ಲದೆ ಧಣಿಯನ್ನು ಮುಗಿಸಿ ಮತ್ತೆ ಬೆಂಗಳೂರು ಸೇರಿಕೊಂಡಿದ್ದಾನೆ. ಅತ್ತ ಆಂಧ್ರ ಪೊಲೀಸರು ಅಮೃತಹಳ್ಳಿಯ ಸಾಯಿ ಕುಟೀರ ಅಪಾರ್ಟ್‌ಮೆಂಟ್‌ನ ಮೇಲೆ ದಾಳಿ ನಡೆಸಿದರಾದರೂ ಆ ಹೊತ್ತಿಗಾಗಲೇ ಭಾನು ಎಸ್ಕೇಪಾಗಿದ್ದ!


ಸಿಕ್ಕ ಲ್ಯಾಪ್‌ಟಾಪಿನಲ್ಲಿ ತೆಲುಗು ನಟಿಯರ, ಇನ್ನೂ ನಟಿಯಾಗದೇ ನಟಿಸುವ ಆಶೆ ಹೊತ್ತ ಅನೇಕ ಯುವತಿಯರ ಅರೆಬೆತ್ತಲೆ ಫೋಟೊ, ವೀಡಿಯೋಗಳು ಭಾನು ಲ್ಯಾಪ್‌ಟಾಪ್‌ನಲ್ಲಿದ್ದವಂತೆ. ಬೆಂಗಳೂರಿನ ಅರ್ಧ ಡಜನ್ ಬ್ಯಾಂಕುಗಳಲ್ಲಿ ಭಾನು ಅಕೌಂಟ್ ಹೊಂದಿದ್ದ. ಕೋಟ್ಯಂತರ ರೂಪಾಯಿ ಠೇವಣಿಯಿಟ್ಟಿದ್ದ. ಸದ್ಯ ಭಾನು ಪೊಲೀಸ್ ಕಸ್ಟಡಿಯಲ್ಲಿದ್ದಾನಾ ಅಥವಾ ನೇಪಾಳದ ಮೂಲಕ ದುಬೈಗೆ ಹೋಗಲು ಯತ್ನಿಸುತ್ತಿದ್ದಾನಾ ಗೊತ್ತಿಲ್ಲ. ಆಂಧ್ರ ಪೊಲೀಸರು ಬಾಯಿ ಬಿಡುತ್ತಿಲ್ಲ.

ಹಾಗೊಮ್ಮೆ ದುಬೈ ಸೇರಿಕೊಂಡಿದ್ದೇ ಆದಲ್ಲಿ ಒಂದಂತೂ ಸತ್ಯ; ರವಿ ಪೂಜಾರಿಯಲ್ಲದೇ ಬೇರೆ ಯಾರೂ ಭಾನು ಜೊತೆ ಕೈಜೋಡಿಸಲಿಕ್ಕಿಲ್ಲ.

ರೆಡ್ಡಿ ಗ್ಯಾಂಗ್: ಜೈಲು ಸನ್ನಿಹಿತ


ಅತ್ತ ಸುಪ್ರೀಂ ಧರಿ-ಇತ್ತ ಸಿಬಿಐ ಹುಲಿ

ಪಾಪದ ಕೊಡ ತುಂಬಿದ ನಂತರವೇ ಅವಸಾನದ ಕ್ಷಣಗಣತಿ ಶುರುವಾಗುವುದು. ಗಣಿ ರೆಡ್ಡಿಗಳ ವಿಷಯದಲ್ಲಿದು ಅಕ್ಷರಶಃ ನಿಜವಾಗುತ್ತಿದೆ. ಕೇಂದ್ರ ಉನ್ನತಾಧಿಕಾರ ಸಮಿತಿ ಅಂದರೆ ಸಿಇಸಿ ಜನವರಿ 7ರಂದು ಸುಪ್ರೀಂ ಕೋರ್ಟಿಗೇ ಸಲ್ಲಿಸಿರುವ ತನಿಖಾ ವರದಿ ಮತ್ತು ಇದೇ ಜನವರಿ 12ರಿಂದ ಪುನರಾರಂಭಗೊಂಡ ಸಿಬಿಐ ತನಿಖೆಗಳೆರಡೂ ಅಂತಿಮವಾಗಿ ಗಾಲಿ ಜನಾರ್ದನ ರೆಡ್ಡಿ, ಆತನ ಅಣ್ಣ ಕರುಣಾಕರ ರೆಡ್ಡಿ ಮತ್ತು ರೌಡಿ ಶ್ರೀರಾಮುಲು ಎಂಬ ಮೂವರೂ ಮಂತ್ರಿಗಳನ್ನು ಜೈಲಿಗೆ ಕರೆದೊಯ್ಯಲಿದೆ.




ಅಷ್ಟೇ ಅಲ್ಲ; ದೋಚಿದ ನಾಲ್ಕೂವರೆ ಸಾವಿರ ಕೋಟಿ ರೂಪಾಯಿಗಳ ಮೊತ್ತದ ಅದಿರಿನ ರೊಕ್ಕವನ್ನೂ ಕಕ್ಕಿಸಲಿದೆ. ತಾನಾಗಲಿ ತನ್ನ ಕಂಪೆನಿಗಳಾಗಲಿ ಎಲ್ಲೂ ಅಕ್ರಮ ಗಣಿಗಾರಿಕೆ ನಡೆಸುತ್ತಿಲ್ಲ ಎಂಬ ಗಣಿ ರೆಡ್ಡಿಯ ಹಸೀ ಸುಳ್ಳಿಗೆ ಇದು ನ್ಯಾಯ ಹಾಕಿದ ಸಣ್ಣ ಬರೆಯಷ್ಟೇ. ಮರ್ಮಕ್ಕೆ ಬೀಳಬೇಕಾದ ಪೆಟ್ಟು ಇನ್ನೂ ಬಾಕಿಯಿದೆ. ಗಣಿಕಳ್ಳರ ಪಾಪದ ಕೊಡ ತುಂಬುತ್ತಿದೆ ಎಂಬುದಂತೂ ಈ ಮೂಲಕ ನಿಚ್ಚಳಗೊಂಡಿದೆ.

ಅಷ್ಟಕ್ಕೂ ಸಿಇಸಿ ಅಂದರೆ ಕೇಂದ್ರ ಉನ್ನತಾಧಿಕಾರ ಸಮಿತಿಯನ್ನು ನೇಮಿಸಿದ್ದೇ ಸುಪ್ರೀಂಕೋರ್ಟು. ಇದಕ್ಕೂ ಮುನ್ನ ಸರ್ವೇ ಆಫ್ ಇಂಡಿಯಾದ ಒಂದು ಸುತ್ತಿನ ತನಿಖೆಯಾಗಿತ್ತು. ಕೇಂದ್ರ ಸರ್ವೇ ತಂಡದ ಖದೀಮರಿಗೆ ಗಣಿ ರೆಡ್ಡಿಯ ಪ್ರಸಾದವೂ ಸಂದಾಯವಾಗಿತ್ತು. ಆದರೆ ಸಿಇಸಿಯವರನ್ನು ಖರೀದಿಸುವುದು ರೆಡ್ಡಿ ಗ್ಯಾಂಗಿನಿಂದ ಸಾಧ್ಯವಾಗಲಿಲ್ಲ. ಹಾಗೇ ಸಿಬಿಐ ಕಪಿಮುಷ್ಟಿಯಿಂದ ಬಚಾವಾಗುವುದು ಕೂಡ ರೆಡ್ಡಿಗಳಿಂದಾಗಲಿಲ್ಲ. ಕಳೆದ ಡಿಸೆಂಬರ್ 21 ರಿಂದ 23ರ ತನಕ ಮೂರು ದಿನಗಳ ಕಾಲ ಬಳ್ಳಾರಿ ಮತ್ತು ಆಂಧ್ರದ ಇಡೀ ಗಡಿ ಉದ್ದಕ್ಕೂ ಸಂಚರಿಸಿ ಪ್ರತ್ಯಕ್ಷ ಪರಿಶೀಲನೆ ನಡೆಸಿದ ಸಿಇಸಿ ಅದಕ್ಕೂ ಮುನ್ನ ಒಂದು ವರ್ಷ ಕಾಲ ತನಿಖೆ ನಡೆಸಿತ್ತು.



ಒಂದೆಡೆ ಸುಪ್ರೀಂಕೋರ್ಟು ಸಿಇಸಿಗೆ ತನಿಖೆಯ ಹೊಣೆ ಒಪ್ಪಿಸುತ್ತಿದ್ದಂತೆಯೇ ಅತ್ತ ಆಂಧ್ರದಲ್ಲಿ ಗಣಿರೆಡ್ಡಿಗಳ ಗಾಡ್‌ಫಾದರ್ ವೈ.ಎಸ್.ರಾಜಶೇಖರ ರೆಡ್ಡಿಯ ದುರ್ಮರಣವಾಯಿತು. ಮುಖ್ಯಮಂತ್ರಿ ಗದ್ದುಗೆಗೇರಿದ ರೋಶಯ್ಯ ಇಡೀ ಗಣಿ ಹಗರಣವನ್ನು ಸಿಬಿಐ ತನಿಖೆಗೊಪ್ಪಿಸಿದ್ದೇ ತಡ ಗಣಿ ಖದೀಮರ ಅದೃಷ್ಟದ ಅಕೌಂಟೇ ಖಾಲಿ ಹೊಡೆದಿತ್ತು. ಉಳಿದದ್ದು ಮಾಡಿದ ಪಾಪದ ಪ್ರಾಯಶ್ಚಿತ್ತ ಮತ್ತು ಪ್ರಾರಬ್ಧ ಕರ್ಮಕ್ಕೆ ಪರಿಹಾರ ಮಾತ್ರ.

ಈಗ ಸಿಇಸಿ ಕೊಟ್ಟ ವರದಿ ಗಣಿ ರೆಡ್ಡಿಗಳು ಎಸಗಿದ ಅಷ್ಟೂ ಅನಾಹುತವನ್ನು ಇಂಚಿಂಚಾಗಿ ಬಯಲಿಗೆಳೆದಿದೆ. ಆಂಧ್ರದ ದುರಂತ ನಾಯಕ ವೈಎಸ್ಸಾರ್ ಪುತ್ರ ಜಗನ್ ಬೇನಾಮಿಯಾಗಿ ಮಾಡುತ್ತಿದ್ದ ವೈ.ಮಹಾಬಲೇಶ್ವರಪ್ಪ ಅಂಡ್ ಸನ್ಸ್‌ನ ಕಳ್ಳ ಗಣಿ ಮತ್ತು ಬಿಐಓಪಿ ಅರ್ಥಾತ್ ಬಳ್ಳಾರಿ ಐರನ್ ಓರ್ ಪ್ರೈ.ಲಿ ಎಂಬ ಮೋದಿ ಮಹಾಶಯನ ಮತ್ತೊಂದು ಗಣಿಯ ಹಗಲು ದರೋಡೆಯನ್ನು ಬಿಟ್ಟರೆ ಮಿಕ್ಕೆಲ್ಲವೂ ಗಾಲಿ ಜನಾರ್ದನ ರೆಡ್ಡಿಯ ಕಪಟ ಗಣಿ ಲೈಸೆನ್ಸುಗಳೆ.



ಓಬಳಾಪುರಂ ಮೈನಿಂಗ್ ಕಂಪೆನಿ ಪ್ರೈ.ಲಿ ಹೊಂದಿದ್ದ ಮೂರು ಗಣಿ ಗುತ್ತಿಗೆಗಳು ಮತ್ತು ಜನಾರ್ದನ ರೆಡ್ಡಿಯ ಪತ್ನಿ ಲಕ್ಷ್ಮೀ ಅರುಣಾ ಒಡೆತನದ ಅನಂತಪುರಂ ಮೈನಿಂಗ್ ಕಾರ್ಪೋರೇಷನ್ ಗಿಟ್ಟಿಸಿಕೊಂಡಿದ್ದ ಮತ್ತೊಂದು ಮೈನಿಂಗ್ ಲೈಸೆನ್ಸ್, ಅಂದರೆ ಒಟ್ಟು ನಾಲ್ಕು ಗಣಿಗಳ ಇಡೀ ಅದಿರು ದಂಧೆಯೇ ಅಕ್ರಮವಾಗಿತ್ತು.

ಆಂಧ್ರದ ಓಬಳಾಪುರಂನ ಸರ್ವೆ ನಂ. 1ರಲ್ಲಿ ಓಬಳಾಪುರಂ ಮೈನಿಂಗ್ ಕಂಪೆನಿ ನಡೆಸುತ್ತಿದ್ದ 25.98 ಹೆಕ್ಟೇರ್ ಅಂದರೆ 64.20 ಎಕರೆಗಳ ಗಣಿ ಗುತ್ತಿಗೆ 2004ರಲ್ಲೇ ಮುಗಿದುಹೋಗಿತ್ತು. ಹೀಗೆ ಮುಗಿದುಹೋದ ಗಣಿ ಲೈಸೆನ್ಸನ್ನೇ ಮತ್ತೆ ಅಕ್ರಮವಾಗಿ ವಿಸ್ತರಿಸಿಕೊಂಡ ಗಾಲಿ ಜನಾರ್ದನ ರೆಡ್ಡಿ ಇಲ್ಲಿಂದ ಸಾವಿರಾರು ಕೋಟಿ ರೂಪಾಯಿಗಳ ಅದಿರು ಕದ್ದು ಸಾಗಿಸಿದ್ದ! ಬಳ್ಳಾರಿ ರಕ್ಷಿತ ಅರಣ್ಯದಲ್ಲಿ 39.50 ಹೆಕ್ಟೇರ್‌ಗಳ ಮತ್ತೊಂದು ಗಣಿ ಪರವಾನಗಿ ಪಡೆದ ಓಬಳಾಪುರಂ ಮೈನಿಂಗ್ ಕಂಪೆನಿ ಗಣಿಯ ಮತ್ತು ಆಂಧ್ರದ ಗಡಿಯ ನಕಾಶೆಯನ್ನೇ ತಿದ್ದಿ ಪಕ್ಕದ ಕರ್ನಾಟಕದ ಅರಣ್ಯವನ್ನು ದೋಚಿ ಮತ್ತೆ ಸಾವಿರಾರು ಕೋಟಿ ರೂಪಾಯಿಗಳ ಅದಿರನ್ನು ದೋಚಿದ್ದು ಸ್ಪಷ್ಟವಾಗಿತ್ತು. ಇದೇ ಓಬಳಾಪುರಂ ಮೈನಿಂಗ್ ಕಂಪೆನಿ ಕರ್ನಾಟಕದ ಗಡಿಯ ಹೆಚ್.ಸಿದ್ದಾಪುರದಲ್ಲಿ ಹೊಂದಿದ್ದ 68.50 ಹೆಕ್ಟೇರ್ ಗಣಿಯ ಲೈಸೆನ್ಸೇ ಗೋಲ್ ಮಾಲಾಗಿತ್ತು. ಅರಣ್ಯ ಕಾಯ್ದೆಯಡಿ ಕೇಂದ್ರ ಸರ್ಕಾರ ನೀಡಿದ ಮಂಜೂರಾತಿ ನಕ್ಷೆಯೇ ಒಂದಾದರೆ ಆಂಧ್ರದ ಗಣಿ ಇಲಾಖೆ ನೀಡಿದ ನಕ್ಷೆಯೇ ಮತ್ತೊಂದಾಗಿತ್ತು. ನಾಮಕಾವಸ್ತೆಗಷ್ಟೇ ಈ ಲೈಸೆನ್ಸನ್ನು ಬಳಸಿದ ಓಎಂಸಿ ನೀಡಿದ ನಕ್ಷೆಯ ವ್ಯಾಪ್ತಿಯನ್ನೇ ಮೀರಿ ಪಕ್ಕದ ರಕ್ಷಿತ ಅರಣ್ಯಕ್ಕೆ ಕನ್ನಹಾಕಿ ಅಲ್ಲಿಂದ 11 ಲಕ್ಷ ಟನ್ನುಗಳಷ್ಟು ಅದಿರನ್ನು ದೋಚಿತ್ತು. ಇದಕ್ಕೆಂದು ಬಳ್ಳಾರಿಯ ಖದೀಮ ಡಿಸಿಎಫ್ ಮುತ್ತಯ್ಯ, ಆಗ ಬಳ್ಳಾರಿಗೆ ಜಿಲ್ಲಾಧಿಕಾರಿಯಾಗಿದ್ದ ಶಿವಪ್ಪ ಮತ್ತು ಜಿಲ್ಲಾ ಪೊಲೀಸ್ ವರಿಷ್ಠ ಸೀಮಂತ್‌ಕುಮಾರ್ ಸಿಂಗ್‌ರನ್ನು ಬಳಸಿಕೊಳ್ಳಲಾಗಿತ್ತು.

ಇದಿಷ್ಟೂ ಗಾಲಿ ರೆಡ್ಡಿ, ಶ್ರೀರಾಮುಲು ಮತ್ತು ಕರುಣಾಕರ ರೆಡ್ಡಿಗಳ ಅಧಿಕೃತ ಮಾಲಿಕತ್ವದ ಓಬಳಾಪುರಂ ಮೈನಿಂಗ್ ಕಂಪೆನಿಯ ಅದಿರು ಡಕಾಯಿತಿಯ ಬಗ್ಗೆ ಸಿಇಸಿ ಕಲೆ ಹಾಕಿದ ಸಾಕ್ಷ್ಯಾಧಾರಗಳಾದರೆ, ಇನ್ನು ರೆಡ್ಡಿಯ ಪತ್ನಿ ಲಕ್ಷ್ಮೀ ಅರುಣಾ ಮಾಲೀಕತ್ವದ ಅನಂತಪುರಂ ಮೈನಿಂಗ್ ಕಾರ್ಪೋರೇಷನ್ನಿನ ಅಕ್ರಮಗಳದ್ದೇ ಪ್ರತ್ಯೇಕ ಪುರಾಣವಾಗಿತ್ತು. ಸಿಇಸಿಗೆ ಸಿಕ್ಕ ಸಾಕ್ಷ್ಯಾಧಾರಗಳೇ ಹೇಳುವಂತೆ ಅನಂತಪುರಂ ಮೈನಿಂಗ್ ಕಾರ್ಪೋರೇಷನ್ನಿಗೆ ನೀಡಿದ್ದ 6.50 ಹೆಕ್ಟೇರ್ ಗಣಿಗಾರಿಕೆಯ ಲೈಸನ್ಸೇ ಮೋಸವಾಗಿತ್ತು.

ಹಿಂದಿನ ಗುತ್ತಿಗೆ ಅವಧಿ ಮುಗಿದು 17 ವರ್ಷಗಳ ನಂತರ ಗುತ್ತಿಗೆಯನ್ನು ನವೀಕರಿಸಲಾಗಿತ್ತು. ಇದಕ್ಕೆ ಅರಣ್ಯ ಇಲಾಖೆಯ ಅನುಮತಿಯಾಗಲಿ, ಗಣಿ ಕಾಯ್ದೆಯ ನಿಯಮಾವಳಿಗಳನ್ನಾಗಲಿ ಕಾಟಾಚಾರಕ್ಕೂ ಪಾಲಿಸಿರಲಿಲ್ಲ. ಮಂಜೂರಾದ ನಕ್ಷೆಯೇ ಒಂದಾದರೆ ಅಗೆದ ಗಣಿಯೇ ಮತ್ತೊಂದಾಗಿತ್ತು. ಅಂದರೆ ಆಂಧ್ರದಲ್ಲಿ ಗಣಿ ಲೈಸೆನ್ಸ್ ಪಡೆದು ಪಕ್ಕದ ಕರ್ನಾಟಕದ ಗಡಿಯನ್ನು ದಾಟಿ ಬಂದು ಅದಿರನ್ನು ಸಾಗಿಸಲಾಗಿತ್ತು. ಇದಿಷ್ಟೇ ಅಲ್ಲದೇ ಗಾಲಿ ರೆಡ್ಡಿ ಬಳ್ಳಾರಿ ಐರನ್ ಓರ್ ಪ್ರೈ.ಲಿ. ಕಂಪೆನಿಯ ಗಣಿಯನ್ನು ಆಕ್ರಮಿಸಿ ಗೂಂಡಾಗಿರಿ ಮಾಡಿ ಅದಿರು ದೋಚಿದ್ದನ್ನು ಸಿಇಸಿ ತನ್ನ ವರದಿಯಲ್ಲಿ ನಮೂದಿಸಿತ್ತು.

ಇದು ಸಿಇಸಿ ತನ್ನ ಸುದೀರ್ಘ ತನಿಖೆ ಮತ್ತು ಪ್ರತ್ಯಕ್ಷ ಪರಿಶೀಲನೆಯಿಂದ ಪತ್ತೆ ಹಚ್ಚಿದ ಅಂಶಗಳಾಗಿದ್ದವು. ಗಣಿರೆಡ್ಡಿಗಳ ಈ ನಾಲ್ಕು ಕಂಪೆನಿಗಳಲ್ಲದೇ ಜಗನ್ ರೆಡ್ಡಿಯ ಬೇನಾಮಿ ಗಣಿಯಾದ ವೈ. ಮಹಾಬಲೇಶ್ವರಪ್ಪ ಮತ್ತು ಮೋದಿಯ ಬಿಐಓಪಿಯ ಲೈಸೆನ್ಸನ್ನೂ ರದ್ದುಗೊಳಿಸುವಂತೆ ಸಿಇಸಿ ಶಿಫಾರಸ್ಸು ಮಾಡಿತ್ತು.

ಜೊತೆಗೆ ಆಂಧ್ರ ಮತ್ತು ಕರ್ನಾಟಕದ ಗಡಿಯನ್ನು ಗುರುತಿಸುವಲ್ಲಿ ಶಾಶ್ವತ ಕ್ರಮ ಜರುಗಿಸುವಂತೆ ಮತ್ತು ನಾಶಗೊಳಿಸಿದ ಗಡಿ ಕಂಬಗಳನ್ನು ಪುನರ್ ಪ್ರತಿಷ್ಠಾಪಿಸುವಂತೆಯೂ ಸಿಇಸಿ ಒತ್ತಾಯಿಸಿತ್ತು. ಮಂಜೂರಾದ ನಕ್ಷೆಯ ಹೊರತಾಗಿ ರಕ್ಷಿತ ಅರಣ್ಯದಲ್ಲಿ ಮತ್ತು ಕರ್ನಾಟಕದ ಗಡಿಯನ್ನು ಆಕ್ರಮಿಸಿ ದೋಚಿದ ಅದಿರನ್ನು ಜಪ್ತಿ ಮಾಡಿಕೊಳ್ಳುವಂತೆಯೂ ಸಿಇಸಿ ಸುಪ್ರೀಂಕೋರ್ಟನ್ನು ಕೋರಿದೆ. ಮತ್ತು ಈಗಾಗಲೇ ಅಕ್ರಮವಾಗಿ ಅಗೆದು ಸಾಗಿಸಿದ ಅದಿರಿನ ಪ್ರಮಾಣವನ್ನು ಲೆಕ್ಕಹಾಕಿ ಅದಕ್ಕೆ ದಂಡಸಮೇತ ವಸೂಲಿ ಮಾಡುವಂತೆಯೂ ಸಿಇಸಿ ಒತ್ತಾಯಿಸಿದೆ. ಈ ಪ್ರಕಾರವೇ ಲೆಕ್ಕ ಹಾಕಿದರೆ ಗಣಿ ರೆಡ್ಡಿ ಗ್ಯಾಂಗ್ ತನ್ನ ಅಧಿಕಾರ ಮತ್ತು ಗೂಂಡಾ ಶಕ್ತಿ ಬಳಸಿ ದೋಚಿದ ಅದಿರಿನ ಒಟ್ಟು ಪ್ರಮಾಣ ನಾಲ್ಕೂವರೆ ಸಾವಿರ ಕೋಟಿ ರೂಪಾಯಿಗಳಷ್ಟಾಗುತ್ತದೆ!

ಅಂದರೆ ಮಂಜೂರಾದ ನಕ್ಷೆಯ ಹೊರತಾಗಿಯೂ ಓಎಂಸಿ ಮತ್ತು ಎಎಂಸಿ ಕಂಪೆನಿಗಳು ನಾಲ್ಕೂವರೆ ಸಾವಿರ ಕೋಟಿ ರೂಪಾಯಿಗಳ ಮೊತ್ತದ ಅದಿರನ್ನು ಕದ್ದು ಸಾಗಿಸಿವೆ. ಇದು ಸಮಾಜದ ಸೊತ್ತು, ಅಂದರೆ ಸರ್ಕಾರದ ಸೊತ್ತು. ಅದನ್ನು ಯಕಶ್ಚಿತ್ ಕಳ್ಳನೇ ಕದ್ದರೂ ಮಂತ್ರಿಯೇ ಕದ್ದರೂ ಶಿಕ್ಷೆ ಮತ್ತು ಕಾನೂನು ಒಂದೇ. ಪರಿಸರ ಸಂರಕ್ಷಣೆಯ ಕುರಿತ ಒಂದೇ ಒಂದು ಷರತ್ತನ್ನೂ ರೆಡ್ಡಿ ಗ್ಯಾಂಗ್ ಪಾಲಿಸಿಲ್ಲ. ಆಂಧ್ರದ ಅಧಿಕಾರಿಗಳು ಕೈಜೋಡಿಸದೇ ಇದು ಸಾಧ್ಯವಾಗು



ವುದಿಲ್ಲ ಎಂಬ ಸಿಇಸಿಯ ವಾದ ಕೂಡ ಅಷ್ಟೇ ಮುಖ್ಯ.

ಕದ್ದದ್ದು 11ಲಕ್ಷ ಟನ್, ಗಳಿಸಿದ್ದು ನಾಲ್ಕೂವರೆ ಸಾವಿರ ಕೋಟಿ!

ಈ ನಿಟ್ಟಿನಲ್ಲಿ ಸಿಇಸಿ ತನ್ನ ವರದಿಯನ್ನು ಸುಪ್ರೀಂ ಕೋರ್ಟಿಗೆ ಸಲ್ಲಿಸಿದ ಐದನೇ ದಿನಕ್ಕೇ ಸಿಬಿಐ ಅಧಿಕಾರಿಗಳು ಅನಂತಪುರ-ಬಳ್ಳಾರಿ ಗಡಿಯ ಉದ್ದಗಲಕ್ಕೂ ಅಗೆದ ಗಣಿಗಳ ಮೇಲೆ ದಾಳಿ ನಡೆಸಿದ್ದಾರೆ. ಸಿಬಿಐ ಎಸ್‌ಪಿ ವೆಂಕಟೇಶಲು, ವಿಶೇಷ ಅಧಿಕಾರಿ ಆರ್.ಎಂ.ಖಾನ್, ಸಿಬಿಐನ ಬೆಂಗಳೂರು ಡಿಐಜಿ ಇತೇಂದ್ರ ಸೇರಿದಂತೆ ಸಿಬಿಐನ ಆಂಧ್ರದ ಡಿಐಜಿ ಲಕ್ಷ್ಮೀನಾರಾಯಣರ ನೇತೃತ್ವದ ತಂಡ ಆರೂ ಗಣಿಗಳ ಬುಡಕ್ಕೆ ಈಗಾಗಲೇ ಕೈಹಾಕಿದೆ. ಹೀಗೆ ತನಿಖೆಗಿಳಿದ ಸಿಬಿಐ ತಂಡಕ್ಕೆ ಮಂತ್ರಿಗಳಾದ ಜನಾರ್ದನ ರೆಡ್ಡಿ ಶ್ರೀರಾಮುಲು ಮತ್ತು ಕರುಣಾಕರ ರೆಡ್ಡಿ ತ್ರಿಮೂರ್ತಿಗಳನ್ನು ಬಂಧಿಸಲು ಇರುವ ಅತೀ ದೊಡ್ಡ ಸಾಕ್ಷ್ಯಾಧಾರವೆಂದರೆ ಅದು 2010ರ ಆಗಸ್ಟ್ 16ರಂದು ಯಡ್ಡಿ ಸರ್ಕಾರವೇ ಹೈಕೋರ್ಟಿಗೆ ಸಲ್ಲಿಸಿದ ಪ್ರಮಾಣ ಪತ್ರ. ಇದರಲ್ಲಿ 2004ರಿಂದ 2010ರ ವರೆಗೆ ಪರವಾನಗಿ ಇಲ್ಲದೆ ರಾಜ್ಯದಿಂದ ಹೊರಕ್ಕೆ ಸಾಗಿಸಲಾಗದ ಅದಿರಿನ ಪ್ರಮಾಣ 30 ದಶಲಕ್ಷ ಟನ್ ಎಂದು ಸರ್ಕಾರವೇ ಲಿಖಿತ ಹೇಳಿಕೆ ಸಲ್ಲಿಸಿದೆ.

ರಾಜ್ಯದಲ್ಲಿ ಅರಣ್ಯ ಕಾಯ್ದೆ ಉಲ್ಲಂಘಿಸಿ ಅದಿರು ದೋಚುತ್ತಿರುವ ಗಣಿ ದೊರೆಗಳ ಒಟ್ಟು ಸಂಖ್ಯೆಯೇ 60 ಎಂದು ಸರ್ಕಾರ ಕೋರ್ಟಿಗೆ ಸಲ್ಲಿಸಿದ ಪ್ರಮಾಣಪತ್ರದಲ್ಲಿ ಹೇಳಿಕೊಂಡಿದೆ. 2007ನೇ ಸಾಲೊಂದರಲ್ಲೇ 120 ದಶಲಕ್ಷ ಟನ್ ಅದಿರು ರಫ್ತು ಮಾಡಿ ಒಟ್ಟು 60ಸಾವಿರ ಕೋಟಿ ರೂ.ಗಳಷ್ಟು ಆದಾಯ ಗಳಿಸಿದ ಗಣಿ ದೊರೆಗಳಿಂದಾಗಿ ರಾಜ್ಯಕ್ಕೆ ಲಾಭಕ್ಕಿಂತಲೂ ನಷ್ಟವೇ ಹೆಚ್ಚೆಂದು ಸರಕಾರ ತನ್ನ ಪ್ರಮಾಣಪತ್ರದಲ್ಲಿ ಹೇಳಿಕೆ ಸಲ್ಲಿಸಿರುವುದು ಕೂಡ ಅಷ್ಟೇ ಮುಖ್ಯ. ಇದರರ್ಥ ಅಕ್ರಮ ಗಣಿಗಾರಿಕೆ ಮತ್ತು ಅದಿರು ಕಳ್ಳ ಸಾಗಾಣಿಕೆಯ ವಿರುದ್ಧ ಸರ್ಕಾರಕ್ಕೆ ಎಲ್ಲಾ ಮಾಹಿತಿಯೂ ಇದೆ.

ಇದಲ್ಲದೇ ಅನಂತಪುರದ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಮೈನ್ಸ್ ಕೋರ್ಟಿಗೆ ಮತ್ತೊಂದು ದಾಖಲೆ ಒದಗಿಸಿದ್ದಾರೆ. ಅದರ ಪ್ರಕಾರವೇ ಮಂತ್ರಿ ಕರುಣಾಕರ ರೆಡ್ಡಿ ಓಬಳಾಪುರಂ ಮೈನಿಂಗ್ ಕಂಪೆನಿಗೆ 2008ರ ವರೆಗೂ ನಿರ್ದೇಶಕನಾಗಿದ್ದ. 2003 ನವೆಂಬರ್ 12ರಂದು ಇಂಡಿಯನ್ ಬ್ಯೂರೋ ಆಫ್ ಮೈನಿಂಗ್ ಐಬಿಎಂ ನಿಂದ ಓಬಳಾಪುರಂನಲ್ಲಿ ಒಟ್ಟು 25.981 ಹೆಕ್ಟೇರ್ ಪ್ರದೇಶದಲ್ಲಿ ಗಣಿಗಾರಿಕೆಗೆ ಅನುಮತಿ ಪಡೆದ ಓಎಂಸಿಗೆ ಐಬಿಎಂ ವಿಧಿಸಿದ ಷರತ್ತಿನ ಪ್ರಕಾರವೇ ಪ್ರತಿ ವರ್ಷಕ್ಕೆ 3ಲಕ್ಷ ಟನ್‌ನಿಂದ 7.5ಲಕ್ಷ ಟನ್ ವರೆಗೆ ಮಾತ್ರ ರಫ್ತು ಮಾಡಬೇಕು. ಆದರೆ ಓಎಂಸಿ 2005-06ರಲ್ಲಿ 20,55,095 ಟನ್ ರಫ್ತು ಮಾಡಿದೆ. 2006-07ರಲ್ಲಿ ಒಟ್ಟೂ ಇಪ್ಪತ್ತೆರಡೂ ಲಕ್ಷ ಐವತ್ತೊಂದು ಸಾವಿರ ಟನ್ನುಗಳಷ್ಟು ಅದಿರನ್ನು ಹೊರದೇಶಕ್ಕೆ ಸಾಗಿಸಿದೆ. 2007-08ರಲ್ಲಿ ಒಟ್ಟೂ ಇಪ್ಪತ್ಮೂರು ಲಕ್ಷದ ಎಂಬತ್ತು ಸಾವಿರ ಟನ್ನುಗಳಷ್ಟನ್ನು ಓಎಂಸಿ ರಫ್ತು ಮಾಡಿದೆ.

ಅಂದರೆ ಪರವಾನಗಿಗಿಂತಲೂ ಮೂರು ಪಟ್ಟು ಅಧಿಕ ಪ್ರಮಾಣದ ಅದಿರನ್ನು ದೋಚಿದ ಓಎಂಸಿ ಅದನ್ನು ಅಕ್ರಮವಾಗಿ ಹೊರದೇಶಕ್ಕೆ ಸಾಗಿಸಿದೆ. ಅನಂತಪುರದ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಮೈನ್ಸ್ ಸಲ್ಲಿಸಿದ ವರದಿಯ ಪ್ರಕಾರವೇ ಮಂತ್ರಿ ಕರುಣಾಕರ ರೆಡ್ಡಿ ಓಬಳಾಪುರಂ ಮೈನಿಂಗ್ ಕಂಪೆನಿಗೆ ಡೈರೆಕ್ಟರ್ ಆಗಿದ್ದ ಕಾಲದಲ್ಲಿ ಅಂದರೆ 2005ರಿಂದ 2008ರ ನಡುವೆ ಗಣಿ ರೆಡ್ಡಿಗಳು ನಡೆಸುತ್ತಿದ್ದ ನಾಲ್ಕು ಗಣಿಗಳ ಪೈಕಿ ಓಬಳಾಪುರಂ ಗಣಿಯೊಂದೇ 66 ಲಕ್ಷದ 86 ಸಾವಿರದ 220 ಟನ್ ಅದಿರನ್ನು ತೆಗೆದು ಸಾಗಿಸಿದೆ. ಇದರಲ್ಲಿ ಪರವಾನಗಿಯಿದ್ದ ಇಪ್ಪತ್ತೆರಡೂವರೆ ಲಕ್ಷ ಟನ್ ಹೊರತು ಪಡಿಸಿದರೆ ಮಿಕ್ಕಂತೆ ನಲವತ್ತ ಮೂರುವರೆ ಲಕ್ಷ ಟನ್ ಕದ್ದ ಮಾಲೆ!

ಈ ಅವಧಿಯಲ್ಲಿ ಓಎಂಸಿ ಕಂಪೆನಿಗೆ ಡೈರೆಕ್ಟರ್ ಆಗಿದ್ದದ್ದು ಕರುಣಾಕರ ರೆಡ್ಡಿ! ಅನಂತಪುರಂ ಮೈನಿಂಗ್ ಕಂಪೆನಿ ದೋಚಿದ 11ಲಕ್ಷ ಟನ್ ಮತ್ತು ಓಬಳಾಪುರಂ ವ್ಯಾಪ್ತಿಯ ಗಣಿಯಿಂದ ಕೇವಲ 3 ವರ್ಷದಲ್ಲಿ ಕರುಣಾಕರ ರೆಡ್ಡಿ ದೋಚಿದ ನಲವತ್ಮೂರುವರೆ ಲಕ್ಷ ಟನ್ ಸದ್ಯಕ್ಕೆ ಸಿಬಿಐಗೆ ಸಿಕ್ಕ ಸಣ್ಣ ಲೆಕ್ಕವಷ್ಟೆ. 2008ರ ನಂತರ ಓಬಳಾಪುರಂ 1ನೇ ಗಣಿಯಿಂದ ಸಾಗಿಸಲಾದ ಅದಿರು, ಓಎಂಸಿ ಕಂಪೆನಿಯ ಮಿಕ್ಕೆರಡು ಗಣಿಗಳಿಂದ ಗಾಲಿ ರೆಡ್ಡಿ ಮತ್ತು ಶ್ರೀರಾಮುಲು ಸೇರಿ ದೋಚಿದ ಅದಿರಿನ ಪ್ರಮಾಣ ಇನ್ನೆಷ್ಟು ಲಕ್ಷ ಟನ್ನುಗಳಿರಬೇಡ?

ಸಿಬಿಐ ಮೂಲಗಳೆ ಲೆಕ್ಕ ಹಾಕಿರುವಂತೆ ಗಾಲಿ ರೆಡ್ಡಿಯ ಪತ್ನಿ ಲಕ್ಷ್ಮೀ ಅರುಣಾ ಒಡೆತನದ ಅನಂತಪುರಂ ಮೈನಿಂಗ್ ಕಾರ್ಪೋರೇಷನ್ ಮತ್ತು ಜನಾರ್ದನ ರೆಡ್ಡಿ ಗ್ಯಾಂಗ್ ಮಾಲಿಕತ್ವದ ಓಬಳಾಪುರಂ ಮೈನಿಂಗ್ ಕಂಪೆನಿಯ ಮೂರು ಗಣಿಗಳು ಸೇರಿದಂತೆ ಒಟ್ಟು ನಾಲ್ಕೂ ಗಣಿಗಳಿಂದ ಈ ತನಕ ದೋಚಿದ ಅದಿರಿನ ಒಟ್ಟು ಮೊತ್ತ ನಾಲ್ಕೂವರೆ ಸಾವಿರ ಕೋಟಿ ರೂಪಾಯಿಗಳು!

ಇದು ಸದ್ಯದ ಅಂದಾಜು ಲೆಕ್ಕ ಮಾತ್ರ. ಈ ಪ್ರಕಾರವೇ ಕದ್ದ ಮಾಲನ್ನು ಸರ್ಕಾರ ವಸೂಲಿ ಮಾಡಬೇಕಲ್ಲವೇ? ಏಕೆಂದರೆ ಅದು ಸಮಾಜದ ಸೊತ್ತು. ನಾಲ್ಕೂವರೆ ಸಾವಿರ ಕೋಟಿ ರೂಪಾಯಿಗಳ ಪೈಕಿ ಸುಪ್ರೀಂಕೋರ್ಟ್ ಎಷ್ಟು ರೊಕ್ಕವನ್ನು ಗಣಿ ರೆಡ್ಡಿಗಳಿಂದ ಕಕ್ಕಿಸುತ್ತದೆ? ಅದಕ್ಕೆಂದು ರೆಡ್ಡಿ ಗ್ಯಾಂಗಿನ ಯಾವ್ಯಾವ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುತ್ತದೆ? ದೋಚಿದ ದುಡ್ಡಿನಲ್ಲಿ ಯಾರ್‍ಯಾರಿಗೆ ಪಾಲು ಸಂದಾಯವಾಗಿದೆ? ಆಂಧ್ರದ ಅಧಿಕಾರಿಗಳಲ್ಲದೇ ಬಳ್ಳಾರಿಗೆ ಡೀಸಿಯಾಗಿದ್ದ ಶಿವಪ್ಪ, ಎಸ್ಪಿ ಸೀಮಂತ್‌ಕುಮಾರ್ ಸಿಂಗ್ ಮತ್ತು ಡಿಸಿಎಫ್ ಮುತ್ತಯ್ಯರನ್ನು ಸಿಬಿಐ ಬಂಧಿಸುವುದು ಯಾವಾಗ? ಯಾವ ಶುಭ ಗಳಿಗೆಯಲ್ಲ ಮೂವರು ಗಣಿ ಮಂತ್ರಿಗಳನ್ನು ಸಿಬಿಐ ಬಂಧಿಸುತ್ತದೆ? ದೋಚಿದ ಅದಿರಿನ ಪೈಕಿ ಎಷ್ಟು ಸಹಸ್ರ ಕೋಟಿ ಕನ್ನಡಿಗರಿಗೆ ದಕ್ಕುತ್ತದೆ?

ಸಿಬಿಐ ಮತ್ತು ಸುಪ್ರೀಂ ಕೋರ್ಟ್ ಸೇರಿ ಉತ್ತರಿಸಬೇಕಾದ ಇಂಥ ಪ್ರಶ್ನೆಗಳಿಗೆ ಕಾಲವಂತೂ ಕೂಡಿ ಬಂದಿದೆ.

• ರಾ.ಸೋಮನಾಥ್

ಗಾಣದಾಳ ಕೊಲೆ ಪ್ರಕರಣ ಸಾಕ್ಷಿದಾರನ ಬೇಟೆಗೆ ಹವಣಿಸಿದ ಹಂತಕರು!

ಹುಬ್ಬಳ್ಳಿಯ ರಾಮನಗರ ರಣರಂಗವಾಗುತ್ತಿದೆ. ತಾವು ಮಾಡಿದ ಕೊಲೆಗೆ ಸಾಕ್ಷಿ ಹೇಳಿದವರನ್ನೇ ಹಿಡಿದು ಮುಗಿಸುವ ಮಟ್ಟಕ್ಕೆ ಇಲ್ಲಿನ ಕ್ರಿಮಿನಲ್‌ಗಳು ಬೆಳೆದು ನಿಂತಿದ್ದಾರೆ. ಇಂಥಾದ್ದೇ ಒಂದು ದುಷ್ಟ ಗುಂಪು ತಮ್ಮ ಪಾತಕಕ್ಕೆ ಸಾಕ್ಷಿ ಹೇಳಿದಾತನನ್ನ ಮುಗಿಸಲು ಹೋಗಿ ಅಮಾಯಕನೊಬ್ಬನನ್ನು ಬಲಿ ತೆಗೆದುಕೊಂಡಿದೆ.

2004ರಲ್ಲಿ ಈ ಭಾಗದ ಕಾಂಗ್ರೆಸ್ ಮುಖಂಡ ಹೊನ್ನಪ್ಪ ಗಾಣದಾಳನ ಕೊಲೆ ನಡೆದಿತ್ತು. ಈ ಪ್ರಕರಣದಲ್ಲಿ ರಾಮನಗರದ ಗುರಪ್ಪ ಚಲವಾದಿ ಮತ್ತಾತನ ಪುಂಡ ಪಟಾಲಂ ಸೆರೆವಾಸ ಅನುಭವಿಸುವಂತಾಗಿತ್ತು. ಇದಕ್ಕೆ ಕಾರಣವಾದದ್ದು ಘಟನೆಯನ್ನು ಕಣ್ಣಾರೆ ಕಂಡು ಸಾಕ್ಷಿ ಹೇಳಿದ ಗಾಣದಾಳನ ಚಿಕ್ಕಮ್ಮನ ಮಗ ಬಲರಾಮ ಚಲವಾದಿ.



ಬಲರಾಮ



ಪಿಳ್ಳೆ

ಗುರಪ್ಪ ಚಲವಾದಿ ನೇತೃತ್ವದ ಉಮೇಶ ಭಂಡಾರಿ, ರಾಜು ಸರಡಿ, ಸಂತೋಷ ಚಲವಾದಿ, ಕುಮಾರ ಸಿದ್ದಪ್ಪ ಚಲವಾದಿ ಮುನ್ನೊಳಗೊಂಡ ಹಂತಕ ಪಡೆ ಆರು ವರ್ಷದ ಜೈಲುವಾಸ ಮುಗಿಸಿ ಇತ್ತೀಚೆಗಷ್ಟೇ ಹೊರಬಂದಿತ್ತು. ಹಾಗೆ ಬಂದ ದುಷ್ಟ ಪಡೆ ಮತ್ತೊಂದು ಕೊಲೆ ನಡೆಸುವ ಸ್ಕೆಚ್ಚನ್ನೂ ಹಾಕಿಕೊಂಡಿತ್ತು. ಅದರ ಟಾರ್ಗೆಟ್ ಆಗಿದ್ದದ್ದು ಗಾಣದಾಳನ ಕೊಲೆ ಕೇಸಿನಲ್ಲಿ ಸಾಕ್ಷಿ ಹೇಳಿದ್ದ ಬಲರಾಮ ಚಲವಾದಿ.

ಕಳೆದ ಸೋಮವಾರ ರಾತ್ರಿ 30ರ ಸುಮಾರಿಗೆ ಬಲರಾಮ ಚಲವಾದಿ ಸಾರ್ವಜನಿಕ ಶೌಚಾಲಯದತ್ತ ಹೊರಟಿದ್ದ. ಅಂತಹುದೊಂದು ಅವಕಾಶಕ್ಕೆ ಕಾದು ಕೂತಿದ್ದ ಹಂತಕ ಗುರಪ್ಪ ಚಲವಾದಿಗೆ ಚೇಲಾಗಳ್ಯಾರೋ ಸುದ್ದಿ ಮುಟ್ಟಿಸಿದ್ದಾರೆ. ನಿರಾಯುಧ ಬಲರಾಮನ ಮೇಲೆರಗಲು ತಕ್ಷಣ ಗುರಪ್ಪ ಅಣಿಯಾಗಿ ಬಿಟ್ಟಿದ್ದ.

ಇದಕ್ಕೂ ಅರೆಗಳಿಗೆ ಮುಂಚೆ ಗುರಪ್ಪನ ಗ್ಯಾಂಗ್‌ನ ಹನುಮಂತ ಚಲವಾದಿ ಕುಡಿದ ಅಮಲಲ್ಲಿ ಮೂರ್ನಾಲ್ಕರೊಂದಿಗೋ ಕಿತ್ತಾಟ ಶುರುವಿಟ್ಟಿದ್ದ. ಸೆಬಾಸ್ಟಿನ್ ಬಳ್ಳಾರಿ ಹಾಗೂ ವಿಲ್ಸನ್ ಥಾಮಸ್ ಎಂಬ ಅಮಾಯಕರಿಬ್ಬರು ಬುದ್ಧಿ ಹೇಳಲು ಹೋದದ್ದೇ, ಹನುಮಂತ ತನ್ನ ಚೇಲಾಗಳೊಂದಿಗೆ ಸೇರಿ ಅವರ ಮೇಲೇ ಹಲ್ಲೆ ನಡೆಸಿದ್ದ. ಸೆಬಾಸ್ಟಿನ್ ಹಾಗೂ ವಿಲ್ಸನ್ ತಲೆ, ಮೊತ್ತಿಗೆಗಳಿಗೆಲ್ಲಾ ತಲವಾರದಿಂದ ಹಲ್ಲೆ ನಡೆಸಿದ್ದ.



ಸೆಬಾಸ್ಟಿನ್



ವಿಲ್ಸನ್

ಹೀಗೊಂದು ಕದನ ನಡೆಸಿ ವಾಪಸಾಗುತ್ತಿದ್ದ ಹನುಮಂತನ ಗುಂಪು ಶೌಚಾಲಯಕ್ಕೆ ತೆರಳುತ್ತಿದ್ದ ಬಲರಾಮನೊಂದಿಗೆ ಜಗಳಕ್ಕೆ ನಿಂತಿತು. ಅದು ವಿಕೋಪಕ್ಕೆ ಹೋಗುತ್ತಿರುವುದನ್ನು ಗಮನಿಸಿದ ವೃದ್ಧ ದೇವೇಂದ್ರ ಪಂದಾಲ ತಡೆಯಲು ಹೋದರು. ಈ ವೃದ್ಧರ ಜೊತೆಗೆ ಬಲರಾಮನ ಸ್ನೇಹಿತರಾದ ಕೇಶವ ಪಿಳ್ಳೆ ಮುಂತಾದವರೂ ದೌಡಾಯಿಸಿದರು. ಮೊದಲೇ ನಿಶೆಯಲ್ಲಿದ್ದ ಹನುಮಂತ ಮತ್ತಷ್ಟು ವ್ಯಗ್ರನಾದವನೇ ಬಲರಾಮ, ದೇವೇಂದ್ರ ಹಾಗೂ ಕೇಶವರ ಮೇಲೆ ಏಕಾಏಕಿ ತಲವಾರದ ದಾಳಿ ಶುರು ಮಾಡಿದ. ಬಲರಾಮ ಹಾಗೂ ಕೇಶವ ಈ ಹೊಡೆತದಿಂದ ಗಾಯಗಳೊಂದಿಗೆ ಪಾರಾದರಾದರೂ ವೃದ್ಧ ದೇವೇಂದ್ರ ಸ್ಥಳದಲ್ಲೇ ಸತ್ತು ಬಿದ್ದರು.

ಈ ರೀತಿ ಯಾರದೋ ಮೇಲಿನ ಜಿದ್ದಿಗೆ ಅಮಾಯಕನ ಜೀವ ತೆಗೆದರೂ ಪಾಪ ಪ್ರಜ್ಞೆ ಹೊಂದದ ಹನುಮಂತ 'ಬಲರಾಮನ ಜತಿ ಸ್ನೇಹ ಮಾಡುದ್ರೆ ಇದೇ ಗತಿ' ಅಂತ ಅರುಚುತ್ತಾ ಮತ್ತೊಂದಷ್ಟು ಅಮಾಯಕರ ಮೇಲೆರಗಿ ಹೋದ. ಇದಾಗಿ ತುಂಬಾ ಹೊತ್ತು ಕಳೆದ ಮೇಲೆ ಕೇಶ್ವಾಪುರ ಠಾಣೆ ಪೊಲೀಸರು ಸ್ಥಳಕ್ಕೆ ಬಂದು ಹನುಮಂತಪ್ಪ ಹಾಗೂ ಆತನ ಚೇಲಾ ಸುರೇಶ ಕುದರಿಯನ್ನು ಬಂಧಿಸಿದರು. ಆದರೆ ದಾಂಧಲೆಯಲ್ಲಿ ಪಾಲ್ಗೊಂಡಿದ್ದ ಗುರುನಾಥ ಚಲವಾದಿ ಮತ್ತವನ ಮಕ್ಕಳಾದ ಸಂತೋಷ, ಸತೀಶ, ಕಿರಣ, ಟೆಂಪೋ ಹನುಮಂತ ಪರಾರಿಯಾಗಿದ್ದಾರೆ. ಗುರುನಾಥ ಚಲವಾದಿಯ ಮಗ ಟೆಂಪೋ ಹನುಮಂತ ಬಿಜೆಪಿ ಕಾರ್ಯಕರ್ತ ಹಾಗೂ ಬಿಜೆಪಿ ಕಾರ್ಪೋರೇಟರ್ ಅಶೋಕ ಜಾಧವನ ಬಲಗೈ ಬಂಟ ಈ ಪ್ರಕರಣದಲ್ಲಿತ ನೇರವಾಗಿ ಪಾಲ್ಗೊಂಡಿಲ್ಲವಾದರೂ ಈತ ಬಲರಾಮನ ವಿರುದ್ಧ ಕೌಟುಂಬಿಕ ಸೇಡು ಹೊಂದಿದ್ದ.

ಇಷ್ಟೆಲ್ಲಾ ಘಟನೆಗಳಿಗೆ ಕಾರಣವಾಗಿರುವ ಆರು ವರ್ಷಗಳ ಹಿಂದೆ ನಡೆದ ಹೊನ್ನಪ್ಪ ಗಾಣದಾಳನ ಕೊಲೆ ಪ್ರಕರಣದ ಬಗ್ಗೆ ಒಂದಿಷ್ಟು..... ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡು, ಡಿಕೆಶಿನಲ್ಲಿದ್ದ ಈತ ತುಂಬಾ ವೇಗವಾಗಿ ಮುಖಂಡನಾಗಿ ಬೆಳೆದಿದ್ದ. ಆದಾಗಲೇ ಮುಖ್ಯಮಂತ್ರಿಯಾಗುವ ಹುರುಪಿನಲ್ಲಿದ್ದ ಡಿ.ಕೆ.ಶಿವಕುಮಾರ ಹಾಗೂ ಎಚ್.ಕೆ.ಪಾಟೀಲರ ನಡುವೆ ವಿಪರೀತ ಪೈಪೋಟಿ ಶುರುವಾಗಿ ಪ್ರತೀ ಜಿಲ್ಲೆಗಳಲ್ಲೂ ಪ್ರತ್ಯೇಕ ಟೀಮು ಕಟ್ಟ ತೊಡಗಿದ್ದರು. ಈ ಭಾಗದಲ್ಲಿ ಡಿಕೆಶಿಯನ್ನು ಬಲಪಡಿಸುವ ಕೆಲಸ ಹೊನ್ನಪ್ಪ ಗಾಣದಾಳನ ಕಡೆಯಿಂದ ನಡೆಯುತ್ತಿತ್ತು. ಇದು ಸಹಜವಾಗೇ ಪಾಟೀಲ್ ಪಟಾಲಂಗೆ ಕಣ್ಣುರಿ ತರಿಸಿತ್ತು.

ಇದೆಲ್ಲದರ ನಡುವೆ ಗಾಣದಾಳ ತನ್ನ ಸಹೋದರಿಯನ್ನು ರಾಮನಗರ ವಾಸಿ ಸಾಬಪ್ಪ ದ್ಯಾಮರನೊಂದಿಗೆ ಮದುವೆ ಮಾಡಿದ್ದ. ಸಣ್ಣ ವಿಚಾರವೊಂದರಲ್ಲಿ ತನ್ನ ಮನೆ ಹಿಂಭಾಗದಲ್ಲಿ ಮನೆ ಹೊಂದಿರುವ ಗುರಪ್ಪ ಚಲವಾದಿಯೊಂದಿಗೆ ಸಾಬಪ್ಪನಿಗೆ ತಕರಾರು ಶುರುವಾಗಿತ್ತು. ಈ ಜಗಳ ಬಗೆಹರಿಸಲು ಭಾಮೈದ ಹೊನ್ನಪ್ಪ ಗಾಣದಾಳ ಬಂದಿದ್ದ. ಗಾಣದಾಳನ ಚಿಕ್ಕಮ್ಮನ ಮಗ ಬಲರಾಮನೂ ಜೊತೆಗಿದ್ದ. ಈ ಸಂದರ್ಭದಲ್ಲಿ ಗುರಪ್ಪ ಚಲವಾದಿ ಹಾಗೂ ಆತನ ಸಂಗಡಿಗರು ಏಕಾಏಕಿ ಹೊನ್ನಪ್ಪ ಗಾಣದಾಳನನ್ನು ಕೊಚ್ಚಿ ಕೊಲೆ ಮಾಡಿದ್ದರು. ಈ ಕೊಲೆಯ ಹಿಂದೆ ಕಾಂಗ್ರೆಸ್‌ನ ಗುಂಪೊಂದರ ಕೈವಾಡವಿದೆ ಅಂತಲೂ ಗುಸುಗುಸು ಹರಡಿತ್ತು.

ಈ ಪ್ರಕರಣದಲ್ಲಿ ಗಾಣದಾಳನ ಚಿಕ್ಕಮ್ಮನ ಮಗ ಬಲರಾಮನ ಸಾಕ್ಷಿಯಿಂದಾಗಿ ಇಡೀ ಹಂತಕ ಪಡೆ ಆರು ವರ್ಷಗಳ ಶಿಕ್ಷೆಗೆ ಗುರಿಯಾಗಿತ್ತು. ಈ ಗ್ಯಾಂಗು ಬಹು ಹಿಂದಿನಿಂದಲೂ ರಾಮನಗರ ಸುತ್ತಮುತ್ತ ಪಾತಕಗಳಲ್ಲಿ ತೊಡಗಿದೆ. ಇದು ಶಿಕ್ಷೆ ಅನುಭವಿಸಿ ಹೊರಬಂದ ಬಳಿಕ ಕೇಶ್ವಾಪುರ ಠಾಣೆಯ ಪೊಲೀಸರು ಕೊಂಚ ಮುನ್ನೆಚ್ಚರಿಕೆ ವಹಿಸಿದ್ದರೆ ಈ ಅನಾಹುತ ನಡೆಯುತ್ತಿರಲಿಲ್ಲ ಅಂತ ಜನ ಮಾತನಾಡಿ ಕೊಳ್ಳುತ್ತಿದ್ದಾರೆ.

ಪೊಲೀಸರು ಮುಂದಾಗಬಹುದಾದ ಅನಾಹುತಗಳನ್ನಾದರೂ ತಡೆಯಬೇಕಿದೆ.



ತರೀಕೆರೆ ರಹಮತ್‌ಗೆ ಎಷ್ಟು ಪವರ್ ಐತೆ ಗೊತ್ತ?

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿರುವ ರಹಮತ್‌ಗೆ ತರೀಕೆರೆಯಲ್ಲಿ ಸನ್ಮಾನವಿತ್ತಂತಲ್ಲಾ. ರಹಮತ್ ಏನು ಬರೆದಿದ್ದಾರೆ, ಯಾವ ಪುಸ್ತಕ ಬರೆದಿದ್ದಾರೆ ಎಂದು ಏನೂ ಗೊತ್ತಿಲ್ಲದ ತರೀಕೆರೆ ಹೈದರು, ಈ ಬಗ್ಗೆ ಮಾತನಾಡಲು ಯಾರನ್ನಾದರೂ ಕರೆಯಲೇಬೇಕು, ರಹಮತ್ ಹಂಪೆ ಯೂನಿವರ್ಸಿಟಿಯಲ್ಲಿರುವುದರಿಂದ ಅವರ ಬಗ್ಗೆ ಮಾತನಾಡಲು ಇನ್ಯಾವುದಾದರೂ ಯೂನಿವರ್ಸಿಟಿಯವರೇ ಆಗಬೇಕೆಂದು ಯೋಚಿಸುತ್ತಿರುವಾಗ, ತರೀಕೆರೆ ಹಿತ್ತಲಲ್ಲೇ ಇರುವ ಕುವೆಂಪು ಯೂನಿವರ್ಸಿಟಿ ಕಣ್ಣಿಗೆ ಬಿತ್ತಂತಲ್ಲಾ. ಸ್ಥಳೀಯ ಜನ ಮತ್ತು ಸಂಸ್ಕೃತಿಯಿಂದ ದೂರವಾಗಿ ಬ್ರಹ್ಮಾಂಡ ಭ್ರಷ್ಟತೆಯಲ್ಲಿ ಮುಳುಗಿರುವ ಆ ಯೂನಿವರ್ಸಿಟಿಯಲ್ಲಿ ರಹಮತ್ ಕುರಿತು ಮಾತನಾಡಲು ಕು.ಚ. ಎಂಬ ವ್ಯಕ್ತಿಯೇ ಸೂಕ್ತ, ಕಡಿಮೆ ಖರ್ಚಿನಲ್ಲಿ ಬಂದು ಮಾತನಾಡಿ ಹೋಗುತ್ತಾರೆಂದು ಆ ಪ್ರಾಂತ್ಯದ ಪೀರ್ ಸಾಬರು ಮತ್ತು ಖಲೀಮ್ ಸಾಬರು ಸನ್ಮಾನ ಮಾಡುವವರಿಗೆ ಸಲಹೆ ಕೊಟ್ಟರಂತಲ್ಲಾ, ಥೂತ್ತೇರಿ!

*****

ಎಲ್ಲಾ ಸರಿ, ಕುಚ ಎಂಬ ವ್ಯಕ್ತಿ ಯಾರು? ಅವರನ್ನು ಹಿಡಿಯುವುದು ಹೇಗೆ? ಇಂತಹ ಅಶ್ಲೀಲ ಹೆಸರನ್ನು ಯಾರಿಟ್ಟುಕೊಳ್ಳುತ್ತಾರೆ? ಬಹುಶಃ ಅವರ ಹೆಸರು ಪುರಾಣ ಪುರುಷನಾದ ಕಚ ಎಂದಿರಬೇಕೆಂದು ಅನುಮಾನಿಸುತ್ತಲೇ ಅಲ್ಲಿ ಇಲ್ಲಿ ವಿಚಾರಿಸಿದರಂತಲ್ಲಾ. ಆಗ "ಕಚ ಎಂಬ ವ್ಯಕ್ತಿ ಈ ಪ್ರಾಂತ್ಯದಲ್ಲಿ ಸಿಗುವುದಿಲ್ಲ. ಅವರೇನಿದ್ದರೂ ಹೊನ್ನಾಳಿ, ಶಿವಮೊಗ್ಗ ಮತ್ತು ಕತ್ತಿಗೆ ಕಡೆ ಸಿಗುತ್ತಾರೆ. ಅವರ ಹೆಸರು ಕಚ ಎಂಬುದೇನೋ ಸರಿ. ಆದರೆ ಅವರ ನಿಜ ನಾಮಧೇಯ ಕತ್ತಿಗೆ ಚನ್ನಪ್ಪ ಅಂತ. ಅವರು ರಹಮತ್ ಬಗ್ಗೆ ಮಾತನಾಡುವುದು ಡವುಟು. ಏಕೆಂದರೆ ಶರಣರಲ್ಲಿ ನೊಣಬರಾದ ಅವರು ಮರುಳಸಿದ್ಧಪ್ಪ, ಜಿ.ಎಸ್.ಶಿವರುದ್ರಪ್ಪ, ಚನ್ನಬಸಪ್ಪ, ಶಿವಬಸಪ್ಪ ಇಂತವರ ಬಗ್ಗೆ ಮಾತನಾಡುತ್ತಾರೆ. ಅವರ ಬಗ್ಗೆ ಖಚಿತ ಮಾಹಿತಿ ಗೌರಿ ಲಂಕೇಶ್ ಆಫೀಸ್‌ನಲ್ಲಿ ಸಿಗುತ್ತದೆ, ಹೋಗಿ ಕೇಳಿ" ಎಂದರಂತಲ್ಲಾ, ಥೂತ್ತೇರಿ!

ಥೂತ್ತೇರಿ

-ಯಾಹೂ

*****

ಪಟ್ಟು ಬಿಡದ ಸನ್ಮಾನ ಸಂಘಟಕರು ಕುವೆಂಪು ವಿವಿ ಆವರಣದಲ್ಲಿ ಕಾಣಿಸಿಕೊಂಡು "ಇಲ್ಲಿ ಕುಚ ಎಂದರೆ ಯಾರು ಸಾರ್?" ಎಂದು ಕೇಳಲಾಗಿ "ಕುಚ ಎಂದರೆ ಕುಮಾರ ಚಲ್ಯ. ಅದು ಅವರ ಕಾವ್ಯನಾಮ. ಅಂತಹ ಹೆಸರಿಟ್ಟುಕೊಂಡರೂ, ಕುಚೋನ್ನತೆಯರ ಬಗ್ಗೆ ಇನ್ನೂ ಒಳ್ಳೆ ಕಾವ್ಯ ಬರೆಯಲಾಗಿಲ್ಲ. ಆದರೂ ಪ್ರಯತ್ನ ಬಿಟ್ಟಿಲ್ಲ. ಅಗೋ ನೋಡಿ, ಆ ಮರದ ಕೆಳಗೆ ಶರಣ ಹೆಣ್ಣುಮಕ್ಕಳೊಂದಿಗೆ ಸಿವಿಲ್ ಡ್ರೆಸ್ಸಿನ ಸ್ವಾಮಿಯಂತೆ ಮಾತನಾಡುತ್ತ ಆಕರ್ಷಕವಾಗಿ ನಗುತ್ತಿದ್ದಾರಲ್ಲಾ, ಅವರೇ ಕುಚ, ಹೋಗಿ ನೋಡಿ" ಎಂದು ಶ್ರೀಕಂಠ ಕೂಡಿಗೆ ಶಿಷ್ಯರು ಮಾರ್ಗದರ್ಶನ ಮಾಡಿದರಂತಲ್ಲಾ, ಥೂತ್ತೇರಿ!

*****

ಕಡೆಗೂ ರಹಮತ್ ಸನ್ಮಾನ ಸಭೆಗೆ ಆಗಮಿಸಿದ ಕುಚರವರು ಯಾರೊಬ್ಬರಿಗೂ ಅರ್ಥವಾಗದಂತೆ ಅರ್ಧ ಗಂಟೆ ನಾಲಿಗೆ ಕೆಲಸ ಮಾಡಿ ಕಡೆಗೆ ರಹಮತ್‌ಗೆ ಜ್ಞಾನಪೀಠವೂ ಬರಲೆಂದು ಆಶೀರ್ವದಿಸಿ ಹೋದರಂತಲ್ಲಾ. ಮೊಟ್ಟ ಮೊದಲ ಬಾರಿ ಇಂತಹ ಸಭೆಗೆ ಗಡ್ಡ ನೀವಿಕೊಂಡು ಬಂದಿದ್ದ ಸಾಬರುಗಳಿಗೆ ರಹಮತ್ ಜೊತೆ ಓದಿದವರು, ಬಾಲ್ಯ ಗೆಳೆಯರ ಮಾತು ತಲುಪಿದವೇ ಹೊರತು ಈ ಯೂನಿವರ್ಸಿಟಿ ಜನಗಳ ಒಂದು ಮಾತೂ ಅರ್ಥವಾಗಲಿಲ್ಲವಂತಲ್ಲಾ.

ಆದರೂ ತರೀಕೆರೆಯ ಕೋಡಿ ಕ್ಯಾಂಪಿನ ಸಾಬರು, "ನಮ್ದು ರಯಿಮತ್ ಕರ್ನಾಟಕ ವಳಗವೆ ಯಾರದು ಕೈಲು ಆಗ್ದೆ ಇರದು ಬಲ್ದು ಪ್ರೈಜ್‌ಗೆ ಹೊಡವಿದ್ದಾನೆ ಗೊತ್ತ. ಯಾರ್‍ದೆ ಮುಲಾಜ್ಜೆ ಇಲ್ದಂಗೆ ಬರ್ದಿರದ್ನೆ, ಬ್ಯಾಂಬ್ರು ಜನ ಬಂದು ಆಶೀರ್‍ವಾದ್‌ಗೆ ಮಾಡಿ ಹೋದ್ರು. ಇದಾನಸೌದಕ್ಕೆ ಹೋಗ್ತೆ ಎಂಎಲ್‌ಎ ಕಾಯ್ನಾಡಿ ಕುಂತಿದ್ದ ಅಂದ್ರೆ ರಹಮತ್‌ಗೆ ಎಷ್ಟು ಪವರ್ ಐತೆ ದೇಕೊ. ಅವ್ರುನಿಗೆ ಹೇಳಿ ಟಾಟಾ ಬುಡನ್ ಗಿರಿದು ಪ್ರಾಬ್ಲಂ ಸರಿ ಮಾಡಬೇಕು" ಎಂದು ಮಾತನಾಡಿಕೊಳ್ಳುತ್ತಿರುವಾಗಲೇ, ರಹಮತ್ ಮಾತಿನಲ್ಲಿ ಸೂಫಿ ವಾಸನೆ ಕಾಣಿಸಿ "ಚಲ್ರೆ, ಗ್ಯಾರೇಜ್ ಬಂದ್ ಕರ್ನೇಕು ಟೈಂ ಹುವಾ" ಎಂದುಕೊಂಡು ಜಾಗ ಖಾಲಿ ಮಾಡಿದರಂತಲ್ಲಾ, ಥೂತ್ತೇರಿ!!



ಅಸೀಮಾನಂದನಲ್ಲಿ ಪಾಪಪ್ರಜ್ಞೆ ಮೂಡಿಸಿದ ಅಬ್ದುಲ್ ಕಲೀಂ

"ಇತರೆ ಆರೆಸ್ಸೆಸ್ ನಾಯಕರಂತೆ ಅಸೀಮಾನಂದ ಕೂಡ ಅಲ್ಪಸಂಖ್ಯಾತ ಮುಸಲ್ಮಾನರ ವಿರುದ್ಧ ಕೆಂಡ ಕಾರುತ್ತಿದ್ದ. ಬಾಂಬಿಗೆ ಬಾಂಬಿನಿಂದಲೇ ಉತ್ತರ ಕೊಡಬೇಕೆಂದು ವಾದಿಸುತ್ತಿದ್ದ. ಇಂತಹ ಅಸೀಮಾನಂದ ಇವತ್ತು ನ್ಯಾಯಾಲಯದ ಮುಂದೆ ತಪ್ಪೊಪ್ಪಿಗೆ ಹೇಳಿಕೆ ನೀಡಿ RSS ನ ಭಯೋತ್ಪಾದಕ ಮುಖವನ್ನು ತೆರೆದಿಟ್ಟಿರುವುದಕ್ಕೆ ಕಾರಣ ಓರ್ವ ಮುಸಲ್ಮಾನ್ ಯುವಕನ ಸಜ್ಜನಿಕೆ.

ಆ ಯುವಕನ ಹೆಸರು ಅಬ್ದುಲ್ ಕಲೀಂ. ವಯಸ್ಸು 21.

ಕಲೀಂ ಹೈದರಾಬಾದಿನಲ್ಲಿ ಮೊಬೈಲ್ ಸೆಟ್‌ಗಳನ್ನು ಸಿಮ್‌ಕಾರ್ಡ್‌ಗಳನ್ನು ಮಾರುತ್ತಾ ಜೀವನ ಸಾಗಿಸುತ್ತಿದ್ದ. 2007 ರ ಮೇ 18 ರಂದು ಅಲ್ಲಿನ ಮೆಕ್ಕಾ ಮಸೀದಿಯಲ್ಲಿ ಮೊಬೈಲ್ ಫೋನ್ ಬಳಸಿ ಒಂದು ಪೈಪ್ ಬಾಂಬ್ ಸ್ಫೋಟಗೊಂಡು 14 ಜನ ಸತ್ತರು. ಕೂಡಲೇ ಈ ಕೃತ್ಯದ ಹಿಂದೆ ಹರ್ಕತ್ ಉಲ್ ಜಿಹಾದ್ ಎಂಬ ಮುಸಲ್ಮಾನ ಭಯೋತ್ಪಾದಕ ಸಂಘಟನೆ ಇದೆ ಎಂದು ಹೇಳಿದ ಪೊಲೀಸರು ಹಲವಾರು ಮುಸಲ್ಮಾನರನ್ನು ಬಂಧಿಸಿದ್ದರು. ಅವರುಗಳಲ್ಲಿ ಅಬ್ದುಲ್ ಕಲೀಂ ಕೂಡ ಒಬ್ಬನಾಗಿದ್ದ.

ಸುಮಾರು ಒಂದೂವರೆ ವರ್ಷಗಳ ಕಾಲ ಕಲೀಂನನ್ನು ಬಂಧನದಲ್ಲಿಟ್ಟಿದ್ದ ಪೊಲೀಸರು ಆತನಿಗೆ ಅಪಾರ ಹಿಂಸೆ ನೀಡಿದ್ದರು. ಬಾಂಬ್ ಸ್ಫೋಟದ ಹಿಂದೆ ತನ್ನ ಕೈವಾಡ ಇದೆ ಎಂದು ಒಪ್ಪಿಕೊಳ್ಳುವಂತೆ ಒತ್ತಾಯ ಮಾಡಿದ್ದರು. ಆದರೆ ಕಲೀಂ ಅದ್ಯಾವುದಕ್ಕೂ ಸಮ್ಮತಿಸಿರಲಿಲ್ಲ. ಕೊನೆಗೂ ಬಾಂಬ್ ಸ್ಫೋಟಕ್ಕೂ ಕಲೀಂನಿಗೂ ಸಂಬಂಧವನ್ನು ಸಾಬೀತುಪಡಿಸಲಾಗದೆ ಆತನನ್ನು ಬಿಡುಗಡೆ ಮಾಡಿದ್ದರು.


ಆದರೂ ಕೆಲದಿನಗಳ ನಂತರ ಮತ್ತಿನ್ಯಾವುದೋ ಕೇಸ್ ಜಡಿದು ಕಲೀಂನನ್ನು ಬಂಧಿಸಿದ ಪೊಲೀಸರು ಆತನನ್ನು ಹೈದರಾಬಾದಿನ ಚಂಚಲಗುಡ ಜೈಲಿನಲ್ಲಿಟ್ಟರು. ಕಾಕತಾಳೀಯವೆಂಬಂತೆ ಕಲೀಂನನ್ನು ಬಂಧಿಸಿಟ್ಟಿದ್ದ ಕೊಠಡಿಯಲ್ಲೇ ಅಸೀಮಾನಂದನನ್ನೂ ಹಾಕಲಾಯಿತು.

ಅಸೀಮಾನಂದನೇ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುವ ಪ್ರಕಾರ: "ಸಾರ್, ನಾನು ಜೈಲಿನಲ್ಲಿದ್ದಾಗ ಕಲೀಂನ ಪರಿಚಯವಾಯಿತು. ಆತನನ್ನು ಮೆಕ್ಕ ಮಸೀದಿ ಬಾಂಬ್ ಬ್ಲಾಸ್ಟ್‌ಗೆ ಸಂಬಂಧಿಸಿದಂತೆ ಬಂಧಿಸಿದ್ದಾರೆ ಎಂದೂ ನನಗೆ ಗೊತ್ತಾಯಿತು. ನಾನು ಆ ಜೈಲಿನಲ್ಲಿದ್ದಾಗ ಕಲೀಂ ನನಗೆ ನೀರು, ಊಟ ಇತ್ಯಾದಿಗಳನ್ನು ತಂದುಕೊಟ್ಟು ನನ್ನನ್ನು ಚೆನ್ನಾಗಿ ನೋಡಿಕೊಂಡ. ಕಲೀಂನ ಒಳ್ಳೆ ಗುಣ ಮತ್ತು ಸಜ್ಜನಿಕೆ ನನ್ನ ಆತ್ಮಸಾಕ್ಷಿಯನ್ನು ತಟ್ಟಿತು. ಆದ್ದರಿಂದ ಈ ತಪ್ಪೊಪ್ಪಿಗೆ ಹೇಳಿಕೆಯನ್ನು ನೀಡುವ ಮೂಲಕ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಿದ್ದೇನೆ. ಈ ಮೂಲಕ ಅಮಾಯಕರಿಗೆ ಕಷ್ಟಕಾರ್ಪಣ್ಯಗಳು ಎದುರಾಗುವುದು ತಪ್ಪಿ ನಿಜವಾದ ಅಪರಾಧಿಗಳಿಗೆ ಶಿಕ್ಷೆ ಆಗಲಿ ಎಂದು ಆಶಿಸುತ್ತೇನೆ."

ಅಸೀಮಾನಂದ ಎಂಬ ಹಿಂದೂತ್ವ ಭಯೋತ್ಪಾದಕನಲ್ಲಿ ಇಂತಹ ಬದಲಾವಣೆಗೆ ಕಾರಣನಾದ ಅಬ್ದುಲ್ ಕಲೀಂ ಎಂಬ ಮುಸಲ್ಮಾನ ಯುವಕ ನಿಜಕ್ಕೂ ಎಲ್ಲರ ಪ್ರಶಂಸೆಗೆ ಅರ್ಹ.

ಅಸೀಮಾನಂದ ಸ್ಫೋಟಿಸಿದ ಬಾಂಬ್

ಆರೆಸ್ಸೆಸ್ ಭಯೋತ್ಪಾದನೆ



ಸ್ವಾಮಿ ಅಸೀಮಾನಂದ ಎಂಬ ಹಿರಿಯ ಸಂಘ ಪರಿವಾರಿ ಈಗ 2006 ರಿಂದ 2008 ರ ತನಕ ಭಾರತದಲ್ಲಿ ಸಂಭವಿಸಿದ ಹಲವಾರು ಭಯೋತ್ಪಾದಕ ಕೃತ್ಯಗಳಲ್ಲಿ ತಾನು ಮತ್ತು ಇತರೆ ಆರೆಸ್ಸೆಸ್ ಮೂಲದ ಹಿಂದೂತ್ವವಾದಿಗಳು ಭಾಗಿಯಾಗಿದ್ದರ ಬಗ್ಗೆ ದೆಹಲಿ ನ್ಯಾಯಾಲಯದ ಮುಂದೆ ತಪ್ಪೊಪ್ಪಿಗೆಯನ್ನು ದಾಖಲಿಸಿದ್ದಾನೆ. ಆ ಮೂಲಕ ಆರೆಸ್ಸೆಸ್‌ನ ರಕ್ತಸಿಕ್ತ ಗುಟ್ಟೂ ರಟ್ಟಾಗಿದೆ.....

• ಗೌರಿ ಲಂಕೇಶ್

ಕಳೆದ ಎರಡು ದಶಕಗಳಿಂದ ಭಾರತದ ಯಾವುದೇ ಭಾಗದಲ್ಲಿ ಭಯೋತ್ಪಾದಕ ಕೃತ್ಯ ನಡೆಯಲಿ, ಆ ಕೃತ್ಯದ ಹಿಂದೆ ಮುಸಲ್ಮಾನರ ಕೈವಾಡ ಇದ್ದೇ ಇರುತ್ತದೆ ಎಂಬ ತರ್ಕಕ್ಕೆ ಎಲ್ಲರೂ ಬೀಳುತ್ತಾರೆ. ಅದರಲ್ಲೂ ರಾಜಕಾರಣಿಗಳು, ಪೊಲೀಸರು ಮತ್ತು ಪತ್ರಕರ್ತರಂತೂ ಇದರ ಹಿಂದೆ ಸಿಮಿ ಇದೆ, ಹುಜಿ ಇದೆ, ಲಷ್ಕರ್-ಇ-ತೋಯಿಬಾ ಇದೆ, ತಾಲಿಬಾನ್ ಇದೆ ಎಂದೆಲ್ಲ ಕಿಂಚಿತ್ತೂ ಯೋಚಿಸದೆ ಆರೋಪಿಸುತ್ತಾರೆ.

ಅಂತಹ ಭಯೋತ್ಪಾದಕ ಕೃತ್ಯಗಳು ಮುಸಲ್ಮಾನರೇ ಹೆಚ್ಚಾಗಿ ಇರುವ ಜಾಗಗಳಲ್ಲಿ, ಅವರ ಪ್ರಾರ್ಥನಾ ಮಂದಿರಗಳಲ್ಲಿ ಸಂಭವಿಸಿದಾಗಲೂ 'ಮುಸಲ್ಮಾನರ' ಕೈವಾಡ ಎಂದೇ ಎಲ್ಲರೂ ನಂಬುತ್ತಾರೆ. ಆದರೆ ಕೆಲವೇ ಕೆಲವರು ಮಾತ್ರ ಮುಸಲ್ಮಾನರು ಯಾಕೆ ಮುಸಲ್ಮಾನರನ್ನೇ ಕೊಲ್ಲುತ್ತಾರೆ? ಯಾಕೆ ಮಸೀದಿಗಳಲ್ಲಿ ಬಾಂಬ್ ಸ್ಫೋಟಿಸುತ್ತಾರೆ? ಇದರ ಹಿಂದೆ ಮುಸಲ್ಮಾನೇತರರ ಕೈವಾಡ ಇರಬಹುದೇ? ಎಂದೆಲ್ಲ ಪ್ರಶ್ನಿಸಿದ್ದರು. ಅವುಗಳಲ್ಲಿ ಈ ಪತ್ರಿಕೆಯೂ ಒಂದು.

ಈ ಪ್ರಶ್ನೆಗಳಿಗೆ ಕಾರಣಗಳೂ ಇದ್ದವು. ಮಹಾರಾಷ್ಟ್ರದ ನಾಂದೇಡ್ ಎಂಬಲ್ಲಿ ಆರೆಸ್ಸೆಸ್ ನಾಯಕನೊಬ್ಬನ ಮನೆಯಲ್ಲಿ ಬಾಂಬ್ ಸ್ಫೋಟಗೊಂಡು ಒಂದಿಬ್ಬರು ಭಜರಂಗದಳದವರು ಸತ್ತಿದ್ದರು. ಆಗ ನಡೆದ ತನಿಖೆಯಲ್ಲಿ ಗೊತ್ತಾಗಿದ್ದೇನೆಂದರೆ ಆರೆಸ್ಸೆಸ್‌ನ ಹಲವರು ಅಲ್ಲಿ ಬಾಂಬ್‌ಗಳನ್ನು ತಯಾರಿಸುತ್ತಿದ್ದು, ಅವುಗಳನ್ನು ಮುಸಲ್ಮಾನರಿರುವ ಜಾಗಗಳಲ್ಲಿ ಇಡಲು ನಕಲಿ ಗಡ್ಡಗಳನ್ನು ಮತ್ತು ಟೋಪಿಗಳನ್ನು ಖರೀದಿಸಿ ಇಟ್ಟುಕೊಂಡಿದ್ದರೆಂದರು.

ಹೀಗೆಯೇ ಇತರ ಕಡೆಗಳಲ್ಲೂ ಇಂತಹದ್ದೇ ಬಾಂಬ್ ಸ್ಫೋಟಗಳು ಸಂಭವಿಸಿದಾಗ ಅವುಗಳ ಹಿಂದೆ ಮುಸಲ್ಮಾನ ಭಯೋತ್ಪಾದಕರ ಪಾತ್ರದ ಬದಲಾಗಿ ಹಿಂದೂ ಭಯೋತ್ಪಾದಕರ ಕೈವಾಡವೇ ಕಾಣಿಸಿಕೊಂಡಿತ್ತು. ಆಗ ಮಹಾರಾಷ್ಟ್ರದ ಸರ್ಕಾರ ಹೇಮಂತ್ ಕರ್ಕರೆ ಎಂಬ ಧೀಮಂತ ಪೊಲೀಸ್ ಅಧಿಕಾರಿಯ ನೇತೃತ್ವದಲ್ಲಿ ತಂಡವೊಂದನ್ನು ರಚಿಸಿ ಇಂತಹ ಪ್ರಕರಣಗಳ ತನಿಖೆಯನ್ನು ಪ್ರಾರಂಭಿಸಿತು. ಕರ್ಕರೆ ಅವರು ಮುಸಲ್ಮಾನರ ಬಗ್ಗೆ ಪೂರ್ವಾಗ್ರಹಪೀಡಿತರಾಗದೆ ನಿಷ್ಠುರವಾಗಿ ತನಿಖೆ ನಡೆಸಿದ್ದರ ಪರಿಣಾಮ ಪ್ರಜ್ಞಾ ಸಿಂಗ್ ಎಂಬ ಢೋಂಗಿ ಸನ್ಯಾಸಿ, ಶ್ರೀಕಾಂತ ಪುರೋಹಿತ್ ಎಂಬ ಕಳ್ಳ ಸೈನ್ಯಾಧಿಕಾರಿ ಹಾಗು ಇತರೆ ಹಿಂದೂತ್ವವಾದಿಗಳು ಬಂಧನಕ್ಕೊಳಗಾದರು. ದುರದೃಷ್ಟವಶಾತ್ ಹಿಂದೂ ಭಯೋತ್ಪಾದಕರ ಜಾಡನ್ನು ಹಿಡಿದು ಹೊರಟಿದ್ದ ಕರ್ಕರೆ ಅವರು ಮುಂಬೈ ಮೇಲಿನ ದಾಳಿಯ ಸಂದರ್ಭದಲ್ಲಿ ಪಾಕಿಸ್ತಾನದ ಮುಸಲ್ಮಾನ ಭಯೋತ್ಪಾದಕರಿಗೆ ಬಲಿಯಾದರು.

ಆದರೆ ಈಗ ಸ್ವಾಮಿ ಅಸೀಮಾನಂದ ಎಂಬ ಆರೆಸ್ಸೆಸ್‌ನ ಹಿರಿಯ ಸದಸ್ಯ ತಾನೂ ಸೇರಿದಂತೆ ಇತರೆ ಆರೆಸ್ಸೆಸ್ ಕಾರ್ಯಕರ್ತರೇ ಹಲವಾರು ಭಯೋತ್ಪಾದಕ ಕೃತ್ಯಗಳ ಹಿಂದಿದ್ದದ್ದು ಎಂಬುದನ್ನು ನ್ಯಾಯಾಲಯದ ಮುಂದೆ ಒಪ್ಪಿಕೊಳ್ಳುವ ಮೂಲಕ ಆರೆಸ್ಸೆಸ್‌ನ ಭಯೋತ್ಪಾದಕ ಮುಖವನ್ನು ಹೊರಗೆಡವಿದ್ದಾನೆ.

'ಶಿಕ್ಷೆಗಿಂತಲೂ ಸತ್ಯವೇ ಮುಖ್ಯ'

ಎರಡು ವರ್ಷಗಳ ಹಿಂದೆ ಪ್ರಜ್ಞಾ ಸಿಂಗ್ ಮತ್ತು ಇತರೆ ಹಿಂದೂತ್ವವಾದಿಗಳನ್ನು






ಅಸೀಮಾನಂದನ ಆಶ್ರಮದಲ್ಲಿ ನರೇಂದ್ರ ಮೋದಿ ಮತ್ತು ಇಂದ್ರೇಶ್ ಕುಮಾರ್

ನಡುಗುತ್ತಿರುವ ಚೆಡ್ಡಿಗಳು

ಸ್ವಾಮಿ ಅಸೀಮಾನಂದನ ತಪ್ಪೊಪ್ಪಿಗೆ ಮಾಧ್ಯಮಗಳಲ್ಲಿ ಸ್ಫೋಟಗೊಂಡ ನಂತರ ಆರೆಸ್ಸೆಸ್‌ನ ಚೆಡ್ಡಿ ನಾಯಕರು ಹೆದರಿಕೆಯಿಂದ ಗಡಗಡ ನಡುಗಾಡುತ್ತಿದ್ದಾರೆ!

ಮೊದಲು ಆರೆಸ್ಸೆಸ್‌ನ ವಕ್ತಾರ ರಾಮ್ ಯಾದವ್ "ಸ್ವಾಮಿ ಅಸೀಮಾನಂದರ ಮೇಲೆ ಒತ್ತಡ ತಂದು ಇಂತಹ ಹೇಳಿಕೆಯನ್ನು ಅವರಿಂದ ಪಡೆಯಲಾಗಿದೆ" ಎಂದು ಚೀರಾಡಿದ. ಆದರೆ ವಾಸ್ತವವಾಗಿ ಆಸೀಮಾನಂದ ಸ್ವಇಚ್ಛೆಯಿಂದ ಈ ಹೇಳಿಕೆಯನ್ನು ನೀಡಿದ್ದು ಪೊಲೀಸರ ಮುಂದಲ್ಲ, ಬದಲಾಗಿ ನ್ಯಾಯಾಧೀಶರ ಮುಂದೆ ಎಂದು ಗೊತ್ತಾದ ನಂತರ ಅದೇ ರಾಮ್ ಯಾದವ್ "ಇಂತಹ ಹೇಳಿಕೆಯನ್ನು ಸಿಬಿಐ ಬಹಿರಂಗಪಡಿಸುವ ಅಗತ್ಯವಾದರೂ ಏನಿತ್ತು? ಹಾಗೆ ಮಾಡುವ ಹಿಂದಿರುವ ಉದ್ದೇಶ ಆರೆಸ್ಸೆಸ್ ಮತ್ತು ನಮ್ಮ ಸಂಘಟನೆಯ ನಾಯಕರ ಘನತೆಯನ್ನು ತೇಜೋವಧೆ ಮಾಡುವುದೇ ಆಗಿದೆ. ಆದ್ದರಿಂದ ಈ ಕುರಿತು ಸಿಬಿಐಗೆ ಆರೆಸ್ಸೆಸ್ ವಕೀಲರಿಂದ ನೋಟಿಸ್ ಕಳುಹಿಸುತ್ತೇವೆ" ಎಂದು ಅಬ್ಬರಿಸಿದ್ದ.


ಆ ಲೀಗಲ್ ನೋಟಿಸಿನಿಂದ ಆರೆಸ್ಸೆಸ್‌ನ ಮರ್ಯಾದೆಯನ್ನು ಕಾಪಾಡಲಾಗಲಿಲ್ಲ. ಆಗ ರಾಮ್ ಯಾದವ್




ಇನ್ನೊಂದು ವರಸೆಯನ್ನು ಪ್ರಾರಂಭಿಸಿದ. "ಅಸೀಮಾನಂದನಿಗೂ, ಆರೆಸ್ಸೆಸ್‌ಗೂ ಯಾವ ಸಂಬಂಧವೂ ಇಲ್ಲ. ಅಸೀಮಾನಂದನು ಶಬರಿ ಮಾತಾ ಸೇವಾ ಸಮಿತಿಯ ಟ್ರಸ್ಟಿಗಳಲ್ಲ ಒಬ್ಬ ಮಾತ್ರ" ಎಂದು ಯಾದವ್ ಹೇಳಿದ. ಅಷ್ಟೇ ಅಲ್ಲ, "ಅಸೀಮಾನಂದ ಎಂದೂ ಆರೆಸ್ಸೆಸ್‌ನ ಸದಸ್ಯನೇ ಆಗಿರಲಿಲ್ಲ" ಎಂದೂ ಹೇಳಿದ.

ಆದರೆ ಇದೆಲ್ಲ ಸುಳ್ಳು. ವಾಸ್ತವವಾಗಿ 1970 ರ ದಶಕದಿಂದಲೂ ಅಸೀಮಾನಂದ ಆರೆಸ್ಸೆಸ್ ಸದಸ್ಯನಾಗಿದ್ದಾನಲ್ಲದೆ, ಗುಜರಾತಿನ ಡಾಂಗ್ಸ್ ಜಿಲ್ಲೆಯಲ್ಲಿ ಆತ ಸ್ಥಾಪಿಸಿರುವ ಶಬರಿ ಧಾಮದಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಗುಜರಾತಿನ ಬಿಜೆಪಿ ಮುಖ್ಯಮಂತ್ರಿ ನರೇಂದ್ರ ಮೋದಿ, ಮಧ್ಯಪ್ರದೇಶದ ಬಿಜೆಪಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್, ಆರೆಸ್ಸೆಸ್ ನ ಮಾಜಿ ದಂಡನಾಯಕ ಕೆ.ಎಸ್. ಸುದರ್ಶನ್ ಮತ್ತು ಹಾಲಿ ಮುಖ್ಯಸ್ಥ ಮೋಹನ್ ಭಾಗವತ್....... ಇವರೆಲ್ಲರೂ ಭಾಗವಹಿಸಿದ್ದಾರೆ.

ಅಸೀಮಾನಂದನಿಗೂ ಆರೆಸ್ಸೆಸ್‌ಗೂ ನೇರಾನೇರ ನಂಟಿಲ್ಲದಿದ್ದರೆ ಆರೆಸ್ಸೆಸ್‌ನ ಘಟಾನುಘಟಿನಾಯಕರಾಗಲಿ, ಬಿಜೆಪಿಯ ಹಿರಿಯ ರಾಜಕಾರಣಿಗಳಾಗಲಿ ಈತನ ಆಶ್ರಮಕ್ಕೆ ಭೇಟಿ ನೀಡುತ್ತಿದ್ದರೆ?!



ಯಾರು ಈ ಅಸೀಮಾನಂದ?



ಸ್ವಾಮಿ ಅಸೀಮಾನಂದ ಅಲಿಯಾಸ್ ನಾಬಾ ಕುಮಾರ್ ಸರ್ಕಾರ್. ಮೂಲತಃ ಪಶ್ಚಿಮ ಬಂಗಾಳದವನು. ಶಾಲೆಯಲ್ಲಿ ಓದುತ್ತಿದ್ದಾಗಿನಿಂದಲೂ ಆರೆಸ್ಸೆಸ್‌ನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದ ನಾಬಾ ಕುಮಾರ್ ಡಿಗ್ರಿ ಮುಗಿಸಿದ ನಂತರ ಆರೆಸ್ಸೆಸ್‌ನ ಸಕ್ರಿಯ ಸದಸ್ಯನಾದ. 1977 ರಲ್ಲಿ ಪಶ್ಚಿಮ ಬಂಗಾಳದ ಪುರುಲಿಯ ಮತ್ತು ಬಂಕುರ ಜಿಲ್ಲೆಗಳಲ್ಲಿ ಆರೆಸ್ಸೆಸ್ ನಡೆಸುತ್ತಿದ್ದ ವನವಾಸಿ ಕಲ್ಯಾಣ ಆಶ್ರಮದಲ್ಲಿ ಕೆಲಸ ಮಾಡಲಾರಂಭಿಸಿದ.

1981 ರಲ್ಲಿ ಸ್ವಾಮಿ ಅಸೀಮಾನಂದನಾದ ನಾಬಾ ಕುಮಾರ್ 1993 ರಿಂದ 1997 ರ ತನಕ ದೇಶದಾದ್ಯಂತ ಆದಿವಾಸಿಗಳಿಗೆ ಹಿಂದೂ ಧರ್ಮದ ಬಗ್ಗೆ ಪ್ರವಚನಗಳನ್ನು ನೀಡಿದ. 1997 ರಲ್ಲಿ ಡಾಂಗ್ಸ್ ಜಿಲ್ಲೆಯಲ್ಲಿ ಶಬರಿ ಧಾಮವನ್ನು ಸ್ಥಾಪಿಸಿದ ಅಸೀಮಾನಂಡ ಕ್ರಿಶ್ಚಿಯನ್ನರ ವಿರುದ್ಧ ಕೆಂಡ ಕಾರುತ್ತಿದ್ದ ಮುಸಲ್ಮಾನರ ವಿರುದ್ಧ ಬೆಂಕಿ ಉಗುಳುತ್ತಿದ್ದ.

2002 ರಲ್ಲಿ ಅಕ್ಷರ ಧಾಮದ ಮೇಲೆ ಮುಸಲ್ಮಾನ ಉಗ್ರರು ದಾಳಿ ನಡೆಸಿ 29 ಹಿಂದೂ ಭಕ್ತರನ್ನು ಕೊಂದು ಹಾಕಿದ್ದು ಅಸೀಮಾನಂದನಲ್ಲಿ ಉಗ್ರಕೋಪವನ್ನು ಹುಟ್ಟಿಸಿತು. ಅದರ ಪರಿಣಾಮವಾಗಿಯೇ ಈ 'ಸ್ವಾಮಿ' ಹಲವಾರು ಭಯೋತ್ಪಾದಕ ಕೃತ್ಯಗಳಲ್ಲಿ ಭಾಗಿಯಾಗಿ ಹತ್ತಾರು ಅಮಾಯಕರನ್ನು ಬಲಿ ತೆಗೆದುಕೊಂಡ.

ಅದಕ್ಕೀಗ ಸತ್ಯವನ್ನು ಬಹಿರಂಗಪಡಿಸಿ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಯತ್ನಿಸುತ್ತಿದ್ದಾನೆ.

ದಯಾನಂದ ಪಾಂಡೆ ಎಂಬ ಮತ್ತೊಬ್ಬ ನಕಲಿ ಸ್ವಾಮಿಯ ...ಲ್ಲಿ ಸ್ವಾಮಿ ಅಸೀಮಾನಂದ ಬಗ್ಗೆಯೂ ಪ್ರಸ್ತಾಪ ಇದ್ದಿದ್ದರಿಂದ ಪೊಲೀಸರು ಹುಡುಕಾಡುತ್ತಿದ್ದರು. ಆದರೆ ಗುಜರಾತಿನ ಡಾಂಗ್ಸ್ ...ಅಸೀಮಾನಂದ ಸ್ಥಾಪಿಸಿದ್ದ ಶಬರಿ ಧಾಮದಿಂದ ನಾಪತ್ತೆಯಾಗಿದ್ದ ...ವ ಹರಿದ್ವಾರದಲ್ಲಿ ಅಡಗಿ ಕೂತಿದ್ದ.

...ಅಲ್ಲಿರುವುದನ್ನು ಪತ್ತೆಹಚ್ಚಿದ ಸಿಬಿಐ ಪೊಲೀಸರು 2010 ರ ...19 ರಂದು ಅವನನ್ನು ಬಂಧಿಸಿ, 2007 ರಲ್ಲಿ ಹೈದರಾಬಾದಿನ ...ೀದಿಯಲ್ಲಿ ಸಂಭವಿಸಿದ ಬಾಂಬ್ ಸ್ಫೋಟದ ಬಗ್ಗೆ ವಿಚಾರಣೆ .... ಆಗ ಅಸೀಮಾನಂದ ಇದ್ದ ಜೈಲಿನಲ್ಲಿ ಬಂಧಿಯಾಗಿದ್ದ ಅಬ್ದುಲ್ ...ಂಬ ಯುವಕನ ವರ್ತನೆಯಿಂದ ಪರಿವರ್ತನೆಗೊಂಡ (ಬಾಕ್ಸ್ ...ವನ್ನು ಬಹಿರಂಗಗೊಳಿಸುವುದೇ ನೈತಿಕವಾಗಿ ಸರಿ ಎಂಬ ನಿರ್ಧಾರಕ್ಕೆ ...ವ ಬಂದ.

...ಡಿಸೆಂಬರ್ 16 ರಂದು ಅಸೀಮಾನಂದನನ್ನು ಸಿಬಿಐ ಪೊಲೀಸರು ...ನಿಂದ ಕರೆದುಕೊಂಡು ದೆಹಲಿಯ ತೀಸ್ ಹಜಾರಿ ನ್ಯಾಯಾಲಯದ ...ಟನ್ ಮ್ಯಾಜಿಸ್ಟ್ರೇಟ್ ದೀಪಕ್ ಡಾಬಾಸ್ ಅವರ ಮುಂದೆ ...ಸಿದಾಗ, ಸರಣಿ ಬಾಂಬ್ ಸ್ಫೋಟಗಳಲ್ಲಿ ತನ್ನ ಪಾತ್ರದ ಬಗೆಗಿನ ...ನ್ನು ದಾಖಲಿಸಿಕೊಳ್ಳಬೇಕೆಂದು ಅಸೀಮಾನಂದ ವಿನಂತಿಸಿಕೊಂಡ.

ನ್ಯಾ. ಡಾಬಾಸ್ ಅವರ ಮುಂದೆ ಮತ್ತೆ ಡಿಸೆಂಬರ್ 18 ರಂದು ಹಾಜರಾದ ಅಸೀಮಾನಂದನ ನಿಲುವು ಮತ್ತಷ್ಟು ಗಟ್ಟಿಗೊಂಡಿತ್ತು. "ನನ್ನ ಈ ತಪ್ಪೊಪ್ಪಿಗೆಯಿಂದ ನನಗೆ ಜೀವಾವಧಿ ಶಿಕ್ಷೆ ಆಗುವ ಸಾಧ್ಯತೆಗಳ ಬಗ್ಗೆ ನನಗೆ ಅರಿವಿದ್ದರೂ ನಾನು ಈ ಹೇಳಿಕೆಯನ್ನು ನೀಡಲು ಇಚ್ಛಿಸುತ್ತೇನೆ" ಎಂದ ಅಸೀಮಾನಂದ. ಇದು ಬಹಳ ಸೂಕ್ಷ್ಮ ವಿಚಾರವಾಗಿದ್ದರಿಂದ ನ್ಯಾ. ಡಾಬಾಸ್ ಅವರು ತಮ್ಮ ಶೀಘ್ರ ಲಿಪಿಗಾರರ ಹೊರತಾಗಿ ಬೇರೆ ಎಲ್ಲರೂ ತಮ್ಮ ಕೊಠಡಿಯಿಂದ ಹೊರಗೆ ಹೋಗಬೇಕೆಂದು ಆದೇಶಿಸಿದರು.

ಇದಾದನಂತರ ಐದು ಗಂಟೆಗಳ ಕಾಲ ಅಸೀಮಾನಂದ ಹೇಗೆ ತಾನೂ ಸೇರಿದಂತೆ ಹಲವಾರು ಹಿಂದೂತ್ವವಾದಿಗಳು ಭಯೋತ್ಪಾದಕ ಕೃತ್ಯಗಳಲ್ಲಿ ತೊಡಗಿದ್ದೆವು ಎಂಬುದನ್ನು ವಿವರವಾಗಿ ಹೇಳುವ ಮೂಲಕ ಒಂದು ದೊಡ್ಡ ಸುದ್ದಿಯನ್ನೇ ಸ್ಫೋಟಿಸಿದ. ಆ ಪ್ರಕ್ರಿಯೆಯಲ್ಲಿ ತಮ್ಮದು ಒಂದು ಸಾಂಸ್ಕೃತಿಕ ಸಂಘಟನೆ, ದೇಶಭಕ್ತರ ಕೂಟ ಎಂದೆಲ್ಲ ಹೇಳಿಕೊಳ್ಳುವ ಆರೆಸ್ಸೆಸ್ ಮತ್ತು ಅದರ ವಿವಿಧ ಅಂಗಗಳ ಭಯೋತ್ಪಾದಕ ಮುಖವನ್ನು ಅಸೀಮಾನಂದ ಹೊರಗೆಡವಿದ.

ಆತನ ಹೇಳಿಕೆಯ ಪ್ರಕಾರ ಮಹಾರಾಷ್ಟ್ರದ ಮಾಲೆಗಾಂವ್‌ನಲ್ಲಿ 2006 ಮತ್ತು 2007 ರಲ್ಲಿ ಸ್ಫೋಟಗೊಂಡ ಬಾಂಬ್‌ಗಳು, 2007 ರಲ್ಲಿ ಸಮ್ಜೋತಾ ಎಕ್ಸ್‌ಪ್ರೆಸ್‌ನಲ್ಲಿನ ಬಾಂಬ್ ಬ್ಲಾಸ್ಟ್, 2007 ರಲ್ಲಿ ಆಜ್ಮೇರ್ ಶರೀಫ್ ದರ್ಗಾದಲ್ಲಿ ನಡೆದ ಸ್ಫೋಟ ಮತ್ತು 2007 ರಲ್ಲಿ ಹೈದರಾಬಾದಿನ ಮೆಕ್ಕಾ ಮಸೀದಿಯಲ್ಲಿನ ಬಾಂಬ್ ಬ್ಲಾಸ್ಟ್‌ಗಳ ಹಿಂದೆ ಇದ್ದದ್ದು ಯಾವುದೇ ಮುಸಲ್ಮಾನರ ಸಂಘಟನೆ ಅಲ್ಲ, ಆರೆಸ್ಸೆಸ್ ಬದಲಾಗಿ ವಿವಿಧ ಪ್ರಚಾರಕರ ತಂಡ!

ಇಷ್ಟೇ ಮುಖ್ಯವಾದ ಹಲವಾರು ಇತರೆ ಅಂಶಗಳನ್ನೂ ಅಸೀಮಾನಂದ ಹೊರಗೆಡವಿದ್ದಾನೆ. ಅದರಲ್ಲಿ ಪ್ರಮುಖವಾದದ್ದು ಆರೆಸ್ಸೆಸ್‌ನ ಕೇಂದ್ರ ಸಮಿತಿಯ ಸದಸ್ಯನಾಗಿರುವ ಇಂದ್ರೇಶ್ ಕುಮಾರ್‌ನೇ ಈ ಎಲ್ಲಾ ಭಯೋತ್ಪಾದಕ ಕೃತ್ಯಗಳಿಗೆ ಪ್ರಚಾರಕರ RSS ತಂಡಗಳನ್ನು ರಚಿಸಿದ್ದು ಮತ್ತು ಅವುಗಳಿಗೆ ಹಣಕಾಸನ್ನು ಪೂರೈಸಿದ್ದು.

2001 ರಲ್ಲೇ ಮುಸಲ್ಮಾನರನ್ನು ಮತ್ತು ಅವರ ಪ್ರಾರ್ಥನಾ ಸ್ಥಳಗಳನ್ನು ಗುರಿಯಾಗಿಸಿಕೊಂಡು ಭಯೋತ್ಪಾದನೆ ನಡೆಸಬೇಕೆಂಬ ಪ್ಲಾನ್ ಅನ್ನು ಸಿದ್ಧಗೊಳಿಸಿ ಅದಕ್ಕೆಂದು ಸುನೀಲ್ ಜೋಷಿ, ರಾಮಚಂದ್ರ ಕಲ್‌ಸಂಗ್ರಾ ಮತ್ತು ಸಂದೀಪ್ ಡಾಂಗೆ ಎಂಬ ಮೂವರ ಮಧ್ಯಪ್ರದೇಶದ ಆರೆಸ್ಸೆಸ್ ಪ್ರಚಾರಕರನ್ನು ನೇಮಿಸಲಾಯಿತು. ಆನಂತರ ಮಹಾರಾಷ್ಟ್ರ, ಗುಜರಾತ್ ಮತ್ತು ರಾಜಸ್ಥಾನದಲ್ಲಿದ್ದ ಇತರೆ ಹಿಂದೂತ್ವವಾದಿಗಳೂ ಈ ಮೂವರ ತಂಡವನ್ನು ಸೇರಿಕೊಂಡರು. ಇಲ್ಲಿ ಗಮನಿಸಬೇಕಾದ ವಿಚಾರ ಯಾವುದೆಂದರೆ ಇವರೆಲ್ಲರೂ ಆರೆಸ್ಸೆಸ್. ಭಜರಂಗದಳ, ವಿಶ್ವಹಿಂದೂ ಪರಿಷತ್, ಅಭಿನವ ಭಾರತ, ಜೈ ವಂದೇ ಮಾತರಂ ಮತ್ತು ವನವಾಸಿ ಕಲ್ಯಾಣ ಆಶ್ರಮದಂತಹ ಹಿಂದೂತ್ವವಾದಿ ಸಂಘ ಪರಿವಾರದ ಅಂಗ ಸಂಸ್ಥೆಗಳ ಸದಸ್ಯರೇ ಆಗಿದ್ದರು. ಅಸೀಮಾನಂದ ಈ ತಂಡವನ್ನು ಸೇರಿದ್ದು 2006 ರಲ್ಲಿ. ಅದೇ ವರ್ಷ ಮಾರ್ಚ್ ತಿಂಗಳಲ್ಲಿ ವಾರಣಾಸಿಯಲ್ಲಿರುವ ಸಂಕಟ್‌ಮೋಚನ ದೇವಸ್ಥಾನದ ಮೇಲೆ ದಾಳಿಯಾಯಿತು. ಇದಕ್ಕೆ ಪ್ರತೀಕಾರವನ್ನು ತೆಗೆದುಕೊಳ್ಳಲೇ ಬೇಕು ಎಂದು ನಿರ್ಧರಿಸಿ ಈ ಹಿಂದೂತ್ವ ಭಯೋತ್ಪಾದಕರು ಮೊದಲ ಕೃತ್ಯಕ್ಕೆ ಸಿದ್ಧತೆ ನಡೆಸಿದರು.

ಜೂನ್ 2006 ರಲ್ಲಿ ಅಸೀಮಾನಂದ, ಪ್ರಜ್ಞಾ ಸಿಂಗ್, ಸುನೀಲ್ ಜೋಷಿ ಮತ್ತು ರಿತೇಶ್ವರ್ ಭೇಟಿಯಾದರು. ಆ ಸಭೆಯಲ್ಲಿ "ಬಾಂಬಿಗೆ ಬಾಂಬಿನಿಂದಲೇ ಉತ್ತರಿಸಬೇಕು" ಎಂದಿದ್ದ ಅಸೀಮಾನಂದ ಅದಕ್ಕೆಂದು ಸಾವಿರಾರು ರೂಪಾಯಿಗಳನ್ನು ನೀಡಿದ. ಅಷ್ಟೇ ಅಲ್ಲ, ಮಾಲೆಗಾಂವ್‌ನಲ್ಲಿ ಮುಸಲ್ಮಾನರು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಅಲ್ಲೇ ಸರಣಿ ಬಾಂಬ್‌ಗಳನ್ನು ಸ್ಫೋಟಿಸಬೇಕೆಂದೂ ಈತನೇ ಸೂಚಿಸಿದ್ದ. ಜೊತೆಗೆ ದೇಶದ ವಿಭಜನೆಯ ಸಮಯದಲ್ಲಿ ಹೈದರಾಬಾದಿನ ನಿಜಾಮ ಪಾಕಿಸ್ತಾನದೊಂದಿಗೆ ಇರಬೇಕು ಎಂದಿದ್ದಕ್ಕೆ ಅಲ್ಲೂ ಬಾಂಬ್ ಸ್ಫೋಟಿಸಬೇಕೆಂದೂ, ಅಜ್ಮೇರ್‌ನಲ್ಲಿರುವ ಪ್ರಖ್ಯಾತ ದರ್ಗಾಕ್ಕೆ ಹಿಂದೂಗಳೂ ಹೆಚ್ಚಿನ ಸಂಖ್ಯೆಯಲ್ಲಿ ನಡೆದುಕೊಳ್ಳುವುದರಿಂದ ಅಲ್ಲೂ ಭಯೋತ್ಪಾದಕ ಕೃತ್ಯವನ್ನು ನಡೆಸಿ ಹಿಂದೂಗಳಿಗೂ ಮತ್ತು ಮುಸಲ್ಮಾನರಿಗೆ ಪಾಠ ಕಲಿಸಬೇಕೆಂದೂ ಅಸೀಮಾನಂದನೇ ಹೇಳಿದ್ದ.

ಅದರಂತೆ 2006 ರ ಸೆಪ್ಟೆಂಬರ್ 8 ರಂದು ಮಾಲೆಗಾಂವ್‌ನಲ್ಲಿ ನಾಲ್ಕು ಬಾಂಬ್‌ಗಳು ಸ್ಫೋಟಗೊಂಡು 31 ಮುಸಲ್ಮಾನರು ಸತ್ತಿದ್ದರು.

2007 ರ ಫೆಬ್ರವರಿ 18 ರಂದು ಸಂಜೋತಾ ಎಕ್ಸ್‌ಪ್ರೆಸ್ ಟ್ರೈನ್‌ನಲ್ಲಿ ಎರಡು ಬಲಿಷ್ಠ ಬಾಂಬ್‌ಗಳು ಸ್ಫೋಟಗೊಂಡು, ಅರವತ್ತು ಜನ (ಅವರಲ್ಲಿ ಹೆಚ್ಚಿನವರು ಪಾಕಿಸ್ತಾನದವರು) ಸಾವನ್ನಪ್ಪಿದರು.

ಅದೇ 2007 ರ ಮೇ 17 ರಂದು ಹೈದರಾಬಾದಿನ ಮೆಕ್ಕಾ ಮಸೀದಿಯಲ್ಲಿ 4000 ಜನ ಪ್ರಾರ್ಥನೆಗೆಂದು ಸೇರಿದ್ದಾಗ ಬಾಂಬ್ ಸ್ಫೋಟಗೊಂಡು 24 ಜನ ಮುಸಲ್ಮಾನರು ಸತ್ತರು.

2007 ರ ಅಕ್ಟೋಬರ್ 11 ರಂದು ಅಜ್ಮೇರ್‌ನ ದರ್ಗಾದಲ್ಲಿ ಬಾಂಬ್ ಸ್ಫೋಟಗೊಂಡು ಮೂವರು ಅಸುನೀಗಿದರು.

2008 ರ ಸೆಪ್ಟೆಂಬರ್ 29 ರಂದು ಮಾಲೆಗಾಂವ್‌ನಲ್ಲಿ ಮತ್ತೊಂದು ಬಾಂಬ್ ಸ್ಫೋಟಗೊಂಡು ಮತ್ತಷ್ಟು ಜನ ಜೀವ ತೆತ್ತಿದ್ದರು.

ಈ ಎಲ್ಲಾ ಪ್ರಕರಣಗಳಲ್ಲಿ ಮುಸಲ್ಮಾನರೇ ಅಪರಾಧಿಗಳೆಂದು ಆ ಸಮುದಾಯದ ನೂರಾರು ಜನರನ್ನು ಮಹಾರಾಷ್ಟ್ರ, ಆಂಧ್ರ ಮತ್ತು ರಾಜಸ್ಥಾನದ ಪೊಲೀಸರು ಬಂಧಿಸಿದ್ದರು.

ಆದರೆ ನಿಜವಾದ ಅಪರಾಧಿಗಳು ಆರೆಸ್ಸೆಸ್‌ನ ಹಿಂದೂತ್ವವಾದಿಗಳು ಎಂಬುದೀಗ ಹೊರಬಿದ್ದಿದೆ.


ಆ ಪ್ರಕ್ರಿಯೆಯಲ್ಲಿ ಆರೆಸ್ಸೆಸ್‌ನ ಕರಾಳಹಿಂದೂತ್ವ ಭಯೋತ್ಪಾದಕ ಮುಖವೂ ಅನಾವರಣಗೊಂಡಿದೆ.



...ಬ್ ಸ್ಫೋಟ



ಅಜ್ಮೀರ್ ದರ್ಗಾದಲ್ಲಿ ಬಾಂಬ್ ಸ್ಫೋಟ



ಸಂಜೋತಾ ರೈಲು ದುರಂತ



ಮೆಕ್ಕಾ ಮಸೀದಿಯಲ್ಲಿ ಬಾಂಬ್ ಬ್ಲಾಸ್ಟ್

...ಯಾವುದೇ ಭಯ, ಒತ್ತಡ ಅಥವಾ ಆಮಿಷಗಳಿಲ್ಲದೆ ...ತವಾಗಿ ಇಂತಹ ಒಪ್ಪಿಗೆಯನ್ನು ನೀಡುತ್ತಿರುವುದಾಗಿಯೂ ಹೇಳಿದ. ... ಡಾಬಾಸ್ ಅವರು ಕಾನೂನಿನ ಪ್ರಕಾರ ಈ ನಿರ್ಧಾರದ ಬಗ್ಗೆ ... ಯೋಚಿಸಿ ಎಂದು ಸೂಚಿಸಿ, ಆತನ ಮೇಲೆ ಪೊಲೀಸರು ...ರಬಾರದೆಂಬ ಕಾರಣಕ್ಕೆ ಎರಡು ದಿನಗಳ ಮಟ್ಟಿಗೆ ಮತ್ತೆ ಜೈಲಿಗೆ ....

...ಷ್ಟ್ರಪತಿಗಳಿಗೆ ಸ್ವಾಮಿ ಬರೆದ ಪತ್ರ



ಹಫೀಸ್ ಸಯ್ಯೆದ್

...ಅಸೀಮಾನಂದನಿಂದ ಬಲಾತ್ಕಾರವಾಗಿ ತಪ್ಪೊಪ್ಪಿಗೆಯನ್ನು ಪಡೆಯಲಾಗಿದೆ ಎಂದು ಆರೆಸ್ಸೆಸ್‌ನ ...ು ಬಾಯಿ ಬಡಿದುಕೊಂಡಿದ್ದರಲ್ಲವೆ? ಆದರೀಗ ತಾನು ಸ್ವಇಚ್ಛೆಯಿಂದಲೇ ಆ ಹೇಳಿಕೆಯನ್ನು ...ನೆಂಬುದನ್ನು ಅಸೀಮಾನಂದನೇ ಎರಡು ಪತ್ರಗಳನ್ನು ಬರೆಯುವ ಮೂಲಕ ದೃಢಪಡಿಸಿದ್ದಾನೆ.

...ಚಿಗೆ ಜೈಲಿನಿಂದಲೇ ಅಸೀಮಾನಂದ ಎರಡು ಪತ್ರಗಳನ್ನು ಬರೆದಿದ್ದಾನೆ. ಮೊದಲನೆ ಪತ್ರ ... ರಾಷ್ಟ್ರಪತಿ ಪ್ರತಿಭಾ ಪಾಟೀಲ್ ಅವರನ್ನು ಉದ್ದೇಶಿಸಿದ್ದರೆ ಎರಡನೆ ಪತ್ರ ಪಾಕಿಸ್ತಾನದ ಅಧ್ಯಕ್ಷ ...ಅಲಿ ಜರ್ದಾರಿ ಅವರನ್ನು ಉದ್ದೇಶಿಸಿದೆ. ಈ ಎರಡೂ ಪತ್ರಗಳು ಅಸೀಮಾನಂದ ಹಸ್ತಾಕ್ಷರದಲ್ಲೇ ...ವುಗಳಲ್ಲಿ ತಾನು ಮಾಡಿದ ತಪ್ಪುಗಳನ್ನು ಆತ ಒಪ್ಪಿಕೊಂಡಿದ್ದಾನೆ. ತಾನು ಮತ್ತು ತನ್ನ ಸಹಚರರು ಮೆಕ್ಕಾ ಮಸೀದಿಯಲ್ಲಿ ಸ್ಫೋಟಿಸಿದ ಬಾಂಬ್ ಕೃತ್ಯಕ್ಕೆ ಅಬ್ದುಲ್ ಕಲೀಂ ಎಂಬ ಅಮಾಯಕ ಯುವಕನ



ಬಂಧನವಾಗಿದ್ದು, ಕಲೀಂನಿಗೆ ಪೊಲೀಸರು ಹಿಂಸೆ ನೀಡಿದ್ದು, ಕಲೀಂನ ಸಜ್ಜನಿಕೆ ತನ್ನನ್ನು ತಾಕಿದ್ದು ಅದರಿಂದಾಗಿ ತನ್ನ ಮನ ಪರಿವರ್ತನೆ ಆಗಿದ್ದರ ಬಗ್ಗೆ ವಿವರಿಸಿದ್ದಾನೆ. ಅಷ್ಟೇ ಅಲ್ಲ "ಎರಡು ಸಮುದಾಯಗಳ ನಡುವಿನ ದ್ವೇಷಕ್ಕಿಂತ ಇಬ್ಬರು ಮನುಷ್ಯರ ನಡುವಿನ ಪ್ರೇಮವೇ ಹೆಚ್ಚು ಶಕ್ತಿಶಾಲಿಯಾಗಿದೆ ಎಂಬುದು ನನಗೀಗ ಅರಿವಾಗಿದೆ" ಎಂದಿದ್ದಾನೆ.

ಪಾಕಿಸ್ತಾನ ಅಧ್ಯಕ್ಷ ಜರ್ದಾರಿಗೆ ಬರೆದಿರುವ ಪತ್ರದಲ್ಲಿ ಲಷ್ಕರ್-ಇ- ತೋಯಿಬಾದ ನಾಯಕ ಹಫೀಸ್ ಸಯ್ಯೆದ್ ಅನ್ನು ಮತ್ತು ತಾಲಿಬಾನ್ ನಾಯಕ ಮುಲ್ಲಾ ಓಮರ್‌ನನ್ನು ಭೇಟಿ ಆಗುವ ಆಸೆ ತನಗಿದೆಯೆಂದೂ, ತನ್ನಲ್ಲಾಗಿರುವ ಮಾನಸಿಕ ಪರಿವರ್ತನೆಯನ್ನು ಅವರಲ್ಲೂ ಮೂಡಿಸಬಯಸುತ್ತೇನೆಂದೂ ಅಸೀಮಾನಂದ ಹೇಳಿದ್ದಾನೆ.

ಇದೆಲ್ಲ ಏನನ್ನು ಸೂಚಿಸುತ್ತದೆ?

ಆರೆಸ್ಸೆಸ್ ಎಂಬುದೂ ಒಂದು ಭಯೋತ್ಪಾದಕ ಸಂಘಟನೆ ಎಂಬುದನ್ನಲ್ಲವೇ?

ಉತ್ತರ ಕರ್ನಾಟಕ: ಹಣ-ಹೆಂಡದಲ್ಲಿ ಅರಳಿದ ಕಮಲ
ಕಾಂಗ್ರೆಸ್ ಆಟಕ್ಕುಂಟು, ಜೆಡಿಎಸ್ ಲೆಕ್ಕಕ್ಕಿಲ್ಲ...

ಉತ್ತರ ಕರ್ನಾಟಕದ ತುಂಬೆಲ್ಲಾ ಚೆಡ್ಡಿಗಳು ಹೊಳೆಯಂತೆ ಹರಿಸಿದ ಹೆಂಡ, ಹಣದಿಂದ ಜಿ.ಪಂ, ತಾ.ಪಂಗಳಲ್ಲಿ ಕಮಲ ಅರಳಿದಂತಾಗಿದೆ. ಲಿಂಗಾಯತ ಸಮುದಾಯದ ಪ್ರಭಾವ ಕೂಡಾ ಬಿಜೆಪಿಗೆ ನೆರವಾಗಿದೆ. ಅನಾರೋಗ್ಯ ಮಂತ್ರಿ ಬಿ.ಶ್ರೀರಾಮುಲುನಿಂದ ಗದಗ ಜಿಲ್ಲೆಯ ಉಸ್ತುವಾರಿ ಕಿತ್ತುಕೊಂಡ ಭಾಗ್ಯಲಕ್ಷ್ಮಿ ಸೀರೆ ಮಂತ್ರಿ ಸಿ.ಸಿ.ಪಾಟೀಲ ಇಲ್ಲಿ ಅಧಿಕಾರ ವಹಿಸಿಕೊಂಡಾಗಲೆ ಬಿಜೆಪಿಗೆ ಉಳಿಗಾಲವಿಲ್ಲ ಎಂಬಂತಾಗಿತ್ತು. ಈಗ ಅದು ನಿಜವಾಗಿದೆ.

ಬೆಳಗಾವಿ

ಕಳೆದ ಲೋಕಸಭಾ ಮತ್ತು ವಿಧಾನಸಭೆಯ ಉಪ ಚುನಾವಣೆ ಸಮಯದಲ್ಲೇ ಇಲ್ಲಿಂದ ಕಾಲ್ಕೀಳಬೇಕಾಗಿದ್ದ ಬಿಜೆಪಿ ಮರಾಠಿಗರೊಂದಿಗೆ ವಿಲಾಪಿ ರಾಜಕಾರಣ ಮಾಡಿಕೊಂಡು ಗೆಲುವು ಕಂಡಿತ್ತು. ಅದೇ ಇವತ್ತು ಜಿಪಂ ಚುನಾವಣೆಯಲ್ಲಿ ಬಹುಮತದ ಗೆಲುವು ಪಡೆಯಲು ಬಿಜೆಪಿಗೆ ಸಹಕಾರಿಯಾಗಿದೆ. ಜಿಲ್ಲಾ ಮಂತ್ರಿಯಾಗಿರುವ ಉಮೇಶ ಕತ್ತಿ ಹರಿಸಿದ ಹಣ-ಹೆಂಡಕ್ಕೆ ಲೆಕ್ಕವಿಲ್ಲ. ಅಲ್ಲದೆ ಲಿಂಗಾಯತರು ಪ್ರಬಲವಾಗಿರುವ ಕಡೆಗಳಲ್ಲಿ ರಾಜ್ಯಸಭಾ ಸದಸ್ಯ ಪ್ರಭಾಕರ ಕೋರೆಯ ಗಿಮಿಕ್ ವರ್ಕೌಟ್ ಆಗಿದೆ.

ಸಕ್ಕರೆ ಕಾರ್ಖಾನೆಗಳಲ್ಲಿ ಇವರು ರೈತರಿಗೆ ಎಸಗಿರುವ ಅನ್ಯಾಯವನ್ನು ಲೆಕ್ಕಿಸಿದರೆ ಗ್ರಾಮೀಣ ಭಾಗದ ರೈತರು ಇವರನ್ನು ತಮ್ಮ ಹಳ್ಳಿಗಳಿಗೂ ಸೇರಿಸಿಕೊಳ್ಳಬಾರದಾಗಿತ್ತು. ಆದರೆ ಜನರ ಬಡತನವನ್ನೇ ತನ್ನ ರಾಜಕೀಯ ಬಂಡವಾಳವನ್ನಾಗಿಸಿಕೊಂಡಿರುವ ಬಿಜೆಪಿ ಓಟಗಿಷ್ಟು ಅಂತಾ ರೇಟು ಫಿಕ್ಸ್ ಮಾಡಿ ಗೆದ್ದಿರುವುದಂತೂ ನಿಜ.


ಮಂಜುನಾಥ್

ಕಾಂಗ್ರೆಸ್ ಅಧಿಕಾರಕ್ಕೆ ಬರದಿದ್ದರೂ ಇನ್ನಷ್ಟು ಸೀಟು ಗೆದ್ದು ಪ್ರಬಲ ವಿರೋಧ ಪಕ್ಷವಾಗಬಹುದಿತ್ತು, ಜಿಲ್ಲಾ ಅಧ್ಯಕ್ಷೆ ಲಕ್ಷ್ಮಿ ಹೆಬ್ಬಾಳ್ಕರ್ ಸಂಘಟನಾ ಚತುರೆ. ಆದರೆ ಜಿಲ್ಲೆಯಲ್ಲಿರುವ ಕಾಂಗ್ರೆಸ್‌ನ ಹಿರಿ ತಲೆಗಳಾದ ಪ್ರಕಾಶ ಹುಕ್ಕೇರಿ, ವಿ.ಎಸ್.ಕೌಜಲಗಿ, ಎಂ.ಎಲ್.ಸಿ ವೀರಕುಮಾರ ಪಾಟೀಲಗಳು ಎಲ್ಲಿ ಲಕ್ಷ್ಮಿ ಜಿಲ್ಲೆಯಲ್ಲಿ ಬೆಳೆದುಬಿಡುತ್ತಾಳೋ ಎಂಬ ಕಾರಣಕ್ಕೆ ಆಕೆಯ ಕಾಲೆಳೆಯುವ ಕೆಲಸ ಮಾಡಿದ್ದು ಅವರ ಪಕ್ಷಕ್ಕೇ ದೊಡ್ಡ ಹೊಡೆತ ಕೊಟ್ಟಿದೆ. ತಮ್ಮ ಸಂಬಂಧಿಗಳು ಸ್ಪರ್ಧಿಸಿದ್ದ ಕ್ಷೇತ್ರಗಳಿಗಷ್ಟೆ ಸೀಮಿತಗೊಂಡ ಈ ಲೀಡರ್‌ಗಳು ಅವರನ್ನು ಆರಿಸಿ ತರಲು ಶ್ರಮಹಾಕಿದರೆ ಹೊರತು ಬೇರೆ ಅಭ್ಯರ್ಥಿಗಳತ್ತ ಗಮನ ಹರಿಸಲೇ ಇಲ್ಲ.


ಶಿವಕುಮಾರ್

ಇನ್ನು ಜೆಡಿಎಸ್ ಕಳೆದ ಲೋಕಸಭಾ ಚುನಾವಣೆ ವೇಳೆಗೆ ಜಿಲ್ಲೆಯಲ್ಲಿ ಭರವಸೆ ಹುಟ್ಟಿಸಿದ್ದ ಜಿಲ್ಲಾಧ್ಯಕ್ಷ ಎ.ಬಿ.ಪಾಟೀಲರ ಲಿಂಗಾಯತ ಪ್ರಭಾವ ಮತ್ತೊಮ್ಮೆ ಠುಸ್ ಆಗಿದೆ.

ಮರಾಠಿಗರು ಆರು ಜನರನ್ನು ಗಡಿಭಾಗದ ಕ್ಷೇತ್ರಗಳಿಂದ ಆರಿಸಿ ಕಳುಹಿಸಿ ಗಡಿ ವಿವಾದವನ್ನು ಜೀವಂತವಾಗಿಡಲು ಪ್ರಯತ್ನಿಸಿದ್ದಾರೆ. ಜಿಲ್ಲೆಯ ಹತ್ತು ತಾಪಂಗಳಲ್ಲಿ ಒಂಭತ್ತರಲ್ಲಿ ಅಧಿಕಾರ ಪಡೆದ ಬಿಜೆಪಿ ಅತಂತ್ರವಾಗಿರುವ ಒಂದರಲ್ಲಿಯಾದರೂ ಎಂಇಎಸ್‌ನೊಂದಿಗೆ ಹೊಂದಾಣಿಕೆ ಮಾಡಿಕೊಂಡು ಅಧಿಕಾರ ನಡೆಸಲು ಸಿದ್ಧವಾಗಿದೆ. ಆದರೆ ಜಿಲ್ಲಾ ಪಂಚಾಯತಿ ಅಧ್ಯಕ್ಷ ಸ್ಥಾನ ಮಾತ್ರ ಯಡಿಯೂರಪ್ಪನ ಪರಮಾಪ್ತ ಶಿಷ್ಯ ಅರಬಾವಿಯ ಈರಣ್ಣ ಕಡಾಡಿಗೆ ಒಲಿದುಬಂದಿದೆ. ಅವನಿಗೆ ಅನುಕೂಲವಾಗುವಂತೆ ಸಾಮಾನ್ಯ ಮೀಸಲಾತಿಯನ್ನು ಪ್ರಕಟಿಸಿ ಯಡ್ಡಿ ಈರಣ್ಣಗೆ ಯೋಗ್ಯ ಪೋಸ್ಟ್ ಕೊಟ್ಟಿದ್ದಾರೆ.


ಸಂತೋಷ್

ಧಾರವಾಡ

ಜಗದೀಶ ಶೆಟ್ಟರನ ಉಸ್ತುವಾರಿಯಲ್ಲಿ ಇಪ್ಪತ್ತೆರಡು ಸ್ಥಾನ ಹೊಂದಿರುವ ಧಾರವಾಡ ಜಿ.ಪಂ.ನಲ್ಲಿ ಹದಿನೈದು ಸ್ಥಾನಗಳನ್ನು ಗೆದ್ದ ಬಿಜೆಪಿ ಅಧಿಕಾರಕ್ಕೆ ವಕ್ಕರಿಸಿದೆ. ಯಡ್ಡಿ ಈ ಜಿಲ್ಲೆಗೆ ನಯಾ ಪೈಸ ಕೊಟ್ಟಿಲ್ಲ.

ಕಾಂಗ್ರೆಸ್ ಹಳೇ ಜಗಳಗಳನ್ನೆ ಕೆದಕುತ್ತಾ ಇಲ್ಲಿ ಅಧಿಕಾರ ಕಳೆದು ಕೊಳ್ಳುವಂತಾಗಿದೆ. ಜಿಲ್ಲಾ ಗ್ರಾಮೀಣ ಅಧ್ಯಕ್ಷ ಸಿ.ಎಸ್.ಶಿವಳ್ಳಿ, ಎಂ.ಎಲ್.ಸಿ ಶ್ರೀನಿವಾಸ ಮಾನೆ, ಕೆ.ಎನ್.ಗಡ್ಡಿಗಳು ಗೆಲ್ಲದ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿ ಕ್ಷೇತ್ರ ಕಳೆದುಕೊಂಡಿದ್ದಾರೆ. ಜಿಲ್ಲೆಯ ಮೇಲೆ ಹಿಡಿತ ಸಾಧಿಸಲು ಹೊರಟಿರುವ ಕಲಘಟಗಿ ಶಾಸಕ ಸಂತೋಷ್ ಲಾಡ್ ಐದು ಜನರನ್ನು ಆರಿಸಿ ತರುವಲ್ಲಿ ಯಶಸ್ಸು ಕಂಡರೂ ಅವರ ಸ್ವಂತ ಕ್ಷೇತ್ರದ ತಾಪಂ ಚೆಡ್ಡಿಗಳ ಕೈವಶವಾಗಿದೆ.


ರಾಮುಲು

ಇನ್ನು ಧಾರವಾಡ ಗ್ರಾಮೀಣ ಕ್ಷೇತ್ರದ ಮೇಲೆ ಕಣ್ಣಿಟ್ಟಿರುವ ಮಾಜಿ ಶಾಸಕ ಎ.ಬಿ.ದೇಸಾಯಿ ಅವರ ಪುತ್ರ ಅಮೃತ ದೇಸಾಯಿ ಎರಡನೇ ಬಾರಿಗೆ ಆರಿಸಿ ಬಂದು ಮುಂದೆ ಅಸೆಂಬ್ಲಿಯನ್ನು ಪ್ರವೇಶಿಸುವ ತಯಾರಿ ಪ್ರಾರಂಭಿಸಿದ್ದಾನೆ. ಮಂತ್ರಿ ಜಗದೀಶ ಶೆಟ್ಟರ್, ಸಂಸದ ಪ್ರಲ್ಹಾದ ಜೋಶಿ ಮತ್ತು ಶಾಸಕಿ ಸೀಮಾಮಸೂತಿಗೆ ಈ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕಾಗಿದ್ದ ಧಾರವಾಡದ ಗ್ರಾಮೀಣ ಜನತೆ ಇವರ ಹಣ ಹೆಂಡಕ್ಕೆ ಅದ್ಹೇಗೆ ಮರುಳಾದರೋ ಗೊತ್ತಿಲ್ಲ.

ಹಾವೇರಿ

ಆಪರೇಶನ್ ಕಮಲದ ಮೂಲಕ ಜಿಪಂನಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತಂದಿದ್ದ ಮಂತ್ರಿ ಸಿ.ಎಂ. ಉದಾಸಿಯ ಮಗ ಎಂ.ಪಿ.ಶಿವಕುಮಾರ ಉದಾಸಿ, ಈ ಬಾರಿ ಪಕ್ಷವನ್ನು ಸ್ವತಂತ್ರವಾಗಿ ಅಧಿಕಾರಕ್ಕೆ ತಂದು ಬೀಗುತ್ತಿದ್ದಾನೆ. ಶಿಗ್ಗಾವಿ, ಸವಣೂರು, ಹಾವೇರಿ, ಬ್ಯಾಡಗಿ, ಹಿರೇಕೆರೂರಿನ ಎಲ್ಲ ಕ್ಷೇತ್ರಗಳಲ್ಲಿ ಕಮಲ ಹೆಂಡದಲ್ಲಿ ಅರಳಿನಿಂತಿದೆ. ಮಂತ್ರಿ ಬೊಮ್ಮಾಯಿ ತನ್ನ ಕ್ಷೇತ್ರದಲ್ಲಿ ಜಿಪಂಗೆ ತಲಾ 20 ಲಕ್ಷದಂತೆ ಹಣ ಮತ್ತು ಹುಬ್ಬಳ್ಳಿಯ ಕಲಬೆರಕೆಯ ಸರಾಯಿಯನ್ನು ಹಂಚಿ ಸೋಲು ತಪ್ಪಿಸಿಕೊಂಡಿದ್ದಾನೆ. ಉದಾಸಿಯಂತೂ, ಜಿಲ್ಲೆಯ ವೈನ್ ಶಾಪ್‌ಗಳ ಮಾಲೀಕರಿಂದ ಪರ್ಮಿಟ್ ಹಾಕಿಸಿಕೊಂಡು, ಹಾವೇರಿಯ ಕೆಎಸ್‌ಬಿಸಿಎಲ್‌ನಿಂದ ನೇರವಾಗಿ ಲಾರಿಯಲ್ಲಿ ಮದ್ಯ ಸಾಗಿಸಿದ್ದಾರೆ. ಹಿಂದಿನ ಜಿಪಂ ಅವಧಿಯಲ್ಲಿ ಬಿಜೆಪಿಯ ಆಪರೇಶನ್ ಕಮಲಕ್ಕೆ ಒಳಗಾಗಿದ್ದ ರಾಮಲಿಂಗಣ್ಣವರ್ ಅವರ ಪುತ್ರಿ ಜ್ಯೋತಿ, ಉದಾಸಿಯ ಕೈಚೇಲ ಪದ್ಮನಾಭ, ಮಾಜಿ ಜಿಪಂ ಅಧ್ಯಕ್ಷೆ ಶಾರದಾ ಹಾದಿಮನಿಯ ಗಂಡ ಬಸವರಾಜ ಲಕ್ಷಕ್ಕೆ ಲೆಕ್ಕವಿಲ್ಲದಂತೆ ಹಣ ಸುರುವಿ ಆರಿಸಿ ಬಂದ ಪ್ರಮುಖರು. ಆದರೆ ಸರ್ಕಾರ ಹೊರಡಿಸಿರುವ ಮೀಸಲಾತಿ ಪ್ರಕಾರ ಅಧ್ಯಕ್ಷ ಸ್ಥಾನ ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿದೆ. ಮಂತ್ರಿ ಉದಾಸಿ ಮತ್ತು ಶಾಸಕ ಜಿ.ಶಿವಣ್ಣನ ಪರಮ ಶಿಷ್ಯ ರಾಣೇಬೆನ್ನೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷತೆಗೆ ರಾಜಿನಾಮೆ ಕೊಟ್ಟು ಜಿಪಂಗೆ ಗೆದ್ದು ಬಂದಿರುವ ಮಂಜುನಾಥ ಓಲೇಕಾರ ಅಧ್ಯಕ್ಷನಾಗುವುದು ಬಹುತೇಕ ನಿಶ್ಚಿತ.


ಶಿವಳ್ಳಿ

ಗದಗ

ಅನಾರೋಗ್ಯ ಮಂತ್ರಿ ಬಿ.ಶ್ರೀರಾಮುಲುನಿಂದ ಜಿಲ್ಲೆಯ ಉಸ್ತುವಾರಿ ಕಿತ್ತುಕೊಂಡ ಭಾಗ್ಯಲಕ್ಷ್ಮಿ ಸೀರೆ ಮಂತ್ರಿ ಸಿ.ಸಿ.ಪಾಟೀಲ ಇಲ್ಲಿ ಅಧಿಕಾರ ವಹಿಸಿಕೊಂಡಾಗಲೆ ಬಿಜೆಪಿಗೆ ಉಳಿಗಾಲ ವಿಲ್ಲ ಎಂಬಂತಾಗಿತ್ತು, ಈಗ ಅದು ನಿಜ ವಾಗಿದೆ. ಉಸಿರು ಕಳೆದುಕೊಂಡಿದ್ದ ಕಾಂಗ್ರೆಸ್ ಜಿಪಂ ಫಲಿತಾಂಶದಿಂದ ಜೀವ ತಂದುಕೊಂಡಿದೆ.

ಜಿಲ್ಲಾ ಉಸ್ತುವಾರಿ ಮಂತ್ರಿ ಸಿ.ಸಿ. ಪಾಟೀಲ ಸರ್ಕಾರದ ಕೋಟಿ ಹಣದ ಜೊತೆಗೆ ಸೀರೆ ಅವ್ಯವಹಾರದಲ್ಲಿ ಕದ್ದ ಹಣವನ್ನು ಕ್ಷೇತ್ರಾದ್ಯಂತ ಬೇಜಾನ್ ಆಗಿ ಹಂಚಿದ್ದ. ಪ್ರಿಯಾ ಕಳಕಪ್ಪ ಬಂಡಿ ಸಾರಾಯಿ ಸಪ್ಲಾಯ್ ಉಸ್ತುವಾರಿಯನ್ನು ನಿಯತ್ತಾಗಿ ಮಾಡಿದ್ದಾನೆ. ಇನ್ನು ಶಿರ ಹಟ್ಟಿಯ ಕೋಲೇಬಸವ ಉರ್ಫ್ ಶಾಸಕ ರಾಮಣ್ಣ ಲಮಾಣಿ ತನ್ನ ಕ್ಷೇತ್ರದಲ್ಲಿ ಅಕ್ರಮ ಮರಳುದಂಧೆಯ ದೊರೆ ಸಣ್ಣ ಈರಪ್ಪ ಹಳ್ಳಪ್ಪನವರನ ಅಕ್ರಮ ಹಣವನ್ನು ಹಂಚಿದ್ದಲ್ಲದೆ ಅವನ ತಮ್ಮನ ಹೆಂಡತಿ ಸುನಿತಾಳನ್ನು ಆರಿಸಿ ತಂದು ಜಿಪಂಗೆ ಕಳುಹಿಸಿದ್ದಾನೆ.


ಎಂ.ಬಿ.ಪಾಟೀಲ್

ಆದರೆ ಜಿಲ್ಲಾ ಪಂಚಾಯ್ತಿ ಅಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆಗೆ ನಿಗದಿಯಾಗಿದ್ದು, ಮಂತ್ರಿ ಸಿ.ಸಿ.ಪಾಟೀಲನ ಸ್ವಜಾತಿ ಪ್ರೇಮದ ಫಲವಾಗಿ ಲಕ್ಕುಂಡಿಯ ಚಂಬವ್ವ ಪಾಟೀಲ ಅಧ್ಯಕ್ಷಳಾಗುವುದು ಬಹುತೇಕ ನಿಶ್ಚಿತ. ರಾಮುಲು ಕೈಯಾಡಿಸಿದರೆ ಹೊಸ ಮುಖಗಳು ಬಂದರೂ ಆಶ್ಚರ್ಯವಿಲ್ಲ.


ಪ್ರಕಾಶ್‌ಹುಕ್ಕೇರಿ

ನೆರೆ ಹಾವಳಿಯಿಂದ ಸೂರು ಕಳೆದುಕೊಂಡ ಬಡ ಜನರಿಗೆ ಸೂರು ಕಲ್ಪಿಸಲಾಗದ ಹೇತ್ಲಾಂಡಿ ಚೆಡ್ಡಿಗಳು ಜನರಿಗೆ ಸೀರೆ ಹಂಚಿ ಜಿಲ್ಲೆಯ ನರಗುಂದ ಶಿರಹಟ್ಟಿ ರೋಣದ ತಾ.ಪಂ.ನಲ್ಲಿ ಅಧಿಕಾರಕ್ಕೆ ಬಂದಿದ್ದಾರೆ. ಗದಗನಲ್ಲಿ ಕಾಂಗ್ರೆಸ್ ಗೆದ್ದರೆ ಮುಂಡರಗಿ ಅತಂತ್ರ ಫಲಿತಾಂಶ ಹೊಂದಿ ಆಪರೇಶನ್‌ಗೆ ಸಿದ್ಧವಾಗಿದೆ.


ಎಚ್.ಕೆ.ಪಾಟೀಲ್

ಬಿಜಾಪುರ

ಮುಖ್ಯಮಂತ್ರಿ ಯಡಿಯೂರಪ್ಪನ ಖಾಸಾ ಕೈಚೇಲ ಅಪ್ಪು ಪಟ್ಟಣಶೆಟ್ಟಿಯನ್ನು ಇಲ್ಲಿಯ ಜನ ಅಕ್ಷರಶಃ ಪೊಟ್ಟಣ ಕಟ್ಟಿ ಬಿಸಾಡಿದ್ದಾರೆ. ಇಡೀ ಉತ್ತರ ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಏಕೈಕ ಜಿಲ್ಲೆ ಇದಾಗಿದೆ. ಮೂವತ್ತೆಂಟು ಸ್ಥಾನ ಹೊಂದಿರುವ ಬಿಜಾಪುರ ಜಿಲ್ಲಾ ಪಂಚಾಯ್ತಿಯಲ್ಲಿ ಕಾಂಗ್ರೆಸ್ ಹತ್ತೊಂಬತ್ತು ಸ್ಥಾನಗಳಲ್ಲಿ ಗೆದ್ದು ಅಧಿಕಾರಕ್ಕೆ ಏರಿದೆ. ಬಿಜಾಪುರದಂತಹ ಸೌಹಾರ್ದ ಸೂಫಿ ನಾಡಲ್ಲಿ ಕೋಮುದಳ್ಳುರಿ ಎಬ್ಬಿಸಿ ಅದರ ಲಾಭಕ್ಕೆ ಹಪಹಪಿಸುತ್ತಿದ್ದ ಅಪ್ಪು ಪಟ್ಟಣಶೆಟ್ಟಿಗೆ ಇಲ್ಲಿಯ ಮತದಾರ ಈ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಿದ್ದಾನೆ. ಕಾಂಗ್ರೆಸ್ ಶಾಸಕ ಎಂ.ಬಿ.ಪಾಟೀಲ ಮತ್ತು ಮಾಜಿ ಶಾಸಕ ಶಿವಾನಂದ ಪಾಟೀಲರ ಒಗ್ಗಟ್ಟಿನ ಶ್ರಮದ ಜೊತೆಗೆ ರೈತಪರ ಹೋರಾಟಕ್ಕೆ ಇಲ್ಲಿ ಜಯ ಸಿಕ್ಕಂತಾಗಿದೆ.


ಬೊಮ್ಮಾಯಿ

ಬಿಜೆಪಿಯಿಂದ ಕಾಲ್ಕಿತ್ತಿರುವ ಮಾಜಿ ಕೇಂದ್ರ ಮಂತ್ರಿ ಬಸನಗೌಡ ಪಾಟೀಲ ಯತ್ನಾಳ ಜೆಡಿಎಸ್‌ಗೆ ಹೋದರೂ ಅದರಿಂದ ಆ ಪಕ್ಷಕ್ಕೆ ಏನೂ ಪ್ರಯೋಜನವಾಗಲಿಲ್ಲ, ಜಿಲ್ಲೆಯ 5 ತಾಲೂಕಿನಲ್ಲಿ ಇಟಗಿ ಬಸವನಬಾಗೇವಾಡಿ ಮತ್ತು ಸಿಂಧಗಿಯಲ್ಲಿ ಬಿಜೆಪಿ ಗೆದ್ದಿದೆ. ಮುದ್ದೇಬಿಹಾಳ ಮತ್ತು ಬಿಜಾಪುರ ತಾ.ಪಂ.ಗಳು ಅತಂತ್ರವಾಗಿವೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದರೂ ಅಧ್ಯಕ್ಷ ಸ್ಥಾನ ಕೈತಪ್ಪಲಿದೆ. ಚೆಡ್ಡಿಗಳ ಕುತಂತ್ರದಿಂದ ಮೀಸಲಾತಿಯನ್ನು ಹೊರಡಿಸಿದ್ದು, ಅಧ್ಯಕ್ಷ ಸ್ಥಾನ ಎಸ್.ಸಿ. ಮಹಿಳೆಗೆ ಮೀಸಲಾಗಿದೆ. ಆದರೆ ಈ ಪಂಗಡದಿಂದ ಚುನಾಯಿತ ರಾದವರು ಕಾಂಗ್ರೆಸ್‌ನಲ್ಲಿ ಯಾರೂ ಇಲ್ಲ, ಅಧಿಕಾರವಿದ್ದರೂ ಅಧ್ಯಕ್ಷ ಸ್ಥಾನವನ್ನು ಚೆಡ್ಡಿಗಳಿಗೆ ಬಿಟ್ಟುಕೊಡುವಂತಾಗಿದೆ. ಸಂಸದ ರಮೇಶ್ ಜಿಗಜಿಣಗಿ ಸಹೋದರಿ ಕಮಲಾಬಾಯಿ ಮಾಯವಂಶಿ ಸಲೀಸಾಗಿ ಗದ್ದುಗೆ ಏರಲು ತಯಾರಾಗಿದ್ದಾಳೆ.

ಕೊಪ್ಪಳ

ಇಲ್ಲಿ ಒಂದು ಪಕ್ಷದಲ್ಲಿದ್ದುಕೊಂಡೆ ಬೇರೆ ಪಕ್ಷಕ್ಕೆ ಬೆಂಬಲಿಸುವ ಲೀಡರ್‌ಗಳು ಹೆಚ್ಚಾಗಿದ್ದಾರೆ. ಕೊಪ್ಪಳದ ಶಾಸಕ ಸಂಗಣ್ಣ ಕರಡಿ ಕೂಡಾ ಅದರಿಂದ ಹೊರತಿಲ್ಲ ಎಂಬುದನ್ನು ಸಾಬೀತುಪಡಿಸಿದ್ದಾನೆ.

ಜೆಡಿಎಸ್‌ನಲ್ಲಿದ್ದುಕೊಂಡು, ಬಿಜೆಪಿ ಗಳೊಂದಿಗೆ ಸೇರಿ ಚುನಾವಣೆ ನಡೆಸುವ ಚಾಳಿಗೆ ಈ ಬಾರಿಯ ಅತಂತ್ರ ಫಲಿತಾಂಶ ಸಾಕ್ಷಿಯಾಗಿದೆ.

ಇಪ್ಪತ್ತೇಳು ಸ್ಥಾನಗಳನ್ನು ಹೊಂದಿರುವ ಜಿಪಂಗೆ ಹನ್ನೆರಡು ಬಿಜೆಪಿ, ಹತ್ತು ಕಾಂಗ್ರೆಸ್, ನಾಲ್ಕು ಜೆಡಿಎಸ್ ಮತ್ತು ಒಂದು ಪಕ್ಷೇತರ ಅಭ್ಯರ್ಥಿಗಳು ಗೆದ್ದಿದ್ದಾರೆ. ಅಧಿಕಾರಕ್ಕೇರಲು ಅವಶ್ಯವಿರುವ 14 ಸದಸ್ಯ ಬಲ ಹೊಂದಲು ಎರಡು ಪ್ರಮುಖ ಪಕ್ಷಗಳಿಗೆ ಜೆಡಿಎಸ್‌ನವರೇ ನಿರ್ಣಾಯಕರು. ಈ ಜಿಪಂನಲ್ಲಿ 10 ತಿಂಗಳು ಬಿಜೆಪಿ ಆಪರೇಶನ್ ಕಮಲದ ಮೂಲಕ ಅಧಿಕಾರ ನಡೆಸಿದ್ದು ಬಿಟ್ಟರೆ, ಉಳಿದ 1[illegible] ವರ್ಷ ಕಾಂಗ್ರೆಸ್ಸಿನದೇ ದರ್ಬಾರು. ಈ ಬಾರಿ ಬಸವರಾಜ ರಾಯರೆಡ್ಡಿಯಂತಹ ಮೂಲೆಗುಂಪು ಮುಖಂಡರ ತಟಸ್ಥ ನೀತಿಯಿಂದ ಕಾಂಗ್ರೆಸ್ ಇಲ್ಲಿ ಅಧಿಕಾರ ಕಳೆದುಕೊಂಡಿದೆ. ಇವನ ಸ್ವಕ್ಷೇತ್ರ ಯಲಬುರ್ಗದಲ್ಲಿ ಕಮಲ ಅರಳಿದೆ. ಅ[illegible] ಹಾಸಿಗೆ ಹಿಡಿದಿರುವ ಶಾಸಕ ಈಶ[illegible] ಗುಳಗಣ್ಣವರ ಕೂತಲಿಂದಲ್ಲೇ ಬಿಜೆಪಿಯನ್ನು ಗೆಲ್ಲಿಸಿದ್ದಾನೆ.

ಕನಕಗಿರಿ ಕ್ಷೇತ್ರದ ನಾಲ್ಕು ಸ್ಥಾನಗಳು ಬಿಜೆಪಿ ಪಾಲಾಗಿವೆ. ಕುಷ್ಟಗಿ ತಾಲೂಕಿನಲ್ಲಿ ಕಾಂಗ್ರೆಸ್ ಶಾಸಕ ಅಮರೇಗೌಡ ಭಯ್ಯಾ ಪುರನ ಪವಾಡಗಳು ಟುಸ್ ಆಗಿವೆ. ಆದರೆ ಗಂಗಾವತಿಯಲ್ಲಿ ಚೆಡ್ಡಿ ಶಾಸಕ ಪರಣ್ಣ ಮುನವಳ್ಳಿಯ ಮಾನ ಹರಾಜಾಗಿದೆ. ಅಲ್ಲಿ ಕೇವಲ ಒಂದು ಸ್ಥಾನದಲ್ಲಿ ಬಿಜೆಪಿ ಗೆದ್ದಿದೆ. ಇನ್ನೊಂದು ವಿಚಿತ್ರವೆಂದರೆ ಎರಡನೇ ಬಾರಿ ಸಂಸದನಾಗಿರುವ ಶಿವರಾಮೇಗೌಡನ ಸಂಬಂಧಿ ಸಹೋದರಿ ಸರ್ವಮಂಗಳ ಹಿರೇಸಿಂದಗಿ ಕ್ಷೇತ್ರದಲ್ಲಿ ಹೀನಾಯವಾಗಿ ಸೋತಿದ್ದಾಳೆ. ಕೋಟಿ ಬೇಕಾದರೂ ಸುರೀತೀನಿ ಅಂತಿದ್ದ ಶಿವರಾಮೇಗೌಡ ಆಕೆಯ ಫಲಿತಾಂಶ ನೋಡಿ ಶಿವಶಿವ ಎಂದಿದ್ದಾನೆ. ಇಲ್ಲಿ ಕರಡಿಯ ಕರಾಮತ್ತಿನಿಂದ ಅಧ್ಯಕ್ಷ ಸ್ಥಾನದ ಅಧಿಸೂಚನೆಯನ್ನ ಬಿಜೆಪಿಗಷ್ಟೆ ಲಾಭವಾಗುವಂತೆ ಪರಿಶಿಷ್ಟ ಪಂಗಡ ಮಹಿಳೆಗೆ ಮೀಸಲಾತಿ ತರಲಾಗಿದೆ. ಯಾರು ಬೆಂಬಲ ಕೊಡಲಿ ಬಿಡಲಿ ಚೆಡ್ಡಿಗಳಂತೂ ಅವಿರೋಧವಾಗಿ ಅಧ್ಯಕ್ಷ ಗಾದಿ ಗಿಟ್ಟಿಸಿಕೊಳ್ಳುವಂತೆ ಮಾಡಿದ್ದಾರೆ.

ಬಿಜೆಪಿಯತ್ತ ಮುಖ ಮಾಡಿರುವ ಕರಡಿ ಸಂಗಣ್ಣ ಸ್ವಲ್ಪೇ ದಿನದಲ್ಲಿ ಚೆಡ್ಡಿ ತೊಡಲು ಸಿದ್ಧನಾಗಿದ್ದಾನೆ. ಕೊಪ್ಪಳ ಜಿಲ್ಲಾ ಪಂಚಾಯ್ತಿಗೆ ಹಿರೇಮನ್ನಾಪುರ ಕ್ಷೇತ್ರದ ಅನ್ನಪೂರ್ಣ ವಾಲ್ಮೀಕಿ ಅಧ್ಯಕ್ಷಳಾಗುವುದು ಬಹುತೇಕ ನಿಶ್ಚಿತ ಎನ್ನಬಹುದು.

• ಹುರಳಿಕುಪ್ಪಿ ವಿನಯ

ಮೂಡಿಗೆರೆ: ನೌಕರರ ಸಂಘಕ್ಕೆ ಗಂಗಾಧರನೇ ಕಂಟಕ

ಮೂಡಿಗೆರೆ ತಾಲ್ಲೂಕು ನೌಕರರ ಸಂಘದಲ್ಲಿ ಮುಸುಕಿನ ...ತಾರಕಕ್ಕೇರಿದೆ. ಇಲ್ಲಿ ನಡೆಯುತ್ತಿರುವ ರಾಜಕೀಯ ...ೀರದಂತಿದೆ. ಮಾಜಿ ಅಧ್ಯಕ್ಷ ಗಂಗಾಧರನೆಂಬ ...ಸೂತ ಹಾಲಿ ಅಧ್ಯಕ್ಷ ಚಂದ್ರೇಗೌಡನನ್ನು ಕೆಳಕ್ಕಿಳಿಸಲು ...ತ್ತು ಶುರುವಿಟ್ಟಿದ್ದಾನೆ.


ಗಂಗಾಧರ್

...010ರ ಅಕ್ಟೋಬರ್ 31ಕ್ಕೆ ...ೇಗೌಡ ನಿವೃತ್ತಿಯಾಗಲಿದ್ದು ...ವರೆಗೆ ಅಧ್ಯಕ್ಷರಾಗಿರಲು ...ಲ್ಲಿ ನಿರ್ಣಯಿಸಲಾಗಿತ್ತು. ಆದರೆ ... ನೌಕರರ ಸೇವೆಯನ್ನು ...ಟರಿಂದ ಅರವತ್ತಕ್ಕೆ ...ದರಿಂದ ಚಂದ್ರೇಗೌಡರ ನಿವೃತ್ತಿ ...ಬರ್‌ಗೆ ಕೊನೆಗೊಳ್ಳದೆ ಎರಡು ... ಮುಂದುವರಿದಿದೆ. ಹೀಗಾಗಿ ... ಗೌಡ ರಾಜಿನಾಮೆ ಸಲ್ಲಿಸಲು ...ಗಿ ಒಪ್ಪುತ್ತಿಲ್ಲ. ಆದರೆ ...ಧರ ಸುತರಾಂ ಬಿಡುತ್ತಿಲ್ಲ. ಈ ...ಧರ ಚಂದ್ರೇಗೌಡರಿಗೂ ... ಎರಡು ಅವಧಿಯಲ್ಲಿ ಐದು ...ಗಳ ಕಾಲ ನೌಕರರ ಸಂಘವನ್ನು ತನ್ನ ...ಮುಷ್ಟಿಯೊಳಗೆ ಬಂಧಿಸಿಟ್ಟಿದ್ದ. ಈತನ ಕಬಂಧ ... ಅದ್ಯಾವ ಪರಿ ಬಲಿಷ್ಠವಿತ್ತೆಂದರೆ ಸಂಘವನ್ನು ...ಗಿಸುವಷ್ಟು ಭ್ರಷ್ಟಾಚಾರ ನಡೆದರೂ ಯಾವ ...ವ ಜೀವಿಯೂ ಅಲ್ಲಿ ತುಟಿಕ್‌ಪಿಟಿಕ್ ...ಎಂತಿರಲಿಲ್ಲ. ಹೀಗಾಗಿ ಗಂಗಾಧರ ನೌಕರರ ...ದಲ್ಲಿ ಮುಗುಮ್ಮಾಗಿ ಮೇಯ್ದದ್ದು ಸುಳ್ಳಲ್ಲ. ...ಗಾಧರ ಅಧಿಕಾರದಲ್ಲಿದ್ದಾಗ ನೌಕರರ ಸಂಘದಲ್ಲಿ ...ುದು ಸರಿಯಾಗಿತ್ತು ಎಂಬುದು ದುರ್ಬೀನಿಗೂ ...ುತ್ತಿಲ್ಲ. ಐದು ಬಾರಿಯ ಸಭೆಯಲ್ಲಿ ಹಾಜರಿಯಿದ್ದರೂ ... ಒಂದು ಸಭಾ ನಡಾವಳಿ ಬರೆದಿಲ್ಲ. ರೆಜಿಲೇಷನ್‌ನಲ್ಲಿ ಅನಾಮತ್ತು ಮೂವತ್ತು ಪುಟಗಳು ಖಾಲಿ ಉಳಿದಿವೆ. ಸಂಘದ ಚಟುವಟಿಕೆಗಳ ಲೆಕ್ಕಪತ್ರಗಳನ್ನು ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಂಡಿಸಿಲ್ಲ. ಇದನ್ನು ಪ್ರಶ್ನಿಸಿದ್ದ ಅಶೋಕ್ ಎಂಬವವರನ್ನು ರಾಜಕೀಯ ನಡೆಸಿ ಅಮಾನತ್ತುಪಡಿಸುವಲ್ಲಿ ಗಂಗಾಧರ ಯಶಸ್ವಿಯಾಗಿದ್ದ. ಹಿಂದೆ ಜವರಯ್ಯ ಎಂಬ ರಾಜ್ಯ ಪ್ರಶಸ್ತಿ ವಿಜೇತ ಶಿಕ್ಷಕರು ಅಧ್ಯಕ್ಷರಾಗಿದ್ದ ವೇಳೆ ಒಳಸಂಚು ನಡೆಸಿ ಅವರನ್ನು ಕೆಳಕ್ಕಿಳಿಸಲೂ ಈತನೇ ಮಸಲತ್ತು ನಡೆಸಿದ್ದ.

2007ರ ನ.30ರ ನಡಾವಳಿಯಂತೆ ಅದೇ ವರ್ಷದ ಜ.1 ರಿಂದ ನ.30ರವರೆಗೆ ಒಟ್ಟು ಜಮಾ 15683, ಖರ್ಚು 224130, ಹೆಚ್ಚುವರಿ ಖರ್ಚು 67267 ಎಂದು ದಾಖಲಿಸಲಾಗಿದೆ. ಇದರ ಒಟ್ಟು ವ್ಯವಹಾರದಲ್ಲಿ ಬರೋಬ್ಬರಿ 38405 ರೂ.ಗಳ ಲೆಕ್ಕವನ್ನು ಜಮಾ ಖಾತೆಯಲ್ಲಿ ತೋರಿಸದಿರುವುದು ಹಣಕಾಸಿನ ದುರುಪಯೋಗಕ್ಕೆ ಪುಷ್ಟಿ ಒದಗಿಸುತ್ತದೆ. ಇವತ್ತಿಗೂ ಕಾಯಂ ಪಾಸ್ ಬುಕ್ ಮತ್ತು ಕ್ಯಾಶ್‌ಬುಕ್‌ಗಳ ಪತ್ತೆಯಾಗದಿರುವುದು ಅನುಮಾನಕ್ಕೆ ಕಾರಣವಾಗಿದೆ. ಅಲ್ಲದೆ ಸಂಘದ ಬೈಲಾವನ್ನು ಸಂಪೂರ್ಣ ನಿರ್ಲಕ್ಷಿಸಲಾಗಿದೆ ಎಂಬುದು ಗಮನಾರ್ಹ. ಇಂಥ ಧೂರ್ತ ವ್ಯಕ್ತಿತ್ವವುಳ್ಳವನಿಗೆ ಇದೀಗ ಮತ್ತೆ ಅಧ್ಯಕ್ಷ ಗಾದಿ ಬೇಕಂತೆ. ಅದಕ್ಕಾಗಿ ರಂಪಾಟ ನಡೆಸುತ್ತಿದ್ದಾನೆ. ರಾಜಕೀಯ ವ್ಯಕ್ತಿಗಳನ್ನು ಹಿಡಿದುಕೊಂಡು ಕಾದಾಟಕ್ಕೆ ಕಣ ರೆಡಿ ಮಾಡಿಕೊಂಡಿದ್ದಾನೆ. ಚಂದ್ರೇಗೌಡರನ್ನು ಕೆಳಗಿಳಿಸಲು ನಾಲ್ಕು ಎಕರೆ ಭೂಮಿ ಕೊಡಿಸುವ ಆಮಿಷವೊಡ್ಡಿದ್ದಾನೆ ಎಂದರೆ ಗಂಗಾಧರ ಯಾವ ಪರಿ ರಾಜಕೀಯ ನಡೆಸುತ್ತಿರಬಹುದೆಂದು ಊಹಿಸಿ.

ಈತ ಹಿಂದೆ ಕಡೂರು ತಾಲ್ಲೂಕಿನ ಯಗಟಿಯಲ್ಲಿ ಗ್ರಾಮ ಲೆಕ್ಕಿಗನಾಗಿದ್ದಾಗ ಹಲವು ಯಡವಟ್ಟು ಮಾಡಿದ್ದ. ಅಲ್ಲಿ ಮರಿ ಹೆಗ್ಗಣದಂತೆ ಕಂದಾಯದ ಹಣವನ್ನು ನುಂಗಿ ನೀರು ಕುಡಿದ ಕುರುಹುಗಳಿವೆ. ಫಾರಂ ನಂ. 53ರಲ್ಲಿ ಬಡಬಗ್ಗರಿಗೆ ಭೂಮಿಯ ಭರವಸೆ ನೀಡಿ ಲಕ್ಷಾಂತರ ಪೀಕಿ ವಂಚಿಸಿದ್ದ. ಇದೇ ಕಾರಣದಿಂದ ಗಂಗಾಧರ ಅಲ್ಲಿ ಅಮಾನತ್ತು ಶಿಕ್ಷೆಗೊಳಗಾಗಿ ಬಂದವನು ಸೇರಿಕೊಂಡಿದ್ದು ಮೂಡಿಗೆರೆ ಬಳಿಯ ಮಾಕೋನಹಳ್ಳಿಗೆ.


ಚಂದ್ರೇಗೌಡ

ಇಲ್ಲೂ ಹಳೇ ಚಾಳಿ ಶುರುವಿಟ್ಟು ವೀರೇಶ್ ಎಂಬುವರಿಂದ ಎರಡು ಲಕ್ಷ ರೂ. ಪಡೆದು ಜಮೀನು ಮಾಡಿಕೊಡುವುದಾಗಿ ವಂಚಿಸಿದ್ದ. ಆದರೆ ವೀರೇಶ್ ಲೋಕಾಯುಕ್ತರಿಗೆ ದೂರು ನೀಡಿದ್ದೇ ಆತನ ಕಾಲಿಗೆ ಅಡ್ಡಡ್ಡ ಬಿದ್ದು ಬಚಾವಾಗಿದ್ದ. ಅಲ್ಲದೆ ಫಾರಂ ನ.53ರಲ್ಲಿ ರಾಜಕೀಯ ಪ್ರಭಾವಿಗಳಿಗೆ ಹಾಗೂ ಆಸ್ತಿ ಹೊಂದಿರುವವರಿಗೆ ಜಮೀನು ಮಾಡಿಕೊಟ್ಟಿರುವ ಭೂಪನೀತ. 2003-04ರಲ್ಲಿ ಸ.ನಂ.416ರಲ್ಲಿ ಪ್ರಭಾವಿಯೋರ್ವರಿಗೆ 4.38 ಗುಂಟೆ ಜಮೀನು ಬರೆಸಲು ಯಶಸ್ವಿಯಾಗಿದ್ದ. ಈ ಬಾರಿ ಭೂಮಿ ವಿಚಾರದಲ್ಲಿ ಸಂಪೂರ್ಣ ಹಗರಣ ಮಾಡಿಟ್ಟಿದ್ದಾನೆ. ಇದೆಲ್ಲವನ್ನು ಕುರಿತು ಸೂಕ್ತ ತನಿಖೆ ನಡೆದರೆ ಮತ್ತೆ ಗಂಗಾಧರ ಮನೆ ಸೇರುವುದರಲ್ಲಿ ಸಂಶಯವಿಲ್ಲ.

ಹಾಗೆ ನೋಡಿದರೆ ಈತ ಕಂದಾಯ ಇಲಾಖೆಯಲ್ಲಿ ಅಧಿಪತಿಯಂತೆ ಕಾಣಿಸುತ್ತಾನೆ. ಇದರೊಳಗೆ ಯಾವ ಮೂಲೆಯಲ್ಲಾದರೂ ಸರಿ ಯಾವ ಕೆಲಸವಾಗಬೇಕಾದರೂ ಗಂಗಾಧರನಿಗೆ ಬೆನ್ನು ಬಿದ್ದರೆ ಸಾಕು. ಎಲ್ಲವೂ ಅಚಾನಕ್ಕಾಗಿ ನಡೆದುಬಿಡುತ್ತದೆ. ಮೋಟಮ್ಮ ಮಂತ್ರಿಯಾಗಿದ್ದ ಕಾಲದಲ್ಲಿ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ದಾರದಹಳ್ಳಿ ಕ್ಷೇತ್ರದ ಮತದಾರರ ಪಟ್ಟಿಯೊಂದನ್ನು ಬದಲು ಮಾಡಿದ್ದ ಬಣಕಲ್ ವ್ಯಾಪ್ತಿಯ ರಾಜಸ್ವ ನಿರೀಕ್ಷಕನಾಗಿರುವ ಗಂಗಾಧರ ಪಿಜಕ್ಕೂ ಶನಿಯಂತೆ ಎಲ್ಲರನ್ನು ಕಾಡುತ್ತಿದ್ದಾನೆ. ಮೂಡಿಗೆರೆ ಕಂದಾಯ ಇಲಾಖೆಯಲ್ಲಿ ಮೇಯುತ್ತಿರುವ ಅಧಿಕಾರಿವರ್ಗವನ್ನು ಮೀರಿಸುವ ಗಾತ್ರದಲ್ಲಿ ಬೆಳೆದಿದ್ದಾನೆ. ಯಾವ ಪಕ್ಷಗಳ ಆಡಳಿತ ಬಂದರೂ ಅವರೊಂದಿಗೆ ಸಮ್ಮಿಳಿತನಾಗಿ ಪೊಗದಸ್ತಾಗಿ ಬೆಳೆಯುತ್ತಿದ್ದಾನೆ. ಮರದ ಮೇಲೆ ಕುಳಿತರೆ ಮರದ ಬಣ್ಣ ಕಲ್ಲಿನ ಮೇಲೆ ಕುಳಿತರೆ ಕಲ್ಲಿನ ಬಣ್ಣಕ್ಕೆ ಅಚ್ಚುಕಟ್ಟಾಗಿ ಹೊಂದಿಕೊಳ್ಳುವ ಗೋಸುಂಬೆ ವ್ಯಕ್ತಿತ್ವ ಈತನಲ್ಲಿದೆ. ಸಂಘದ ಅಧಿಪತಿಯಾಗಿದ್ದ ವೇಳೆ ನೌಕರರ ಭವನದ ಮೇಲ್ಛಾವಣಿ ಸಂಬಂಧ ಸುಮಾರು 4.15 ಲಕ್ಷ ರೂ.ಗಳನ್ನು ಮುಳುಗಿಸಿರುವ ಕೀರ್ತಿಯೂ ಈತನಿಗಿದೆ.

ಎಂಜಿಎಂ ಆಸ್ಪತ್ರೆಯ ಗೋಪಾಲಕೃಷ್ಣ, ಖಜಾನೆಯ ಕೃಷ್ಣಯ್ಯ, ಹಳೆಹಳ್ಳಿ ಶಿಕ್ಷಕ ಪೂರ್ಣೇಶ, ದೈಹಿಕ ಶಿಕ್ಷಕ ಡಿ.ಎಚ್.ಸುರೇಶ್, ಆರೋಗ್ಯ ಇಲಾಖೆಯ ಕೆ.ಕೆ.ಸುರೇಶ್ ಎಂಬುವವರ ಗ್ಯಾಂಗ್ ಕಟ್ಟಿಕೊಂಡು ನೌಕರರ ಸಂಘದಲ್ಲಿ ಕಂಟಕನಾಗಿ ಬೆಳೆಯುತ್ತಿದ್ದಾನೆ. ಗೋಪಾಲಕೃಷ್ಣ ಆಸ್ಪತ್ರೆಯಲ್ಲಿ ಪೀಕಿದ್ದು ಸಾಲದ್ದರಿಂದ ನರ್ಸಿಂಗ್ ವಿದ್ಯಾರ್ಥಿಗಳಿಗೆ ಸೀಟು ಕೊಡಿಸುವ ಆಮಿಷವೊಡ್ಡಿ ಉಂಡೆ ನಾಮ ತಿಕ್ಕುತ್ತಿದ್ದಾನೆ. ಕಳೆದ ವರ್ಷ ತಾನು ಜಿಲ್ಲಾಸ್ಪತ್ರೆಗೆ ವರ್ಗಾವಣೆ ಮಾಡಿಸಿಕೊಳ್ಳಲು ಹೋಗಿ ಪುಟ್ಟಸ್ವಾಮಿ ಎಂಬವರ ಸಹಿ ನಕಲು ಮಾಡಿದ್ದ ಈತ ಕಳೆದ 22 ವರ್ಷಗಳಿಂದ ಇದೇ ಆಸ್ಪತ್ರೆಯಲ್ಲಿ ಮೊಳೆ ಹೊಡೆದುಕೊಂಡಂತೆ ಕುಳಿತಿದ್ದಾನೆ. ಖಜಾನೆ ಕೃಷ್ಣಯ್ಯ ಹೊರಗಿನವರನ್ನು ಬಿಡಿ, ತನ್ನಂತಿರುವ ನೌಕರರ ಸಂಬಳ ಸಮಯದಲ್ಲಿ ಗರಿಗರಿ ನೋಟು ದೋಚದಿರುವ ಮನುಷ್ಯನಲ್ಲ. ಇಂತಹ ಗ್ಯಾಂಗಿಗೆ ಸರಕಾರಿ ನೌಕರರ ಸಂಘದ ಕೀಲಿಕೈ ಸಿಕ್ಕಿದರೆ ದೇವರೇ ಕಾಪಾಡಬೇಕು.

• ಅಜೀಜ್ ಕಿರುಗುಂದ

ಗೆಲ್ಲುತ್ತಲೇ ಹಾರಾಟ ಶುರು!

...ಗ್ರಾಮೀಣ ಜನರ ಬದುಕಿಗೆ ...ರೂಗಬೇಕಾಗಿದ್ದ ಜಿಲ್ಲಾ ಪಂಚಾಯತಿ ಹಾಗೂ ...ಕು ಪಂಚಾಯತಿಗಳು ಈಗ ಎಷ್ಟು ಗಬ್ಬೆದ್ದು ...ಿವೆ ಎಂದು ವಿವರಿಸಬೇಕಾಗಿಲ್ಲ. ...ಸೌಧದ ಕೊಳಕುಗಳೆಲ್ಲ ಇದೀಗ ... ಪಂಚಾಯತಿ ಹಾಗೂ ...ಕು ಪಂಚಾಯತಿಗಳಿಗೂ ...ಕೊಂಡಿದೆ. ಇದಕ್ಕೆಲ್ಲ ಬಹುತೇಕ ... ಭ್ರಷ್ಟ ರಾಜಕಾರಣಿಗಳು. ... ಇದನ್ನೆಲ್ಲ ಸುಮ್ಮನೆ, ಕೈಕಟ್ಟಿ ...ಕೊಂಡು ನೋಡುತ್ತಿರುವ ...ಾರ ಪ್ರಭು ಎಂದು ಹೇಳದೆ ...ಲ್ಲ. ರಾಜ್ಯದಲ್ಲಿಯೇ ಅತ್ಯಂತ ...ಳಿದ ಜಿಲ್ಲೆಗಳಾದ ಗುಲಬರ್ಗಾ, ...ಗಿರಿಗಳಲ್ಲಂತೂ ಇದು ಇನ್ನೂ ... ಪ್ರಮಾಣದಲ್ಲಿ ತಾಂಡವನೃತ್ಯ ...ುತ್ತಿದೆ.


ಅನ್ನಪೂರ್ಣ

...ತ್ತೀಚೆಗೆ ನಡೆದ ಜಿಲ್ಲಾ ...ಯತಿ ಹಾಗೂ ತಾಲೂಕು ...ಯತಿ ಚುನಾವಣೆಗಳಲ್ಲಿ ...ರ ಪ್ರಭು ಹಾಗೂ ...ರಣಿಗಳು ನಡೆಸಿದ ...ಹಿಂಪಾಟು ಎಂಥವರಿಗೂ ... ಉಂಟುಮಾಡುತ್ತದೆ. ...ಕು ಪಂಚಾಯತಿ ...ವಣೆಯಲ್ಲಿ ಒಬ್ಬ ಅಭ್ಯರ್ಥಿ ...ಪಕ್ಷ 25 ರಿಂದ 30 ಲಕ್ಷ ...ಯಿ ಖರ್ಚು ಮಾಡಿ ಗೆದ್ದು ...ನೆಂದರೆ ಮುಂದೆ ಆತ ತಾನು ... ಮಾಡಿದ ಹಣವನ್ನು ಬಡ್ಡಿ ...ಕ ದೋಚುತ್ತಾನೆಂಬುದಂತೂ


ಶಿವಪ್ರಭು

...ನ್ನ ಗುಲಬರ್ಗಾ ಜಿಲ್ಲಾ ...ಯತಿಗೆ ಗೆದ್ದು ಬಂದಿರುವ ... ಚುನಾವಣೆಯಲ್ಲಿ ತಾವು ಖರ್ಚು ...ದ ಹಣವನ್ನು ಮರಳಿ ಪಡೆಯಲು ...ಕೊಂಡಿದ್ದಾರೆ. ಕೇವಲ ನಾಲ್ಕೆಂಟು ... ಹಿಂದೆ ಜೆಡಿಎಸ್ ಪಕ್ಷದಿಂದ ...ದಿರುವ ಸದಸ್ಯರು, ಗೆದ್ದು ಬರುತ್ತಲೆ ಮತ್ತೊಂದು ಪಕ್ಷಕ್ಕೆ ಹೋಗಿ ಸೇರುತ್ತಾರೆಂದರೆ ಅವರನ್ನು ಏನೆಂದು ಕರೆಯಬೇಕೋ ತಿಳಿಯುತ್ತಿಲ್ಲ. ಗುಲಬರ್ಗಾ ಜಿಲ್ಲಾ ಪಂಚಾಯತಿಗೆ ಆಳಂದದ ತಡಕಲ್ ಕ್ಷೇತ್ರದಿಂದ ಗೆದ್ದು ಬಂದಿದ್ದ ಹರ್ಷಾನಂದ ಗುತ್ತೇದಾರ, ನರೋಣಾ ಕ್ಷೇತ್ರದಿಂದ ಗೆದ್ದಿದ್ದ ಶ್ರೀಮತಿ ಮಂಗಳಾ ರವೀಂದ್ರ ಹಾಗೂ ಖಜೂರಿ ಕ್ಷೇತ್ರದಿಂದ ಆರಿಸಿ ಬಂದಿದ್ದ ಜಯಶ್ರೀ ಅಶೋಕ ಇದೀಗ ಬಿಜೆಪಿಯ ತೆಕ್ಕೆಗೆ ಹೋಗುವ ಮೂಲಕ ಮತದಾರರನ್ನು ಮೂರ್ಖರನ್ನಾಗಿ ಮಾಡಿ, ತಮ್ಮ ಭ್ರಷ್ಟ ಆಟ ಚಾಲೂ ಮಾಡಿಕೊಂಡಿದ್ದಾರೆ.


ಶರಣಪ್ಪ

ಒಟ್ಟು ನಲವತ್ತಮೂರು ಜಿಲ್ಲಾ ಪಂಚಾಯತಿಗಳನ್ನು ಒಳಗೊಂಡಿರುವ ಗುಲಬರ್ಗಾ ಜಿಲ್ಲೆಯಲ್ಲಿ ಕಳೆದ ಬಾರಿ 23 ಸದಸ್ಯರನ್ನು ಹೊಂದಿದ್ದ ಬಿಜೆಪಿ ಕೊನೆಯವರೆಗೂ ತಾನೇ ಅಧಿಕಾರದ ಗದ್ದುಗೆಯಲ್ಲಿ ಮುಂದುವರೆದಿತ್ತು. ಆದರೆ ಈ ಸಲ ಮಾತ್ರ 20 ಸದಸ್ಯ ಬಲವನ್ನು ಹೊಂದಿದ ಬಿಜೆಪಿ ಅತಂತ್ರ ಸ್ಥಿತಿಯನ್ನು ತಲುಪಿದೆ ಎನ್ನುವಾಗಲೇ ಜೆಡಿಎಸ್‌ನಿಂದ ಗೆದ್ದು ಬಂದಿದ್ದ ಮೂರು ಜನ ಸದಸ್ಯರನ್ನು ತನ್ನ ಬುಟ್ಟಿಗೆ ಹಾಕಿಕೊಳ್ಳುವ ಮೂಲಕ ಅದು ಮತ್ತೆ ತನ್ನ ಹಿಂದಿನ ಬಲವನ್ನು ತಂದುಕೊಂಡು ಮುಕ್ಕುವುದಕ್ಕೆ ರೆಡಿಯಾಗಿ ನಿಂತುಕೊಂಡಿದೆ.

ಆದರೆ ಒಬ್ಬ ಪಕ್ಷೇತರ, ಮೂರು ಜನ ಜೆಡಿಎಸ್ ಹಾಗೂ ತನ್ನ ಪಕ್ಷದ 19 ಜನ ಸದಸ್ಯರೊಂದಿಗೆ ಅಧಿಕಾರದ ಗದ್ದುಗೆ ಏರಬೇಕೆಂದು ಹೊಂಚುಹಾಕುತ್ತಿದ್ದ ಕಾಂಗ್ರೆಸ್ ಭ್ರಮನಿರಸನಗೊಂಡು ತೆಪ್ಪಗೆ ಕುಳಿತುಕೊಂಡಿದೆ. ಇದಕ್ಕೆಲ್ಲ ಬಹುಮುಖ್ಯ ಕಾರಣ ಹಣ ಹಾಗೂ ಅಧಿಕಾರದ ಹಂಬಲ ಸ್ಪಷ್ಟವಾಗಿ ಯಾರಿಗಾದರೂ ಗೊತ್ತಾಗುತ್ತದೆ.


ಗುಲಬರ್ಗಾ ಜಿಲ್ಲಾ ಪಂಚಾಯತಿಯ ಅಧ್ಯಕ್ಷ ಸ್ಥಾನ ಹಿಂದುಳಿದ ವರ್ಗದ ಬಿ (ಬಿಸಿಬಿ) ಗುಂಪಿಗೆ ಹಾಗೂ ಉಪಾಧ್ಯಕ್ಷ ಸ್ಥಾನ ಎ ಗುಂಪಿಗೆ (ಬಿಸಿಎ) ಮೀಸಲಾಗಿದ್ದು ಪಕ್ಷದ ವರಿಷ್ಠರ ಮೇಲೆ ಪ್ರಭಾವ ಬೀರಲು ಇನ್ನಿಲ್ಲದ ಕಸರತ್ತು ಈಗಾಗಲೇ ಆರಂಭವಾಗಿದೆ. ಜಿಲ್ಲೆಯ ಚಿಂಚೋಳಿ ತಾಲ್ಲೂಕು ಕೊಂಚಾವರಂ ಕ್ಷೇತ್ರದಿಂದ ಆಯ್ಕೆಯಾದ ಜೀವನರೆಡ್ಡಿ ಪಾಟೀಲ, ಸೇಡಂ ತಾಲ್ಲೂಕು ಮಳಖೇಡ ಕ್ಷೇತ್ರದ ಶಿವಪ್ರಭು ಪಾಟೀಲ ಹಾಗೂ ಅಫಜಲ್ಪುರ ತಾಲ್ಲೂಕು ಗೊಬ್ಬೂರು (ಬಿ) ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಅನ್ನಪೂರ್ಣ ಪಾಟೀಲ ಬಿಜೆಪಿಯ ಅಧ್ಯಕ್ಷ ಸ್ಥಾನಕ್ಕೆ ತೀವ್ರ ಆಕಾಂಕ್ಷಿಗಳಾಗಿದ್ದಾರೆ. ಇವರಲ್ಲಿ ಯಾರು ಹೆಚ್ಚು ಹಣವನ್ನು ಕೊಟ್ಟು ಹೈಕಮಾಂಡನ್ನು ಬುಕ್ ಮಾಡಿಕೊಳ್ಳುತ್ತಾರೋ ಅವರು ಅಧಿಕಾರದ ಗದ್ದುಗೆ ಏರುವುದು ಖಚಿತವಾಗಿದೆ.


ಜಗಜೀವನರೆಡ್ಡಿ

ಆದರೆ ಹಿಂದೆಯೆ ಆಳಂದದ ಜೆಡಿಎಸ್ ಶಾಸಕ ಸುಭಾಷ ಗುತ್ತೇದಾರರ ಪುತ್ರ ಹರ್ಷಾನಂದ ಗುತ್ತೇದಾರನನ್ನು ಜಿಲ್ಲಾ ಪಂಚಾಯತಿಯ ಉಪಾಧ್ಯಕ್ಷನಾಗಿಸಲಾಗುತ್ತದೆ ಎಂದು ಬಿಜೆಪಿಯ ನಾಯಕರು ಭರವಸೆ ನೀಡಿದ್ದರಿಂದಲೇ ಆತ ಜೆಡಿಎಸ್ ತೊರೆದು ಬಿಜೆಪಿಯ ಚೆಡ್ಡಿ ತೊಟ್ಟುಕೊಂಡದ್ದು. ಹೀಗಾಗಿ ಉಪಾಧ್ಯಕ್ಷನಾಗಿ ಹರ್ಷಾನಂದ ಗುತ್ತೇದಾರ ಆಯ್ಕೆಯಾಗುವುದು ಖಚಿತವೆಂದೇ ಹೇಳಬಹುದು. ಒಟ್ಟಿನಲ್ಲಿ ಗುಲಬರ್ಗಾ ಜಿಲ್ಲಾ ಪಂಚಾಯತಿಯ ಅಖಾಡದಲ್ಲಿ ಇನ್ನು ಐದು ವರ್ಷ ಮುಕ್ಕುವುದಕ್ಕೆ ಪರ್ಮಿಶನ್ ಪಡೆದುಕೊಂಡಿರುವ ಕುಳಗಳು ಕೆಲವೇ ವರ್ಷಗಳಲ್ಲಿ ಭ್ರಷ್ಟಾಚಾರದ ಬಹುದೊಡ್ಡ ಮೂಟೆಗಳಾಗಿ ಕೂಡುವುದಂತೂ ಖರೆ.

• ವಿಶ್ವಾರಾಧ್ಯ ಸತ್ಯಂಪೇಟೆ

▶▶ ಕಾರ್ಟೂನ್ ಕಾರ್ನರ್



ಚಿಕ್ಕಮಗಳೂರಿನ ಆಲ್ದೂರು ಸಮೀಪದ ಯಲಗುಡಿಗೆಯ ಮಂಜಯ್ಯ ಮೊದಲ ತಲೆಮಾರಿನ ದಲಿತ ಚಳವಳಿಗಾರರು. ಎಂಭತ್ತರ ದಶಕದ ಮೊದಲಲ್ಲಿ ದಲಿತ ಕಲಾಮಂಡಳಿಯ ಮೂಲಕ ಹಳ್ಳಿಹಳ್ಳಿಗೆ ಹೋರಾಟ, ಅಂಬೇಡ್ಕರ್ ಅವರನ್ನು ಪರಿಚಯಿಸಿದವರಲ್ಲಿ ಒಬ್ಬರು. ಮಲೆನಾಡ ಭೂಮಾಲಿಕರಲ್ಲಿ ನಡುಕ ಹುಟ್ಟಿಸಿದ ಚೆಂಡುಗೂಡು, ಬಸುಗೂಡು ಮುಂತಾದ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದವರು.

ಯಲಗುಡಿಗೆ ಮಂಜಯ್ಯ

ಹೀಗೊಂದು ನೆನಪು

ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಯ ಕಾಂಪೌಂಡ್ ಒಳಗೆ ಕುರ್ಚಿಗಳಲ್ಲಿ ಕುಳಿತು, ಒಳಗೆ ಮಲಗಿರುವ ತನ್ನವರು ಜೀವಂತವಾಗಿ ಬರುತ್ತಾರೋ ಇಲ್ಲವೋ ಎಂಬ ಆತಂಕ ಹೊತ್ತಿದ್ದ ಜನರ ಎದುರು ಯಲಗುಡಿಗೆ ಮಂಜಯ್ಯನವರು ಕಾಣಿಸಿಕೊಳ್ಳುತ್ತಿದ್ದಂತೆ ಕುಳಿತವರೆಲ್ಲ ಎದ್ದು ಕೈಲಿದ್ದ ಎಕ್ಸರೇ ಕಾಪಿ, ಸ್ಕ್ಯಾನಿಂಗ್ ರಿಪೋರ್ಟ್, ಔಷಧಿ ಚೀಟಿ ಹೀಗೆ ತರಾವರಿ ದಾಖಲೆಗಳನ್ನೆಲ್ಲ ತೋರಿಸಲು ಮುಂದಾಗುವುದನ್ನು ದಿನನಿತ್ಯ ಆಸ್ಪತ್ರೆ ಆವರಣದಲ್ಲಿ ನೋಡಬಹುದಿತ್ತು. ಮಂಜಣ್ಣ (ಅವರನ್ನು ಎಲ್ಲರೂ ಕರೆಯುತ್ತಿದ್ದ ರೀತಿ) ಎಲ್ಲರಿಗೂ ಯಾವ ಯಾವ ಡಾಕ್ಟರನ್ನು ನೋಡಬೇಕು, ಅವರು ಎಲ್ಲೆಲ್ಲಿ ಯಾವಾಗ ಸಿಗುತ್ತಾರೆಂದು ತಿಳಿಸಿ ಸಮಾಧಾನ, ಧೈರ್ಯವನ್ನು ತುಂಬುತ್ತಿದ್ದರು. ಒಳಗೆ ಡಾಕ್ಟರ್ ರೌಂಡ್ಸ್ ಮುಗಿಸುವ ಹೊತ್ತಿಗೆ ಇವರು ಹೊರಗಡೆ ದೂರದೂರಿನಿಂದ ಬಂದ ಅನೇಕ ಅಸಹಾಯಕರು, ಅಮಾಯಕರನ್ನೆಲ್ಲ ವಿಚಾರಿಸಿಕೊಳ್ಳುತ್ತಿದ್ದರು. ಬಹುತೇಕ ಜನರಿಗೆ ಮಂಜಣ್ಣನವರ ಪರಿಚಯವಾಗುತ್ತಿದ್ದುದ್ದೇ ಆಸ್ಪತ್ರೆಯ ಮೂಲಕ.

ಚಿಕ್ಕಮಗಳೂರಿನ ಆಲ್ದೂರು ಸಮೀಪದ ಯಲಗುಡಿಗೆಯ ಮಂಜಯ್ಯ ಮೊದಲ ತಲೆಮಾರಿನ ದಲಿತ ಚಳವಳಿಗಾರರು. ಎಂಭತ್ತರ ದಶಕದ ಮೊದಲಲ್ಲಿ ದಲಿತ ಕಲಾ ಮಂಡಳಿಯ ಮೂಲಕ ಹಳ್ಳಿಹಳ್ಳಿಗೆ ಹೋರಾಟ, ಅಂಬೇಡ್ಕರ್ ಅವರನ್ನು ಪರಿಚಯಿಸಿದವರಲ್ಲಿ ಒಬ್ಬರು. ಮಲೆನಾಡ ಭೂಮಾಲಿಕರಲ್ಲಿ ನಡುಕ ಹುಟ್ಟಿಸಿದ ಚೆಂಡುಗೂಡು, ಬಸುಗೂಡು ಮುಂತಾದ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದವರು. ಕಳೆದ ದಶಕದ ಕೊನೆಯ ಹೊತ್ತಿಗೆ ದಲಿತ ಚಳವಳಿ ದಿಕ್ಕುತಪ್ಪಿ ದಿಕ್ಕೆಟ್ಟ ನಂತರ ಸಂಘಟನೆಯಿಂದ ದೂರ ಉಳಿದು, ಪತ್ರಿಕಾರಂಗ ಪ್ರವೇಶಿಸಿದರು. ಪತ್ರಿಕೆಗಳಲ್ಲಿ ಶೋಷಣೆಯ ಎಳೆಗಳನ್ನು ಬಿಡಿಸಿಡಲು ಯತ್ನಿಸಿದರು. ಕವನ, ಅಂಕಣಕಾರರಾಗಿ, ವರದಿಗಾರರಾಗಿ ಗುರುತಿಸಿಕೊಂಡರು. 'ಮುಂಗಾರು' ಪತ್ರಿಕೆಯಲ್ಲಿ ಬರವಣಿಗೆಯನ್ನು ಆರಂಭಿಸಿ ನಂತರ ಜಿಲ್ಲಾ ಮಟ್ಟದ ಪತ್ರಿಕೆಗಳಲ್ಲಿ ಕೆಲಸ ಮಾಡಿದರು. ಪತ್ರಿಕೋದ್ಯಮ ಆಧುನಿಕತೆಗೆ ಹೊರಳಿಕೊಂಡಂತೆ ಅದನ್ನೂ ಭ್ರಷ್ಟತೆ ಆವರಿಸಿಕೊಂಡು ಬಳಸುವ ಭಾಷೆ ತಾಂತ್ರಿಕತೆ ಬದಲಾದವು. ಈ ಬದಲಾವಣೆಗೆ ಅವರಿಂದ ಹೊಂದಿಕೊಳ್ಳಲಾಗಲಿಲ್ಲ, ನಂತರ ಅವರು ಆಸ್ಪತ್ರೆಗೆ ಬರುವ ಅಸಹಾಯಕರ ಕಷ್ಟಗಳಿಗೆ ಸ್ಪಂದಿಸಲು ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡರು.

ಎಂತಹ ಕುಗ್ರಾಮವೇ ಆಗಲಿ, ಮದುವೆ, ಒಸಗೆ, ಹಬ್ಬ-ಹರಿದಿನಗಳಿಗೆ ನಮ್ಮನ್ನೆಲ್ಲ ಕರೆದುಕೊಂಡು ಹೋಗುತ್ತಿದ್ದರು. ನಾವೆಲ್ಲ ಹಿರಿಯರನ್ನು ಹಿಂಬಾಲಿಸಿ ಹೋಗುವ ಚಿಕ್ಕಮಕ್ಕಳಂತೆ ದಂಡು ಕಟ್ಟಿಕೊಂಡು ಹೋಗುತ್ತಿದ್ದೆವು. ಇಂಥ ಕಡೆಗೆಲ್ಲ ಹೊರಡುವಾಗ ಅವರ ಸಿದ್ಧತೆ ವಿಶೇಷವಾದದ್ದು. ನಾವೆಲ್ಲ ತೋಳು ಬೀಸಿಕೊಂಡು ಹೋಗಿ ಪಡಬಾರದ ಪಾಡು ಪಟ್ಟರೆ, ಅವರು ಮೊದಲೇ ತಮ್ಮ ಜೋಳಿಗೆಗೆ ಉಟ್ಟುಕೊಳ್ಳಲು ಬೇಕಾದ ಪಂಚೆ, ಬಟ್ಟೆ, ಶಾಲು, ಪೇಸ್ಟು, ಬ್ರಷ್, ಶೇವಿಂಗ್‌ಸೆಟ್ ಇಟ್ಟುಕೊಳ್ಳುತ್ತಿದ್ದರು. ಇತ್ತೀಚೆಗೆ ಅವರಲ್ಲಾದ ಒಂದು ಬದಲಾವಣೆ ಯಾವುದೆಂದರೆ, ಹೋಗುವ ಊರಿನಲ್ಲಿ ಅವರು ಕುಡಿಯುವ ಬ್ರಾಂಡ್ ಇದೆಯೋ ಇಲ್ಲವೋ ಎಂದು ಫೋನ್ ಮಾಡಿ ಖಚಿತಪಡಿಸಿಕೊಳ್ಳುತ್ತಿದ್ದರು. ಇಲ್ಲವೆಂದರೆ, ಇಲ್ಲಿಂದಲೇ ಖರೀದಿಸಿ ಜೋಳಿಗೆಗೆ ತುಂಬಿಕೊಳ್ಳುತ್ತಿದ್ದರು.


ಆ ಕೇರಿಗಳಿಗೆ ಹೋದನಂತರ ಅಲ್ಲಿಯ ಹಿರಿಯರನ್ನೆಲ್ಲ ಪರಿಚಯಿಸಿ ಹಿಂದೆ ನಡೆಸಿದ ಹೋರಾಟಗಳು, ಆಗಿನ ಮಲೆನಾಡ ಭೂಮಾಲೀಕರ ದರ್ಪ ದೌರ್ಜನ್ಯ ಅದನ್ನೆದುರಿಸುವಾಗ ಇವರು ಅನುಭವಿಸಿದ ತೊಂದರೆ, ಹಲವೊಮ್ಮೆ ಪಾರಾಗಿ ಜೀವ ಉಳಿಸಿಕೊಂಡ ತಂತ್ರಗಾರಿಕೆಗಳನ್ನು ವಿವರಿಸುತ್ತಿದ್ದರು. ಅವರ ಟಾರ್ಗೆಟ್ ಆದ 'ಸೈಂಟ' ಮುಗಿದನಂತರ ಅವರು ಒಂದು ಹನಿಯನ್ನೂ ಮುಟ್ಟುತ್ತಿರಲಿಲ್ಲ, ಆದರೆ ಆಗ ಗಂಭೀರರಾಗಿ ತಮ್ಮ ನೆನಪಿನ ಬುತ್ತಿಗಳನ್ನು ನಮ್ಮೆದುರು ಬಿಚ್ಚಿಡುತ್ತಿದ್ದರು. ಅದನ್ನೆಲ್ಲ ದಾಖಲಿಸಿಕೊಂಡು ಮುಂದಿನ ತಲೆಮಾರಿಗೆ ವರ್ಗಾಯಿಸಬೇಕಾದ ನಾವುಗಳು ಮಾತ್ರ ಅವರೇ ಒತ್ತಾಯಿಸಿ ಕೊಡಿಸುತ್ತಿದ್ದ ಹತ್ತಾರು ಬಗೆಯ ಬ್ರಾಂಡ್‌ಗಳನ್ನು ಸೇವಿಸಿ ನಮ್ಮ ಸರ್ವಾಂಗಗಳ ಲಿಂಕುಗಳನ್ನೇ ಕಳೆದುಕೊಂಡಿರುತ್ತಿದ್ದೆವು. ಬೆಳಗ್ಗೆದ್ದು ಕೇಳೋಣವೆಂದರೆ ಅವರು ಹೇಳುತ್ತಿರಲಿಲ್ಲ, ಅವರು ಗಂಭೀರರಾದಾಗ ನಾವು ಗಂಭೀರತೆ ಕಳೆದುಕೊಳ್ಳುತ್ತಿದ್ದ್ದು ಈ ಗ್ಯಾಪ್ ಅವರ ಕೊನೆಯ ದಿನಗಳವರೆಗೆ ಮುಂದುವರಿದುಕೊಂಡೇ ಬಂತು.

ಹೋರಾಟಗಳ ಬಗ್ಗೆ ಮಂಜಣ್ಣ ವಿಶ್ವಾಸ ಇಟ್ಟುಕೊಂಡಿದ್ದರೂ, ಹೋರಾಟಗಾರರ ಬಗ್ಗೆ ನಂಬಿಕೆ ಕಳೆದುಕೊಂಡಿದ್ದರು. ಹಾಗಾಗಿ ಯಾವ ಹೋರಾಟಗಳಲ್ಲೂ ನೇರವಾಗಿ ಭಾಗವಹಿಸುತ್ತಿರಲಿಲ್ಲ, ಹಳೇ ತಲೆಮಾರಿನ ದಲಿತ ನಾಯಕರೆನಿಸಿಕೊಂಡವರನ್ನು ಕಂಡರೆ ಸಿಟ್ಟಿಗೇಳುತ್ತಿದ್ದರು. ಆದರೆ ಯುವಕರ ಹೋರಾಟಗಳಿಗೆ ಸಲಹೆ ಸಹಕಾರ ನೀಡುತ್ತಿದ್ದರು. ಅಂಬೇಡ್ಕರರನ್ನು ಆಧ್ಯಾತ್ಮವಾದಿಯಾಗಿ ಚಿತ್ರಿಸಿ, ಅಂಬೇಡ್ಕರ್ ಹೆಸರನ್ನು ಬಳಸಿಕೊಂಡು ಓಟಿನ ರಾಜಕಾರಣ ಮಾಡುವವರನ್ನು ಕಂಡರೆ ಆಕ್ರೋಶಿತರಾಗುತ್ತಿದ್ದರು. ಎಡಪಂಥೀಯರೆಂದು ಗುರುತಿಸಿಕೊಂಡರೂ ಅವರು ಮಾರ್ಕ್ಸ್‌ವಾದದ ಬಗ್ಗೆ ಓದಿದ್ದು ಕಡಿಮೆಯೇ. ಇತರ ದಲಿತ ನಾಯಕರಂತೆ ಕಮ್ಯುನಿಸಂ ಬಗ್ಗೆ ಅವರಲ್ಲಿ ಸ್ಪಷ್ಟ ಅರಿವಿರಲಿಲ್ಲ, ಎಂಭತ್ತರ ದಶಕದ ಬಹುತೇಕರಂತೆ ಲೋಹಿಯಾ ಅವರನ್ನು ಓದಿಕೊಂಡಿದ್ದು ಅವರ ಮಾತುಗಳಲ್ಲಿ ತಿಳಿಯುತ್ತಿತ್ತು, ಆಗಿನ ಕಾಲದ ಅವರ ಗೆಳೆಯರಾದ ಸನತ್‌ಕುಮಾರ್ ಬೆಳಗಲಿ, ಕಲ್ಕುಳಿ ವಿಠಲ್ ಹೆಗ್ಡೆ ಸಿರಿಮನೆ ನಾಗರಾಜು ಮುಂತಾದವರ ಜೊತೆಗೂಡಿ ನಡೆಸಿದ ಹೋರಾಟಗಳನ್ನು ನೆನಪು ಮಾಡಿಕೊಳ್ಳುತ್ತಿದ್ದರು.

ಅವರು ಕಾಸು ಕೊಟ್ಟು ಕೊಳ್ಳುತ್ತಿದ್ದ ಪತ್ರಿಕೆಯೆಂದರೆ 'ಲಂಕೇಶ್' ಒಂದೇ ಆಗಿತ್ತು, ಅದರ ರೆಗ್ಯುಲರ್ ಓದುಗರು ಆಗಿದ್ದರು. ಇತ್ತೀಚೆಗೆ ಅವರ ಬರವಣಿಗೆ ಬಹಳ ಕಡಿಮೆಯಾಗಿತ್ತು, ಆದರೂ ನಾವೆಲ್ಲ ಏನನ್ನಾದರೂ ಬರೆಯಿರಿ ಎಂದು ಒತ್ತಾಯಿಸುತ್ತಿದ್ದೆವು. ಏನೇನೋ ನೆಪ ಹೇಳಿ ತಪ್ಪಿಸಿಕೊಳ್ಳುತ್ತಿದ್ದರು.

ಇತ್ತೀಚೆಗೆ ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಗೆ ಸಂಬಂಧಿಕರೊಬ್ಬರನ್ನು ಕರೆದುಕೊಂಡು ಹೋದಾಗ ಇಡೀ ದಿನ ನಾವು ಜತೆಯಲ್ಲಿದ್ದೆವು. 'ಮುಂಗಾರು' ದಿನಗಳ ನೆನಪುಗಳನ್ನು ಒಂದೊಂದಾಗಿ ಬಿಚ್ಚಿಡುತ್ತ ಹೋದರು. ಮಂಗಳೂರಿನಲ್ಲಿ ಓಡಾಡಿದ ರಸ್ತೆಗಳು, ಕುಳಿತುಕೊಳ್ಳುತ್ತಿದ್ದ ಜಾಗ, ಉಳಿದುಕೊಳ್ಳುತ್ತಿದ್ದ ತಾಣಗಳು, ಹಳೇ ಕಟ್ಟಡಗಳನ್ನೆಲ್ಲ ತೋರಿಸಿ, ಒಂದೊಂದು ಘಟನೆಗಳನ್ನು ವಿವರಿಸಿದರು. ಕೆ.ಎಂ.ಸಿ. ಕಾಲೇಜ್ ಎದುರಿನ ಪಾರ್ಕ್‌ವೊಂದರಲ್ಲಿ ಕುಳಿತು ಬದಲಾದ ಮಂಗಳೂರಿನ ಆರ್ಥಿಕ, ಸಾಮಾಜಿಕ, ರಾಜಕೀಯ ಸ್ಥಿತಿಗತಿಗಳ ಬಗ್ಗೆ ಮಾತನಾಡಿದೆವು. ಮಂಗಳೂರಿನಲ್ಲಿ ಏಳುತ್ತಿದ್ದ ಕೋಮುಗಲಭೆಗಳು, ಮೂಲಭೂತವಾದಿತನ, ಸಾಮ್ರಾಜ್ಯಶಾಹಿಯ ದಾಳಿ ಇವೆಲ್ಲವೂ ಅಲ್ಲಿನ ಸಾಮಾನ್ಯ ಜನರಲ್ಲಿ ಉಂಟುಮಾಡಿದ್ದ ತಲ್ಲಣಗಳ ಬಗ್ಗೆ ದೀರ್ಘವಾಗಿ ಮಾತನಾಡಿದರು. ಅವರು ಹೀಗೆ ಮಾತನಾಡುತ್ತಿದ್ದದ್ದು ಯುವಕರೊಂದಿಗೆ ಮಾತ್ರ. ಉಳಿದಂತೆ ಅವರ ಕಾಲದ ಸ್ನೇಹಿತರೊಂದಿಗೆ ಪಾನಗೋಷ್ಠಿಯಲ್ಲಿ ಮಾತ್ರ ಭಾಗವಹಿಸುತ್ತಿದ್ದರು. ಎಷ್ಟೋ ಜನರಿಗೆ ಮಂಜಣ್ಣ ವಿಚಾರವಂತರಾಗಿ ಕಾಣಿಸಿಕೊಳ್ಳುತ್ತಿರಲಿಲ್ಲ, ಏಕೆಂದರೆ, ಅವರು ಯುವಕರಲ್ಲಿ ಮಾತ್ರ ಭರವಸೆಯನ್ನು ಇಟ್ಟುಕೊಂಡಂತೆ ಕಾಣುತ್ತಿತ್ತು, ರಾತ್ರಿ ಅಲ್ಲಿಂದ ಹೊರಡುವಾಗ ಜ್ಯೋತಿ ಸರ್ಕಲ್‌ನಲ್ಲಿ ಇದ್ದ ಒಂದು ಪುಸ್ತಕದ ಮಳಿಗೆಗೆ ಹೋದೆವು. ಕೆಲವು ಪುಸ್ತಗಳಿಗಾಗಿ ಹುಡುಕಾಡುವಾಗ 'ಓಲ್ಗಾ ಗಂಗಾ' ಎತ್ತಿಕೊಂಡು ಇದನ್ನು ನನಗೆ ಕೊಡಿಸಿ ಎಂದಾಗ "ಯಾಕೆ ಇದನ್ನು ಓದಿಲ್ಲವೇ" ಎಂದೆ. "ಇದನ್ನು ಓದಿ ಅನೇಕ ವರ್ಷಗಳೇ ಕಳೆದಿವೆ. ಮಾನವ ಜನಾಂಗ ಬೆಳೆದುಬಂದ ರೀತಿಯನ್ನು ವಿವರಿಸುವ ಈ ಕೃತಿ ಅದ್ಭುತ" ಎಂದರು. ಅದನ್ನು ಕೊಡಿಸಿದೆ. ಬಸ್ ಇಳಿಯುವಾಗ ಅದನ್ನು ನನಗೆ ವಾಪಸ್ ಕೊಟ್ಟು "ನೀವೇ ಓದಿ ನಂತರ ಕೊಡಿ" ಎಂದರು. ನನಗೆ ಗೊತ್ತಿತ್ತು ಈಗೀಗ ಅವರು ಏನನ್ನೂ ಗಂಭೀರವಾಗಿ ಓದುತ್ತಿರಲಿಲ್ಲ, ಅವರು ಇದ್ದ ರೂಮಿನ ವಿದ್ಯುತ್ ಹಾಳಾಗಿ ಎರಡು ವರ್ಷಗಳೇ ಕಳೆದಿತ್ತು, ರಿಪೇರಿಯನ್ನೇ ಮಾಡಿಸಿಕೊಂಡಿರಲಿಲ್ಲ, ಹೊರಗೆಲ್ಲಾ ಪ್ರಖರ ಬೆಳಕಿದ್ದರೂ, ಒಳಗೆ ಸೀಮೆಎಣ್ಣೆಯ ಬುಡ್ಡಿ ಹಚ್ಚಿಕೊಳ್ಳುತ್ತಿದ್ದರು. ಪುಸ್ತಕಗಳನ್ನೆಲ್ಲ ಗಂಟುಕಟ್ಟಿ ಅಟ್ಟದ ಮೇಲಿಟ್ಟಿದ್ದರು. ಅವೆಲ್ಲ ಹೊಗೆ ಹಿಡಿದು ಹೋಗಿದ್ದವು. ಆ ಪುಟ್ಟ ರೂಮಿನಲ್ಲಿ ಒಂದೆರಡು ಪಾತ್ರೆಗಳು, ಸೀಮೆಎಣ್ಣೆಯ ಬತ್ತಿ ಸ್ಟವ್, ಒಂದೆರಡು ಪ್ಲಾಸ್ಟಿಕ್ ಡಬ್ಬಗಳು, ನೀರು ಶೇಖರಿಸಿಡಲು ಸಣ್ಣ ಹಿತ್ತಾಳೆಯ ಹಂಡೆ ಮತ್ತು ಪ್ಲಾಸ್ಟಿಕ್ ಕೊಡ ಮಾತ್ರವಿದ್ದವು.

ಅವರೊಂದಿಗೆ ನಮ್ಮ ಗೆಳೆಯರೆಲ್ಲ ತಮಾಷೆ ಮಾಡಿ ಹಿಗ್ಗಾಮುಗ್ಗ ಸಂಸ್ಕೃತ ಬೈಗುಳಕ್ಕೆ ಒಳಗಾಗುತ್ತಿದ್ದೆವು. ಅವರ ಬೈಗುಳಗಳು ಕೂಡ ಹಾಸ್ಯದಿಂದ ಕೂಡಿರುತ್ತಿದ್ದವು. ಆದರೆ ಇತ್ತೀಚೆಗೆ ಯಾಕೋ ಮಂಕಾದಂತೆ ತೋರುತ್ತಿದ್ದರು. ಅವರ ಮುಖ ಬಾಡಿದಂತೆ ಕಾಣುತ್ತಿತ್ತು. ಬಹುಶಃ ಐವತ್ತು ವರ್ಷಗಳಾಗುತ್ತ ಬಂದರೂ ಬಾಳಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳದೆ ಇದ್ದ ತಪ್ಪು, ಒಂಟಿತನ, ಅವರಿವರ ಹತ್ತಿರ ಅಪಹಾಸ್ಯದ ಮಾತುಗಳನ್ನು ಕೇಳುತ್ತಿದ್ದದ್ದು, ವಯಸ್ಸಾದ ತಾಯಿಯನ್ನು ನೋಡಿಕೊಳ್ಳುವವರಿಲ್ಲದೆ ಅವರ ಸಹೋದರಿಯರ ಮನೆಗಳಲ್ಲಿ ಇರುತ್ತಿದ್ದದ್ದು, ಇತ್ತೀಚೆಗೆ ಅವರನ್ನು ಅಲುಗಾಡಿಸುತ್ತಿದ್ದ ಸಕ್ಕರೆ ಕಾಯಿಲೆ ಎಲ್ಲವೂ ಅವರನ್ನು ಹೈರಾಣಾಗಿಸಿದ್ದವು.



ಇತ್ತೀಚೆಗೆ ಮಂಗಳೂರಿನ ಒಂದು ಆಸ್ಪತ್ರೆಯಲ್ಲಿ ಮೂರ್ನಾಲ್ಕು ಗಂಟೆಗಳಿಗೂ ಹೆಚ್ಚು ಕಾಲ ವಿವಿಧ ಚಿಕಿತ್ಸೆಗೆ ಒಳಗಾಗಿ ಅವರು ಹೊರಬಂದಾಗ ಬೆವರಿನಿಂದ ತೊಯ್ದು ತೊಪ್ಪೆಯಾಗಿದ್ದರು. ಏದುಸಿರು ಬಿಡುತ್ತ ಒಂದು ಗಂಟೆ ಸುಧಾರಿಸಿಕೊಂಡರು. ನಾನು "ಏನು?" ಎಂದೆ. ಅವರು "ಎಲ್ಲಾ ನಾರ್ಮಲ್ ನಡೆಯಿರಿ" ಎಂದರು. ಆದರೆ ಅವರು ಕೊನೆಗಾಲದಲ್ಲಿ ಎದುರಿಸಬೇಕಾದ ಕಷ್ಟಗಳನ್ನೆಲ್ಲ ನೆನೆಸಿಕೊಂಡೆ. ಆದರೆ ಸಾವು ಅಂತಹ ಯಾವುದಕ್ಕೂ ಅವಕಾಶ ಮಾಡಿಕೊಡಲಿಲ್ಲ. ಚಿಕ್ಕಮಗಳೂರಿನ ಬೀದಿಗಳಲ್ಲಿ ಹಗಲುರಾತ್ರಿಗಳೆನ್ನದೆ ಸರಾಗವಾಗಿ ಓಡಾಡಿಕೊಂಡಿದ್ದವರ ಮೇಲೆ ಟ್ರಾಕ್ಟರ್ ರೂಪದಲ್ಲಿ ಬಂದ ಸಾವು ಹರಿಯಿತು. ಅಸಹಾಯಕ, ಅಮಾಯಕರಿಗೆಲ್ಲ ಸದಾ ಬಡಿಯುತ್ತಿದ್ದ ಅವರ ಹೃದಯದ ಮಿಡಿತವನ್ನೇ ನಿಲ್ಲಿಸಿಬಿಟ್ಟಿತು.

ಒಮ್ಮೆ ಗೆಳೆಯರು ಆಸ್ಪತ್ರೆಯ ಶವಾಗಾರದಲ್ಲಿದ್ದ ಮೃತದೇಹಗಳನ್ನು ನೋಡಿ ತಮಾಷೆಗಾಗಿ "ಮಂಜಣ್ಣ ನೀವು ಯಾವಾಗ ಹೀಗೆ ಮಲಗೋದು" ಎಂದು ಕೇಳಿ ಬೈಸಿಕೊಂಡಿದ್ದೆವು. ಆದರೆ ಅದೇ ಆಸ್ಪತ್ರೆಯ ಶವಾಗಾರದಲ್ಲಿ ಇಷ್ಟು ಬೇಗ ಅವರು ಮಲಗುತ್ತಾರೆಂದು ಯಾರೂ ಭಾವಿಸಿರಲಿಲ್ಲ. ಸಾವು ಅನಿವಾರ್ಯವೆಂದು ದುಃಖ ತಡೆದುಕೊಳ್ಳಬಹುದು. ಕೆಲದಿನಗಳಲ್ಲಿ ಮರೆಯಲೂ ಬಹುದು. ಆದರೆ ಅವರ ನೆನಪುಗಳಲ್ಲಿದ್ದದ್ದನ್ನು ಹೇಳಲು ತವಕಿಸುತ್ತಿದ್ದಾಗ ನಾವು ನಿರ್ಲಕ್ಷಿಸಿ ಇಡೀ ಮಲೆನಾಡಿನ ದಲಿತರ ಹೋರಾಟ, ಅವುಗಳ ಸಫಲತೆ ವಿಫಲತೆಗಳ ಗಾಥೆಯನ್ನು ದಾಖಲಿಸಿಕೊಳ್ಳಲಿಲ್ಲವೆಂಬ ವ್ಯಥೆ ಸದಾ ಕಾಡುತ್ತಿರುತ್ತದೆ. ಯಲಗುಡಿಗೆ ಮಂಜಯ್ಯ ಅವರ ಅಪಾರ ಗೆಳೆಯರ ಪರವಾಗಿ ಭಾವಪೂರ್ವಕ ಶ್ರದ್ಧಾಂಜಲಿ ಅರ್ಪಿಸುವುದಷ್ಟೇ ನಮ್ಮ ಕೆಲಸವಾಗಿದೆ.

• ರಾಜೇಶ್


ಬಿದ್ದ ಅಲಿಯಾಸ್ ಹುಂಡುಗುಂಬಳಿ ಅವನಮ್ಮನ ಕೊನೆಯ ಮಗ. ಅವನಮ್ಮ ಮಕ್ಕಳನ್ನು ಹೊತ್ತು ಹೊತ್ತು ಹೊಡೆಯುತ್ತಿದ್ದಾಗ ಕೊನೆಯಲ್ಲಿ ಹುಟ್ಟಿದವನೇ ಸಾಕ್ಷಾತ್ ವಾಮನ ಅವತಾರಿಯಾಗಿದ್ದ ಸಿದ್ದ ದೊಡ್ಡವ ...ಮೀಸೆ ಬಂದಮೇಲೆ ಅವನಿಗಿಂತ ಎತ್ತರದವಳನ್ನು ...ವೆ ಮಾಡಿಕೊಂಡಿದ್ದ. ಅವನಿಗೆ ಎರಡು ಹೆಣ್ಣು ...ಾದವು. ಅವರಿಬ್ಬರೂ ಎತ್ತರವಾಗಿಯೇ ಇದ್ದರು. ...ಮದುವೆ ಆದ ಮೇಲೆ ದನಕಾಯುವ ಕೆಲಸಕ್ಕೆ ನಿವೃತ್ತಿ ಕೊಟ್ಟು ಕಾಡುತ್ಪನ್ನವನ್ನು ಮಾರುವುದನ್ನೇ ...ೀವನದ ಕಸುಬನ್ನಾಗಿಸಿಕೊಂಡಿದ್ದ.

...ತ ಆಯಾ ಸೀಸನ್ನಿಗೆ ಸರಿಯಾಗಿ ಕಾಡಿನಿಂದ ...ಪದ ವಸ್ತುಗಳನ್ನು ತರುತ್ತಿದ್ದ. ಮಳೆ ಹಿಡಿಯಿತೆಂದರೆ ... ಕಳಲೆ, ಮರಗೆಣಸು, ಮಡಹಾಗಲಕಾಯಿ, ಕಾರೇಡಿ, ...ೀಮ ಇತ್ಯಾದಿಗಳನ್ನು ತರುತ್ತಿದ್ದ. ಬೇಸಿಗೆ ಕಾಲದಲ್ಲಿ ... ಸೀಗೆ ತರಹದ ವಸ್ತುಗಳನ್ನು ತರುತ್ತಿದ್ದ. ಆದಕ್ಕಿಂತ ...ವಾಗಿ ಸಿದ್ದ ಹೊಳೆಶಿಕಾರಿ ಮತ್ತು ಕಾಡಶಿಕಾರಿಯನ್ನೂ ...ತ್ತಿದ್ದ. ಆದರೆ ಸಿದ್ದನ ಶಿಕಾರಿ ಅಂದರೆ ಬಂದೂಕು ... ಮಾಡುವ ಶಿಕಾರಿಯಲ್ಲ. ಅವನ ಹತ್ತಿರ ಬಂದೂಕೂ ... ಆದರೆ ಗಾಳ, ಕೂಳಿ, ಬೆಸೆ ಅಂತೆಲ್ಲ ಅವನ ...ಹಲವಾರು ಬೇಟೆಯ ಸಲಕರಣೆಗಳಿದ್ದವು; ಬೈನೆಕಟ್ಟಿ ...ಾಡಿತ್ತಿದ್ದ. ಅವುಗಳನ್ನು ಉಪಯೋಗಿಸಿ ಅಪರೂಪಕ್ಕೆ ...ಲಿ (ಬಾಲ ಇಲ್ಲದ ಇಲಿ), ಪುಣಿಗನ ಬೆಕ್ಕು ... ಔಷಧಿ ವಿಶೇಷಗಳನ್ನು ಹೊಂದಿದ್ದ ಪ್ರಾಣಿಗಳನ್ನು ...ುತ್ತಿದ್ದ. ಯಾರಿಗಾದರೂ ಔಷಧಿಗೆ ಬೇರು ನಾರು ... ಅವರು ಸಿದ್ದನಿಗೆ ಹೇಳುತ್ತಿದ್ದರು. ಸಿದ್ದ ಕೂಡ ...ಕಾಯಿಲೆಗಳಿಗೆ ಔಷಧಿಗಳನ್ನು ಕೊಡುತ್ತಿದ್ದ. ಆದರೆ ... ಆತ ಮಂಗ ತಿನ್ನುವವ ಅಂತ ಅವನಿಂದ ...ಗಳನ್ನು ತೆಗೆದುಕೊಳ್ಳುತ್ತಿರಲಿಲ್ಲ.

...ಣಿಗನ ಬೆಕ್ಕು ಒಂದು ರೀತಿಯಲ್ಲಿ ಹೆಗ್ಗಣ ತರಹದ ... ಆದು ಹುಳು ಹುಪ್ಪಟೆ, ಗದ್ದೆ ಏಡಿ, ಸೊಸುಲು ...ಗಳನ್ನು ಹಿಡಿದುಕೊಂಡು ತಿನ್ನುತ್ತದೆ. ಅದರ ವೃಷಣ ...ಣಗಿಸಿಟ್ಟುಕೊಂಡು ಅನೇಕ ಔಷಧಿಗೆ ಬಳಸುತ್ತಾರೆ. ...ಪುಣಿಗನ ಬೆಕ್ಕಿನ ಚೊಟ್ಟು ಅಂತಾರೆ. ಈ ಚೊಟ್ಟು ... ಹೆಂಗಸರಿಗೆ ತುಂಬಾ ಬೇಡಿಕೆ. ಮುಖದ ...ೋ ಕಲೆ ತೆಗೆಯುವುದಕ್ಕೆ ಹಾಗೂ ಸೌಂದರ್ಯ ...ನಾಗಿಯೂ ಬಳಸುತ್ತಾರೆ. ಹಾಗೆಯೇ ಗಂಡಸರ ...ರ್ಯಲ್ಯಕ್ಕೂ ಬಳಸಲಾಗುತ್ತದೆ. ಅದು ಕಸ್ತೂರಿಗಿಂತಲೂ ...ಪರಿಮಳ ಹೊಂಧಿರುತ್ತದೆ. ಇವು ಅಪರೂಪಕ್ಕೆ ...ಸಿಗೆ ಬೀಳುತ್ತಿದ್ದವು. ಆಗ ಅವುಗಳನ್ನು ಶ್ರೀಮಂತರ ... ಹೆಂಗಸರಿಗೆ ಮಾರಿ ತಿಂಗಳಿಗಾಗುವಷ್ಟು ಹಣವನ್ನು ...ಪಾದಿಸುತ್ತಿದ್ದ.


...ತಹ ಸಿದ್ದ ಮರ ಹತ್ತುವುದರಲ್ಲಿ ಮಂಗಗಳನ್ನೂ ...ಸುತ್ತಿದ್ದ. ಅವನಂತೆ ಮರ ಹತ್ತುವವರು ಯಾರೂ ... ಆ ಮರ ಅದೆಷ್ಟೇ ದೊಡ್ಡದಾಗಿರಲಿ, ಅದೆಷ್ಟೇ ...), ಸಿದ್ದ ಹೇಗಾದರೂ ಮಾಡಿ ಅದನ್ನು ಹತ್ತುತ್ತಿದ್ದ. ...ಣಕ್ಕಾಗಿಯೇ ನಮ್ಮ ಕಡೆ ಸಿದ್ದನಿಲ್ಲದೆ ಯಾವ ... ಬೇಟೆಯೂ ನಡೆಯುತ್ತಿರಲಿಲ್ಲ.

...ಗಗಳಿದ್ದ ಮರದ ಸುತ್ತ ಬಲೆ ಕಟ್ಟಿ, ದಾಟು ...ಷ್ಟು ಬಂದೋಬಸ್ತು ಮಾಡಿದ ಮೇಲೆ ಸಿದ್ದನನ್ನು ...ಗುತ್ತಿತ್ತು. ತನ್ನ ಕೃಶ ದೇಹವನ್ನು ಕಂಡು ಗೇಲಿ ...ವರಿಗೆ ಸವಾಲೆಸೆಯುವಂತೆ ಸಿದ್ದ ಮರ ಹತ್ತುತ್ತಿದ್ದ. ... ಎತ್ತರ ಹತ್ತಿಯಾದ ಮೇಲೆ ಅಲ್ಲೇ ಬಾಯಿಗೆ ...ಕೆ ಹಾಕಿಕೊಂಡು ರಸವನ್ನು ಬೇಕಂತಲೇ ಕೆಳಗೆ ... ಎಲ್ಲರಿಂದ ಬೈಸಿಕೊಳ್ಳುತ್ತಿದ್ದ. ಅಮೇಲೆ ತನ್ನ ...ಯನ್ನು ತೋರಿಸಿಕೊಳ್ಳಲು, ... ನೆಗದಾಗ ಕೂತಿರೆನ್ರೋ? ...ಲೆ ಕೆಳಗೆ ನೋಡಿ ಬಿಟ್ಟು ...” ಅಂತ ಕೇಳುತ್ತಿದ್ದ. ಕೆಳಗಿದ್ದ ...ೋರಿ ಮಂಗನ್ನ ಕೆಳಗಾಕು ...ನ್ನುತ್ತಿದ್ದರು. ಯಾಕೆಂದರೆ ... ಮಂಗ ಬೀಳದೆ ಇತರೆ ... ಕೆಳಗೆ ಬೀಳುವುದಿಲ್ಲ ಮತ್ತು ...ಮಂಗ ಉಳಿದುಕೊಂಡರೆ ...ತ್ತೆ ಹೊಸ ಸಾಮ್ರಾಜ್ಯವನ್ನು ...ಟು ಜನರನ್ನು ಕಾಡುತ್ತದೆ. ... ಹೋರಿ ಮಂಗ ಬಿತ್ತು ...ಂದಷ್ಟು ದಿಸ ಮಂಗಗಳ ...ವುದಿಲ್ಲ.



...ಕೊತ್ತಿಸುವರೆಗೂ 'ನೀವು ನರ ಮನುಷ್ಯರಿಗೆ ...ರಕ್ಕೆ ಆಗಲ್ಲ' ಎಂಬಂತೆ ಮರದ ಮೇಲಿಂದ ...ಸ್ಟ ಹೀಯಾಳಿಸುತ್ತಿದ್ದ ಮಂಗಗಳು ಸಿದ್ದನನ್ನು ...ಲೆ ಕಂಡ ತಕ್ಷಣ ಗಪ್ ಚುಪ್ ಆಗುತ್ತಿದ್ದವು. ...ಯಾಗಿ, ಸಿದ್ದ ಬಾಯಿ ಮಾಡುತ್ತಾ ಮೇಲೆ ... ಹೋರಿ ಮಂಗ ಒಂದು ಸಿಳ್ಳು ಹಾಕುತ್ತದೆ. ...ಿಂದ ಮಾಗಿದ ಕಾಯಿ ಉದುರುವಹಾಗೆ ...ಗಳು ದೊಪ್ಪದೊಪ್ಪ ಅಂತ ನೆಲಕ್ಕೆ ಬೀಳುತ್ತವೆ. ...ಜನ 'ಅಲ್ಲಿ ಬಿತ್ತು, ಇಲ್ಲಿ ಬಿತ್ತು', 'ಹೊಡಿರೋ, ಬಡಿರೋ' ಎಂದೆಲ್ಲ ಗಲಾಟೆ, ಗದ್ದಲ ಮಾಡುತ್ತಾ ಅವುಗಳನ್ನು ಅಟ್ಟುತ್ತಾರೆ. ಕೆಲವೇ ನಿಮಿಷಗಳಲ್ಲಿ ಮಂಗಗಳೆಲ್ಲ ಬಿದ್ದು ಬಲೆ ಹತ್ತುತ್ತವೆ. ಬಲೆ ಕಾಯುವವರು ಬಲೆಯನ್ನು ಮುಗುಚುತ್ತಾರೆ. ಎಲ್ಲಾ ಮಂಗಗಳು ಬಲೆಯೊಳಗೆ ಬಿದ್ದಿರುತ್ತವೆ.

ನಮ್ಮ
ದಾಯಾದಿಗಳಿಗಿಂತಲೂ
ದೊಡ್ಡ ಪೀಡೆಗಳಂತಿರುವ
ಮಂಗಗಳು ಜನರಿಗೆ
ತೊಂದರೆ ಕೊಟ್ಟರೂ
ಬಯಲುಸೀಮೆಯವರು
ಅವುಗಳನ್ನು
ಹೊಡೆಯುವುದಿಲ್ಲ.
ಆಕಸ್ಮಿಕವಾಗಿ ಒಂದು
ಮಂಗ ಸತ್ತರೆ
ಜಗದ್ಗುರುಗಳೇ
ಲಿಂಗೈಕ್ಯರಾದರೇನೋ
ಎಂಬಂತೆ ಆ ಮಂಗನ
ಸಂಸ್ಕಾರಕ್ಕೆ ಊರಿಗೆ ಊರೇ
ಸೇರಿ ದುಡ್ಡು ಒಟ್ಟು ಮಾಡಿ
ಹೂಳುತ್ತಾರೆ.



• ಕಲ್ಕುಳಿ ವಿಠಲ ಹೆಗ್ಡೆ

ಮಂಗನ ಬ್ಯಾಟೆ

ಮಲೆನಾಡಿನವರ ಮಂಗನ ಬೇಟೆ ಬಗ್ಗೆ ಕೇಳಿದ ಬಯಲುಸೀಮೆಯ ಆಂಜನೇಯನ ಭಕ್ತರು 'ಇವರೆಂಥ ರಾಕ್ಷಸರು' ಎಂದುಕೊಳ್ಳಬಹುದು. ಅದ್ಯಾಕೋ ಇಂತಹ ವಿಷಯಗಳಲ್ಲಿ ಬಯಲು ಸೀಮೆಯವರಿಗೂ, ಮಲೆನಾಡ ವರಿಗೂ ಹೊಂದಾಣಿಕೆ ಆಗುವುದಿಲ್ಲ. ಅವರ ನೆಲದ ಗುಣವೋ, ನಮ್ಮ ನೀರಿನ ಗುಣವೋ ಇದಕ್ಕೆ ಕಾರಣವಿರ ಬಹುದು. ಅವರ ಮತ್ತು ನಮ್ಮ ನಡುವಿನ ಸಂಸ್ಕಾರ, ಸಂಸ್ಕೃತಿ ಎಲ್ಲಾ ಬೇರೆ ಬೇರೆ.

ನಾನು ಚಿಕ್ಕವನಾಗಿದ್ದಾಗ ನಮ್ಮ ಶಾಲೆಗೊಬ್ಬರು ಬಯಲುಸೀಮೆ ಮೇಸ್ಟರು ಬರುತ್ತಿದ್ದರು. ಒಂದು ದಿನ ಶಾಲೆಯ ಹತ್ತಿರ ಬಂದಿದ್ದ ನಾಗರಹಾವನ್ನು ಅವರು ಬೇಲಿಗೂಟ ಕಿತ್ತು ಬಡಿದು ಕೊಂದು ಹಾಕಿದ್ದರು. ಅವರು ತಾವೊಂದು ವಿಷ ಜಂತುವನ್ನು ಹೊಡೆದು ಹಾಕಿದ ಸಂಭ್ರಮದಲ್ಲಿದ್ದರು. ಪಾಪ ಅವರಿಗೇನು ಗೊತ್ತು ನಮ್ಮ ಕಡೆಯವರ ವಿಚಾರ. ಮೇಸ್ಟರು ಹಾವೊಂದನ್ನು ಹೊಡೆದು ಸುಟ್ಟು ಹಾಕಿದ ವಿಚಾರ ಊರ ತುಂಬಾ ಸುದ್ದಿ ಆಯಿತು. ಆಮೇಲೆ ಊರಿನ ಹಿರಿಯರೆಲ್ಲ ಸೇರಿ ಮೇಸ್ಟರಿಗೆ ದಂಡ ವಿಧಿಸಿ ಆ ಹಣವನ್ನು ಬ್ರಾಹ್ಮಣರಿಗೆ ಕೊಡಿಸಿದ್ದರು.

ಒಮ್ಮೆ ನಾನೊಂದು ಹಾವನ್ನು ಹೊಡೆದು ಹಾಕಿದ್ದಾಗ ನಮ್ಮಪ್ಪ ಅದರ ಸಂಸ್ಕಾರಕ್ಕೊಂದು ಎಂಟು ನೂರು ರೂಪಾಯಿ ಸಾಲ ಮಾಡಿದ್ದರು. ಆ ಕೊಳೆತ ಹಾವನ್ನು ಬ್ರಾಹ್ಮಣನೊಬ್ಬ ಬುಟ್ಟಿಗೆ ತುಂಬಿಸಿ ಹೊಳೆ ಬದಿ ಅದನ್ನು ಸುಟ್ಟು, ನಂತರ 7-8 ಬ್ರಾಹ್ಮಣರು ಇಡೀ ದಿನ ಪೂಜೆ-ಶ್ರಾದ್ಧ ಮಾಡಿ ಗಡದ್ದಾಗಿ ಉಂಡು ಹೋಗಿದ್ದರು. ಮಲೆನಾಡಲ್ಲಿ ಬ್ರಾಹ್ಮಣರು ಹೆಚ್ಚು ಇರುವುದರಿಂದ ಇಂತಹ 'ವಸೂಲಿ' ಸಂಪ್ರದಾಯಗಳು ಹುಟ್ಟಿಕೊಂಡಿವೆ ಅನ್ನಿಸುತ್ತದೆ.

ಅಪರೂಪಕ್ಕೆ ಕೋಳಿ ಮರಿಯನ್ನೋ, ಮೊಟ್ಟೆಯನ್ನೋ ನುಂಗುವುದಕ್ಕೆ, ನಾಗರಹಾವುಗಳು ಮನೆಗೆ ಬರುತ್ತವೆ. ಅವು ಹಾಗೆ ನುಂಗುತ್ತಿರುವುದನ್ನು ನೋಡಿ 'ನಮ್ಮಿಂದ ಏನಾದರು ತಪ್ಪಾಗಿದ್ದರೆ ಕ್ಷಮಿಸು ಮುಡಿಪು ಕಟ್ಟುತ್ತೇವೆ' ಎಂದು ಅದಕ್ಕೆ ಕೈಮುಗಿದು ಇಲ್ಲಿಯ ನಾಗರಹಾವುಗಳ ಪಾಲಿಟ್ ಬ್ಯುರೋ ಆಗಿರುವ ಶ್ರೀ ಕ್ಷೇತ್ರ ಸುಬ್ರಹ್ಮಣ್ಯಕ್ಕೆ ಜನ ಮನಿ ಆರ್ಡರ್ ಮಾಡುತ್ತಾರೆ. ನಾಗರಹಾವು ಪ್ರತ್ಯಕ್ಷ ದೇವರು; ಅವು ಬ್ರಾಹ್ಮಣರ ಪೂರ್ವಜರಂತೆ ಎಂಬ ನಂಬಿಕೆ ಇಲ್ಲಿನ ಜನರದ್ದು.

ಅದೇನೇ ಇರಲಿ, ನಮ್ಮ ದಾಯಾದಿಗಳಿಗಿಂತಲೂ ದೊಡ್ಡ ಪೀಡೆಗಳಂತಿರುವ ಮಂಗಗಳು ಜನರಿಗೆ ತೊಂದರೆ ಕೊಟ್ಟರೂ ಬಯಲುಸೀಮೆಯವರು ಅವುಗಳನ್ನು ಹೊಡೆಯುವುದಿಲ್ಲ. ಆಕಸ್ಮಿಕವಾಗಿ ಒಂದು ಮಂಗ ಸತ್ತರೆ ಜಗದ್ಗುರುಗಳೇ ಲಿಂಗೈಕ್ಯರಾದರೇನೋ ಎಂಬಂತೆ ಆ ಮಂಗನ ಸಂಸ್ಕಾರಕ್ಕೆ ಊರಿಗೆ ಊರೇ ಸೇರಿ ದುಡ್ಡು ಒಟ್ಟು ಮಾಡಿ ಹೂಳುತ್ತಾರೆ.

ನಮ್ಮ ಪಕ್ಕದ ಮನೆಯವನೊಬ್ಬ ಮೂವತ್ತು ವರ್ಷಗಳ ಹಿಂದೆ ಯಾವುದೋ ಕೆಲಸಕ್ಕೆ ಅಂತ ಬೆಂಗಳೂರಿಗೆ ಹೋಗಿದ್ದ. ಒಂದು ದಿನ ಅವನು ಪೀಣ್ಯ ರಸ್ತೆಯಲ್ಲಿ ನಡೆದುಹೋಗು ತ್ತಿದ್ದಾಗ, ರಸ್ತೆ ಬದಿ ಮನುಷ್ಯರ ಭಯ ಇಲ್ಲದೆ ಆರಾಮವಾಗಿ ಕೂತಿದ್ದ ಮಂಗಗಳನ್ನು ಕಂಡು "ಅರೆ, ಇದೆಂತದ್ದು" ಅಂತ ಅಲ್ಲೇ ಇದ್ದ ಜಲ್ಲಿ ಕಲ್ಲೊಂದನ್ನು ತೆಗೆದುಕೊಂಡು ಮಂಗಗಳತ್ತ ಹೊಡೆದನಂತೆ. ಆ ಕಲ್ಲೇಟಿಗೆ ಒಂದು ಮಂಗ ಸತ್ತು ಬಿತ್ತಂತೆ. ಇದಾದ ಸ್ವಲ್ಪ ಹೊತ್ತಲ್ಲೆ ಗಲಾಟೆಯೋ ಗಲಾಟೆ. ಅವನನ್ನು ಹಿಡಿದುಕೊಂಡಿದ್ದ ಜನರಿಂದ ಬಿಡಿಸಿದ ಊರಿನ ಛೇರ್‌ಮನ್ ಆನಂತರ ಅವನನ್ನು ಅಲ್ಲಿಂದ ಗಡಿಪಾರು ಮಾಡಿದ್ದರು. ಹೀಗೆ ಮಂಗನನ್ನು ಹೊಡೆದ ತಪ್ಪಿಗೆ ಆತ ಕೆಲಸ ಕಳೆದುಕೊಂಡು ಊರಿಗೆ ವಾಪಸ್ಸು ಬಂದಿದ್ದ.

ಬ್ರಿಟಿಷರು ನಮ್ಮ ದೇಶವನ್ನು ಆಕ್ರಮಿಸಿಕೊಂಡ ನಂತರದ ನಮ್ಮ ನಾಡಿನ ಮೇಲೆ ತಮ್ಮ ಹಕ್ಕನ್ನು ಸ್ಥಾಪಿಸಿದರಲ್ಲದೆ ನಮ್ಮ ಕಾಡುಗಳೂ ಬ್ರಿಟಿಷ್ ರಾಣಿಯ ಕಂಪನಿ ಸರಕಾರಕ್ಕೆ ಸೇರಿದ್ದು ಅಂತ ಘೋಷಿಸಿದರು. ಅವರು ತಂದ ಫಾರೆಸ್ಟ್ ಕಾನೂನಿನ ಪ್ರಕಾರ ಕಾಡನ್ನು ಯಾರು ಬೇಕಾದರೂ ಕಡಿಯಬಹುದಿತ್ತು, ಆದರೆ ಅದಕ್ಕೊಂದು ಬ್ರಿಟಿಷ್ ಸರ್ಕಾರಕ್ಕೆ ದುಡ್ಡು ಕಟ್ಟಿ ಲೈಸೆನ್ಸ್ ಪಡೆಯಬೇಕಿತ್ತಷ್ಟೇ. ಅಂದರೆ ದುಡ್ಡಿದ್ದವರು ಎಷ್ಟು ಕಾಡನ್ನಾದರೂ ಕಡಿಯಬಹುದಿತ್ತು, ಆದರೆ ಕಾಡೇ ತಮ್ಮ ಮನೆ ಮತ್ತು ಬದುಕು ಎಂದು ಭಾವಿಸಿ ಜೀವನ ನಡೆಸುತ್ತಿದ್ದ ನಮ್ಮ ಮಲೆನಾಡಿನ ಕಾಡಿನ ಜನರನ್ನು ಅಂದಿನ ಸರ್ಕಾರ ಬಂಧಿಸುತ್ತಿತ್ತು, ಅರ್ಥಾತ್ ಮಲೆನಾಡಿನ ಮಕ್ಕಳನ್ನು ಅವರ ಮನೆಯಲ್ಲೇ ಕಳ್ಳರನ್ನಾಗಿಸಿತ್ತು.

ಬ್ರಿಟಿಷರು ನಮ್ಮ ನಾಡಿನ ಜನರ ವಿರುದ್ಧವೇ ಸಾರಿದ ಯುದ್ಧಗಳಿಗೆ, ರೈಲ್ವೆ ಸ್ಲೀಪರ್‌ಗಳಿಗೆ, ಹಡಗುಗಳನ್ನು ಕಟ್ಟುವುದಕ್ಕೆ ಅಂತ ಒಳ್ಳೊಳ್ಳೆಯ ಮರಗಳನ್ನು ಕಡಿದರು. ಜನ ಹೋಗದ ಕಾಡಿಗೆ ಲಾರಿ ರಸ್ತೆ ಮಾಡಿದರು. ಆಗ ಕಾಡಿನ ಹರಣ ವ್ಯಾಪಕವಾಯಿತು. ಊರಿನ ಜನ ಕೂಡ ಈ ಕಾಡು ನಮ್ಮದು, ಇದನ್ನು ಕಡಿಬಹುದು ಎಂದುಕೊಂಡು ಐದು ಗಾಡಿ ಕಟ್ಟಿಗೆಗೆ ಲೈಸೆನ್ಸ್ ಪಡೆದು ತಮಗೆ ಅಗತ್ಯ ವಿಲ್ಲದಿದ್ದರೂ 50 ಗಾಡಿ ಕಡಿದರು. ಹೀಗೆ ಮರ ಕಡಿದು ಪೇಟೆಗೆ ಸಾಗಿಸುವ ಉದ್ಯೋಗಗಳೂ ಹಳ್ಳಿಯಲ್ಲಿ ಹುಟ್ಟಿ ಕೊಂಡವು. ಫಾರೆಸ್ಟ್ ಇಲಾಖೆಯವರ ನಿರಂತರ ಓಡಾಟ ಹಳ್ಳಿಯಲ್ಲಿ ಪ್ರಾರಂಭವಾಯಿತು.

ಬ್ರಿಟಿಷರಿದ್ದಾಗ ಕಾಡಿನಲ್ಲಿ ಶಿಕಾರಿ ನಡೆಸುವುದಕ್ಕೆ ಅಡ್ಡಿಪಡಿಸುತ್ತಿರಲಿಲ್ಲ. ಆದರೆ ಸ್ವತಂತ್ರ ಸರಕಾರ ಬಂದು ಅರಣ್ಯದಲ್ಲಿ ಶಿಕಾರಿ ಮಾಡಬಾರದು, ಕಾಡಲ್ಲಿರುವ ಪ್ರಾಣಿ ಗಳು ಸೇರಿದಂತೆ ಸಮಸ್ತವೂ ಫಾರೆಸ್ಟ್ ಇಲಾಖೆಗೆ ಸೇರಿದ್ದು ಅಂತ ಘೋಷಿಸಿತು. ಆಗ ಫಾರೆಸ್ಟ್ ಗಾರ್ಡುಗಳ ಗುತ್ತು ಹೆಚ್ಚಾಯಿತು.

ಇದೆಲ್ಲದರ ಬಾಧೆ ಹೆಚ್ಚು ತಟ್ಟಿದ್ದು ಸಿದ್ದನಿಗೆ. ಅವನ ಬದುಕೇ ಕಾಡಿನ ಉತ್ಪತ್ತಿಯನ್ನಾಧರಿಸಿತ್ತು. ದಿನಾ ಕಾಡಿಗೆ ಹೋಗುತ್ತಿದ್ದ ಸಿದ್ದ ಬರುವಾಗ ತನ್ನ ಬಗಲಲ್ಲಿ ಏನನ್ನಾದರೂ ಅಪರೂಪದ ವಸ್ತು ಇಟ್ಟುಕೊಂಡು ಬರುತ್ತಿದ್ದ. ಅದನ್ನು ಯಾವ ಮನೆಯ ಯಾರಿಗೆ ಕೊಟ್ಟರೆ ಹೆಚ್ಚು ಹಣ ಸಿಗುತ್ತೆ ಎಂದು ಯೋಚಿಸುತ್ತಾ ಹಸಿದ ಹೊಟ್ಟೆಯಲ್ಲಿ ಕಾಡಿನಿಂದ ಸಿದ್ದ ಹೊರಗೆ ಬೀಳುತ್ತಿದ್ದಂತೆ ಗಾರ್ಡ್ ಎದುರಾಗುತ್ತಿದ್ದ. ಹೀಗೆ ಗಾರ್ಡ್‌ನ ಕಾಟ ಜಾಸ್ತಿಯಾದಾಗ, ಸಿದ್ದ ರಾಜಾರೋಷ ವಾಗಿ ಮಾಡುತ್ತಿದ್ದ ಕಸುಬನ್ನು ಗಾರ್ಡ್ ಕಣ್ಣುತಪ್ಪಿಸಿ ಕಳ್ಳತನದಿಂದ ಮಾಡಲು ಶುರುಮಾಡಿದ. ಆದರೂ ಪುಟಬಾರಿ ಗಾರ್ಡ್‌ನಿಂದ ತಪ್ಪಿಸಿಕೊಳ್ಳಲು ಆಗುತ್ತಿರಲಿಲ್ಲ.

ಒಂದು ದಿನ ಅಪರೂಪಕ್ಕೆ ಸಿಕ್ಕಿದ್ದ ಪುಣಿಗನ ಬೆಕ್ಕು ಮತ್ತು ಒಂದು ಚಿಟ್ ಕೋಳಿ ಹಿಡಿದುಕೊಂಡು ಕಾಡಿನಿಂದ ಹೊರಗೆ ಬರುವುದಕ್ಕೂ, ಗಾರ್ಡ್ ಎದುರುಗಡೆ ಸಿಕ್ಕುವುದಕ್ಕೂ ಸರಿಯಾಯಿತು. "ಚಿಟ್ ಕೋಳಿ ನಂಗೆ ಕೊಡು, ನಮ್ಮ ಸಾಹೇಬ್ರ ಮನೆಗೆ ಪುಣಿಗನ ಬೆಕ್ಕು ಕೊಡು" ಎಂದು ಹಠ ಮಾಡಿದ. ಆದರೆ ಸಿದ್ದ "ಆಗಲ್ಲ, ಇದು ವಸೇದ ಹೆಂಡ್ತಿಗೆ ಬೇಕು. ಅವ್ರಾವ್ರು ಹೇಳ್ಯಾರೆ" ಅಂತಂದಾಗ ಅವನನ್ನು ಗಾರ್ಡ್ ಬೈದು ಬಿಟ್ಟಿದ್ದ. ಆದರೆ ಅವತ್ತಿನಿಂದ ಸಿದ್ದನ ಮೇಲೆ ಗಾರ್ಡ್ ಒಂದು ಕಣ್ಣಿಟ್ಟಿದ್ದ.

(ಮುಂದುವರೆಯುವುದು)

ಹಾಯ್ಕುಗಳು

• ಡಾ. ಸಿ. ರವೀಂದ್ರನಾಥ್



1 ಈ ಸಂಜೆ
ಹರಿಗೋಲಿನಲ್ಲಿ ಹೊಳೆದಾಟುತ್ತಿವೆ
ಮಳೆ ಹನಿಗಳು


2 ಸಂಜೆ ಆಗುಸದಲ್ಲಿ
ಕಾಮನಬಿಲ್ಲಿನ ಬಾಗಿಲು
ಕೊಕ್ಕರೆಗಳು ಒಳಬರುತ್ತಿವೆ



3 ಹರಿಯುತ್ತಿದೆ ನಿರ್ಲಿಪ್ತ ನದಿ
ನುಣುಪು ಬಂಡೆಗಳ ಮೇಲೆ
ಜಾರುತ್ತಿದೆ ಕಾಲ

4 ಬೆಳಗಿನ ದಾರಿಯುದ್ದಕ್ಕೂ
ಹಸಿರುಗರಿಕೆ ನೀಲಿ ಬಿಳಿ ಹೂ
ಬರೆದ ಕವನಗಳು

5 ಸಂಜೆ ಮಳೆ
ನೆನೆಯುತ್ತಿದೆ ಕೊಕ್ಕರೆ ಸಾಲು
ಕೊಡೆಯಡಿ ಅವಳು



6 ಚಂದಿರನ ನೋಡುತ್ತಿದ್ದಾಳೆ
ಸ್ಪರ್ಶಿಸುತ್ತಿವೆ
ರವಿಯ ತಂಪು ಕಿರಣಗಳು

7 ಅರಳಿದ ಪುಟ್ಟ ಹೂವಿನಲ್ಲಿ
ಹುಡುಕುತ್ತಿದ್ದೇನೆ
ಕಳೆದುಹೋಗಿರುವ ನನ್ನ ಮುಗ್ಧತೆ


8 ಬೆಳಕಿಗೆ ಬೆನ್ನು ತಿರುಗಿಸಿದೆ
ಭೂಮಿ
ಈ ರಾತ್ರಿ ತಂಪು

9 ಹರಡಿಕೊಂಡ ಹೂವುಗಳು
ಅಂತ್ಯ ಕಂಡಿವೆ
ಮಾಲೆಯಲ್ಲಿ....

10 ಕಪ್ಪೆಚಿಪ್ಪು ತಬ್ಬಿ ಸಂತೈಸಿದ
ಅನಾಥ ಮಳೆಹನಿ
ಸ್ವಾತಿಮುತ್ತು

11 ರೆಕ್ಕೆಗಳ ಪಂಜರದಲ್ಲಿ
ಅವಳು
ಪಕ್ಷಿ

12 ಕಡುಹಳದಿ ಕಾಸ್ಮಾಸ್ ಹೂಗಳು
ಕೊನೆಸಾಲು ಬರೆಯುತ್ತಿದ್ದೇನೆ
ಬಾಡಿ ಉದುರಿವೆ



ನಮ್ಮ ಸಂವಿಧಾನಕ್ಕೂ ಮುಸ್ಲಿಂ ಸಮುದಾಯಕ್ಕೂ ಸಂಬಂಧವಿಲ್ಲವೇ?

ಮುಸ್ಲಿಂ ವಾರೀಸು ಹಕ್ಕು ಮಹಿಳಾ ವಿರೋಧಿಯಾಗಿದೆ ಎಂಬ ನನ್ನ ಲೇಖನ ಪತ್ರಿಕೆಯಲ್ಲಿ ಪ್ರಕಟಗೊಂಡ ಮರುವಾರವೇ ಮುಸ್ಲಿಂ ವ್ಯಕ್ತಿ ನಿಯಮ ರಕ್ಷಣಾ ಮಂಡಳಿ ಎಂಬ ಸರಕಾರೇತರ ಸಂಘಟನೆ ಗುಲ್ಬರ್ಗಾದಲ್ಲಿ ನಡೆದ ವಿಚಾರ ಸಂಕಿರಣವೊಂದರಲ್ಲಿ ಪರ್ಸನಲ್ ಲಾ ಬೋರ್ಡ್ ಅಧ್ಯಕ್ಷರು ವಿಚಾರ ಸಂಕಿರಣವನ್ನು ಉದ್ಘಾಟಿಸುತ್ತಾ ಮುಸ್ಲಿಮರ ಮೇಲೆ ಕೆಲವೊಂದು ನಿಯಮಗಳನ್ನು ಜಾರಿಗೆ ತರುವ ಕುರಿತು ಭಾಷಣ ಮಾಡಿದ್ದಾರೆ. ಅದರ ವಿವರಗಳು ಈ ಕೆಳಗಿನಂತಿವೆ.



ಮುಸ್ಲಿಂ ಸಮಾಜದ ಕೌಟುಂಬಿಕ ವಿವಾದಗಳೇನಾದರೂ ಇದ್ದರೆ ಈ ದೇಶದ ನ್ಯಾಯಾಲಯವನ್ನು ಸಮೀಪಿಸದೆ, ಶರಿಯತ್ ನಿಯಮದಂತೆ ಬಗೆಹರಿಸಿಕೊಳ್ಳಬೇಕು. ವಿವಾಹ ವಿಚ್ಛೇದನ, ಆಸ್ತಿಯ ಪಾಲುದಾರಿಕೆ, ವಾರೀಸು ಹಕ್ಕು ಮುಂತಾದವುಗಳಿಗಾಗಿ ನ್ಯಾಯಾಲಯದ ಮೊರೆಹೋದರೆ ಇಂತಹ ವಿವಾದಗಳು ಸಾರ್ವಜನಿಕ ಚರ್ಚೆಗೆ ಹಾದಿಯಾಗುತ್ತದೆ. ಆದುದರಿಂದ ಶರಿಯತ್ ನಿಯಮಾನುಸಾರ ಮತಪಂಡಿತರ ನೇತೃತ್ವದಲ್ಲಿ ಇಂತಹ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು. ಶರಿಯತ್ ನಿಯಮದ ಪ್ರಾಧಾನ್ಯತೆಯನ್ನು ಸಮಾಜದ ಜನರಿಗೆ ವಿಷದೀಕರಿಸಲು ರಾಜ್ಯಾದ್ಯಂತ ಪ್ರಚಾರವನ್ನು ಕೈಗೊಳ್ಳಲಾಗುವುದೆಂದೂ ಮುಸ್ಲಿಂ ವ್ಯಕ್ತಿ ನಿಯಮ ಮಂಡಳಿ ಅಧ್ಯಕ್ಷರು ತಿಳಿಯಪಡಿಸಿದರು.

ಮುಸ್ಲಿಂ ಸಮಾಜದ ಎಲ್ಲಾ ವಿವಾದ, ಸಮಸ್ಯೆಗಳಿಗೂ ಶರಿಯತ್ ನಿಯಮವೇ ಪರಿಹಾರ ಸೂಚಿಸಿದೆಯೆಂದೂ ಆದುದರಿಂದ ಎಲ್ಲರೂ ಶರಿಯತ್ ನಿಯಮಗಳನ್ನೇ ಅನುಸರಿಸಬೇಕೆಂದೂ ತಾಕೀತು ಮಾಡಿದರು. ಶರಿಯತ್ ನಿಯಮವನ್ನು ಸಮಾಜದ ಜನವರ್ಗ ಪಾಲಿಸುತ್ತಿದೆಯೇ ಎಂದು ತಿಳಿದುಕೊಳ್ಳಲು ರಾಜ್ಯದ ನಗರಗಳಲ್ಲಿ 'ತಫ್‌ಹೀಂ ಇ ಶರಿಯತ್' ಎಂಬ ಉನ್ನತಾಧಿಕಾರ ಸಮಿತಿಯೊಂದನ್ನು ರಚಿಸಲಾಗುತ್ತಿದೆಯೆಂದೂ ತಿಳಿಸಲಾಯಿತು. (ಈಗಾಗಲೇ ಇಲ್ಲಿರುವಂತೆ ಇನ್ನಷ್ಟು ನೈತಿಕ ಪೊಲೀಸರನ್ನು ಬಡ, ಅನಕ್ಷರಸ್ಥ ಅಮಾಯಕ ಮುಸ್ಲಿಮರ ಮೇಲೆ ಸವಾರಿ ಮಾಡಲು ಸಿದ್ಧಗೊಳಿಸುತ್ತಿರಬಹುದು!)

ಈ ವರದಿ ಮರುದಿನವೇ ಕೇರಳದ ಪತ್ರಿಕೆಗಳಲ್ಲಿ ಬೆಂಗಳೂರಿನಿಂದ ಕಳುಹಿಸಿದ ಸುದ್ದಿಯಾಗಿ ಪ್ರಕಟಗೊಂಡಿದೆ. ಕರ್ನಾಟಕದ 'ಪ್ರಜಾವಾಣಿ' ಇದನ್ನು ಪ್ರಕಟಿಸಿಲ್ಲ, ಇತರ ಪತ್ರಿಕೆಗಳು ಪ್ರಕಟಿಸಿವೆಯೇ ಎಂದು ತಿಳಿಯದು.

ಏನಿದರ ಅರ್ಥ? ಮುಸ್ಲಿಂ ಪರ್ಸನಲ್ ಲಾ ಬೋರ್ಡ್ ಎಂಬುದು ದೇಶಾದ್ಯಂತದ ಎಲ್ಲ ಮುಸ್ಲಿಮರ ಪ್ರಾತಿನಿಧಿಕ ಸಂಘಟನೆ ಅಲ್ಲ, ಇಡೀ ಮುಸ್ಲಿಂ ಸಮಾಜವನ್ನು ತಮ್ಮ ಕೈಯೊಳಗಿಟ್ಟುಕೊಂಡು, ಮನಬಂದಂತೆ ನಿಯಮ ರೂಪಿಸಿ ಸಮಾಜದ ಮೇಲೆ ಹೇರಲು ಇವರಿಗೆ ಅಧಿಕಾರ ಕೊಟ್ಟವರು ಯಾರು? ನನ್ನ ಕುಟುಂಬಕ್ಕೂ ಈ ವ್ಯಕ್ತಿ ನಿಯಮ ಮಂಡಳಿಗೂ ಯಾವುದೇ ಸಂಬಂಧವೂ ಇಲ್ಲ, ನಾವು ಇಸ್ಲಾಂ ಧಾರ್ಮಿಕ ನಿಯಮಗಳನ್ನು ಊರಿನ ಖಾಜಿಗಳ ಬೋಧನೆಗನುಸಾರವಾಗಿ, ಅಥವಾ ನಾವೇ ಕಲಿತುಕೊಂಡಂತೆ ಪಾಲಿಸುತ್ತೇವೆಯೇ ಹೊರತು ನಮ್ಮ ಮೇಲೆ ಅಧಿಕಾರ ಚಲಾಯಿಸಲು ಯಾರಿಗೂ ಹಕ್ಕಿಲ್ಲ, ಪ್ರವಾದಿಗಳು ಅಂತಹ ಹಕ್ಕನ್ನು ಯಾರಿಗೂ ಕೊಟ್ಟಿಲ್ಲ, 'ಬೋಧಿಸುವ, ತಿಳಿ ಹೇಳುವ ಹಕ್ಕಷ್ಟೇ ನಿನ್ನದು. ಶಿಕ್ಷೆ ನೀಡುವ ಹಕ್ಕು ನಿನಗಿಲ್ಲ, ಅದು ನನ್ನ ಕೆಲಸ' ಎಂಬುದು ಪ್ರವಾದಿಗಳಿಗೆ ಬಂದ ದೈವ ಸಂದೇಶ. ಮುಸ್ಲಿಮರು ಯಾವ ದೇಶದಲ್ಲಿ ಬದುಕುತ್ತಿದ್ದಾರೊ ಆ ದೇಶದ ಸಾಮಾಜಿಕ ನಿಯಮಗಳಿಗನುಸಾರವಾಗಿ (ಆರಾಧನೆಯಂತಹ ಧಾರ್ಮಿಕ ನಿಯಮವನ್ನು ಹೊರತುಪಡಿಸಿ) ಬದುಕಬೇಕು ಎಂಬುದೂ ಕೂಡಾ ಖುರ್‌ಆನ್ ವಾಕ್ಯ. ದಂಡಸಂಹಿತೆ (ಕ್ರಿಮಿನಲ್ ಪ್ರೊಸೀಜರ್ ಕೋಡ್) ಈ ದೇಶದ ನಿಯಮಗಳಿಗನುಸಾರವಾಗಿ ಆಗಬಹುದಾದರೆ ನಾಗರಿಕ ಸಂಹಿತೆ ಕೂಡಾ ಈ ದೇಶದ ನಿಯಮವನ್ನೇ ಅನುಸರಿಸಬೇಕು.

ಈ ದೇಶದ ನಾಗರಿಕ ಸಂಹಿತೆ ಮಾತ್ರ ಮುಸ್ಲಿಮರಿಗೆ ಅನ್ವಯವಾಗಬಾರದು ಎಂಬುದರ ಅರ್ಥವೇನು? ಈ ದೇಶದ ಪ್ರತಿಯೊಬ್ಬ ನಾಗರಿಕನೂ ಈ ದೇಶದ ಸಂವಿಧಾನಕ್ಕೆ ಬದ್ಧನಾಗಿರಬೇಕೇ ಹೊರತು ಯಾರೊ ಕೆಲವರು ರಚಿಸಿದ ಸರಕಾರೇತರ ಸಂಘಟನೆಯ ನಿಯಮಗಳಿಗೆ ಬದ್ಧರಾಗಿರಬೇಕು ಎಂದು ಹೇಳುವುದೇ ಸಂವಿಧಾನ ವಿರೋಧಿ ಕ್ರಮವಾಗಿದೆ. ಕೌಟುಂಬಿಕ ವಿವಾದಗಳನ್ನು ಬಗೆಹರಿಸಿಕೊಳ್ಳಲು ಈ ದೇಶದ ನ್ಯಾಯಾಲಯವನ್ನು ಸಮೀಪಿಸಬೇಡಿ ಎಂದರೆ ಈ ದೇಶದ ಸಂವಿಧಾನಕ್ಕೂ ಇಲ್ಲಿನ ಮುಸ್ಲಿಂ ಸಮುದ್ಾಯಕ್ಕೂ ಸಂಬಂಧವೂ ಇಲ್ಲ ಎಂದಂತಾಗುತ್ತದೆ. ಇಂತ ಸಂವಿಧಾನ ವಿರೋಧಿ ಆಲೋಚನೆಗಳನ್ನು ಎಲ್ಲರೂ ಮನದಾಳದಿಂದ ಕಿತ್ತೊಗೆಯಬೇಕು. ಇಂತಹ ಹೇಳಿಕೆಗಳಿಗಾಗಿ ಸರ್ಕಾರವೇ ಇವರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಕೇರಳದವರೊಬ್ಬರು ಹೇಳಿಕೆ ನೀಡಿದ್ದಾರೆ.

ಈ ದೇಶದಲ್ಲಿ ಅತ್ಯುತ್ತಮ ಸಂವಿಧಾನವಿದೆ; ಪ್ರಜಾಪ್ರಭುತ್ವವಿದೆ. ಸಮರ್ಥ ತೀರ್ಪು ನೀಡುವ ನ್ಯಾಯಾಲಯಗಳೂ, ನ್ಯಾಯಾಧೀಶರೂ ಇದ್ದಾರೆ. ಇದು ಯಾವುದೂ ಈ ದೇಶದಲ್ಲಿ ಸುಮಾರು ಹತ್ತು ಶತಮಾನಗಳಿಂದಲೂ ಬದುಕುತ್ತಿರುವ ಒಂದು ಸಮುದಾಯಕ್ಕೆ ಅನ್ವಯವಾಗಬಾರದು; ತಮ್ಮ ಮಹಿಳೆಯರು ತಲೆ ಎತ್ತದಂತೆ ಅನೇಕ ಧರ್ಮ ವಿರೋಧಿ ನಿಯಮಗಳನ್ನು ರೂಪಿಸಿ ಅವರನ್ನು ತಮ್ಮ ಕೈಯೊಳಗಿಟ್ಟು ಶೋಷಿಸುವ, ಹಿಂಸಿಸುವ ತಮ್ಮ ಅಧಿಕಾರವನ್ನು ಪ್ರಶ್ನಿಸುವ ಹಕ್ಕು ಯಾರಿಗೂ ಇಲ್ಲವೆನ್ನುವುದಾದರೆ ನಮ್ಮ ಆ ಹಕ್ಕನ್ನು ನ್ಯಾಯಾಲಯದ ಮುಖಾಂತರವೇ ನಾವು ಸಾಬೀತುಪಡಿಸಬೇಕಾಗುತ್ತದೆ.

ಇಂಗ್ಲೆಂಡ್, ಅಮೆರಿಕಾ ಮುಂತಾದ ದೇಶಗಳಲ್ಲಿ ಯಾವ ಶರಿಯತ್ ನಿಯಮ ಪಾಲಿಸಲಾಗುತ್ತದೆ? ಅಲ್ಲಿಗೆ ಹೋಗಿ ನೆಲೆಸಿರುವವರು ಅಲ್ಲಿನ ನಾಗರಿಕ ಸಂಹಿತೆ ಮತ್ತು ದಂಡಸಂಹಿತೆಗೆ ಅನುಸಾರವಾಗಿಯೇ ಬದುಕಬೇಕಾಗುತ್ತದೆ; ಹಾಗೆಯೇ ಬದುಕುತ್ತಾರೆ. ಕೊಲ್ಲಿ ರಾಷ್ಟ್ರಗಳ ರಾಜಕುಮಾರರು ಅಮೆರಿಕಾದ ಜೂಜುಕಟ್ಟೆಗಳಲ್ಲಿ ರಾತ್ರಿ ಬೆಳಗಿನವರೆಗೆ ಮಿಲಿಯಗಟ್ಟಲೆ ಡಾಲರ್ ಖರ್ಚು ಮಾಡಿ ಜುಗಾರಿ ಆಡುವಾಗ, ಬಿಳಿಹೆಣ್ಣುಗಳ ತೆಕ್ಕೆಯಲ್ಲಿ ಮಲಗಿರುವಾಗ, ಕೊಲ್ಲಿ ರಾಷ್ಟ್ರಗಳಲ್ಲಿ ಮನೆ ಕೆಲಸಕ್ಕೆಂದು ತೆರಳಿದ ನಮ್ಮ ದೇಶದ ಬಡ ಹೆಣ್ಣುಮಕ್ಕಳನ್ನು ಮನಬಂದಂತೆ ಉಪಯೋಗಿಸಿಕೊಳ್ಳುವಾಗ ಈ ಶರಿಯತ್ ನಿಯಮಗಳೆಲ್ಲ ಎಲ್ಲಿ ಅಡಗಿರುತ್ತವೆ?

ಮೌದೂದಿ ಬೋಧನೆಯಾದ 'ರಾಷ್ಟ್ರೀಯತೆ ಎಂದರೆ ಧರ್ಮದ ನೆಲೆಯಲ್ಲಿ ಒಂದಾಗಿರುವ ರಾಷ್ಟ್ರ.' 'ದೇವರ ರಾಜ್ಯದಲ್ಲಿ ದೇವರ ನಿಯಮವೇ ಹೊರತು ಪ್ರಜಾಸತ್ತೆ ಎಂಬುದಿರಬಾರದು.' 'ಜಾತ್ಯತೀತತೆ ಎಂಬುದೂ ಇರಬಾರದು' ಮುಂತಾದ ನಿಯಮಗಳನ್ನು ಜಾರಿಗೆ ತರುವುದು ಇವರ ಗುರಿಯಾಗಿದೆ, ತಮ್ಮ ಈ ಗುರಿಯನ್ನು ಈಡೇರಿಸಿಕೊಳ್ಳಲು ಎಷ್ಟು ಜನರನ್ನಾದರೂ ಕೊಲೆ ಮಾಡಲು ಹೇಸಲಾರರು. ಶುಕ್ರವಾರ ಮಸೀದಿಯೊಳಗೆ ಬಾಂಬ್ ಹಾಕಿ ಜನರನ್ನು ಕೊಲ್ಲುವುದೂ ಪಾಕಿಸ್ತಾನದಲ್ಲಿ ನಡೆಯುತ್ತಲೇ ಇದೆ. ಮತಾಂಧತೆ ಎಂಬುದು ಈ ಜನರನ್ನು ಕುರುಡಾಗಿಸಿದೆ. ಹೀಗಾಗಿಯೇ ಪಾಕಿಸ್ತಾನ ಇಂದು ಮೌದೂದಿ ಬೋಧನೆಯಿಂದಾಗಿ ವಿನಾಶದ ಅಂಚಿಗೆ ತಲುಪಿದೆ.

ವಾರೀಸು ಹಕ್ಕುಗಳ ಗೊಂದಲವನ್ನು ನಾನು ಈ ಹಿಂದೆ ಬರೆದಿದ್ದೆ, ಈಗ ಮತ್ತೊಮ್ಮೆ ಅದೇ ಮಾತನ್ನೇ ಉಚ್ಚರಿಸುತ್ತೇನೆ. ಈ ದೇಶದ ಎಲ್ಲ ನಾಗರಿಕರಿಗೂ ಅನ್ವಯವಾಗುವಂತಹ ಸಮಾನ ನಾಗರಿಕ ಸಂಹಿತೆಯೊಂದು ರೂಪುಗೊಳ್ಳಲೇಬೇಕು.

• ಸಾರಾ ಅಬೂಬಕ್ಕರ್

...ಈ ಹಾಳು ರಾಜಕಾರಣ ಬುಟ್ಟು ಬ್ಯಾರೆ ಮಾತಾಡ್ರಿರ್ಲ!

...ಹವಾದ ಎಳೆ ಬಿಸಿಲಿಗೆ ಮೈಯೊಡ್ಡಿದ ...ನಿಗೆ ಬೇಸಾಯದ ಒಕ್ಕಣೆ ಕೆಲಸ, ದನಗಳ ...ಯುಗಗಳು ಬೇಕಿದ್ದವೇ ಹೊರತು ರಾಜಕಾರಣದ ...ಕಿರಲಿಲ್ಲ. ಆದ್ದರಿಂದ ಸೀರನನ್ನು ಕುರಿತು, ... ಮಾಡಿದೇನ್ನ?" ಎಂದ.

...ವಬೇಕು. ನಮಿಗೇನು ತಾರೋಡಿದ್ದವೆ ಹುಲ್ಲು ..." ಎಂದ.

...ದ ಕಾಲವೆ ವಂಟೋಯ್ತಾ ಆದೆ ಕಣಮಾವ. ...ತರಿಗೆ ಒಂದು ಜಾಗದಲ್ಲಿ ಕಣ ಮಾಡಿಕೊಟ್ರು ಸುಮ್ಮನೆ ಮನೆ ಬಾಗಲಲ್ಲಿ ಕುಂತಿರೋಳಂತೆ. ಇವುರು ನೋಡಿಕಂಡಿಲ್ಲಾ ಆದ್ಯಾವಾಗ ಸತ್ಲೊ ಏನೊ ಗ್ವಾಡಿಗ್ವರಿಗಂಡು ವಂಟೋಗಿದ್ಲಂತೆ."

"ಸುಖವಾದ ಸಾವು ಬುಡು" ಎಂದ ಸೀರ.

"ಏ, ಯಾರಿಗೂ ಗೊತ್ತಾಗದಂತೆ, ಯಾರ ಕೈಲೂ ಬಾಯಿಗೆ ನೀರು ಬುಡಿಸಿಗಳದಂಗೆ ಸತ್ತುಬುಡುದು ಸುಖವಾದ ಸಾವೇನೂ ಮಾವ?"

"ಒಂಥರ ಅದೇ ಸರಿಕಂಡ್ಲೆ. ಈ ಕಾಲ್ದಲಿ ಯಾವ ಸೂಳೆಮಕ್ಕಳಿಗೂ ಹೇಳದಂಗೋಗದೆ ವಾಸಿ."

...ಬಿ ಉ ಸೀ ಮ ...ಕಟ್ಟೆಪುರಾಣ

▸ ಬಿ. ಚಂದ್ರೇಗೌಡ

"ನೀನು ಅಂಗೆ ಹೋಗಿವೆ ತಗೊ."

"ತಿಥಿಗೆ ಮರಿ ಏಟು ಕೂದಿದ್ರೆ, ಜುಮ್ಮಿ?" ಎಂದ ಕಾಳಮಾವ.

"ನಾಕು ಮರಿ ಕೂದಿದ್ರು ಕಣಮಾವ."

"ನಲವತ್ತು ಮನೆ ಊರಿಗೆ ನಾಕು ಮರಿ ಜಾಸ್ತಿನೆ ಆಯ್ತು."

"ನಲವತ್ತು ಮನೆಯಲ್ಲ ಕಣ ಮಾವ. ಐದೆ ಮನಿಯೋರಲ್ಲವೆ. ಊರು ಪಾರ್ಟಿಯಾಗ್ಯದೆ" ಎಂದ ಉಗ್ರಿ.

"ಅದ್ಯಾಕ್ ಪಾರ್ಟಿ ಮಾಡಿಕಂಡಿದ್ದವುಲ?"

"ಚನಾಗೇಳಿದೆ ನೀನು. ರಾಜ್ಯದಲ್ಲಿ ಮೂರು ಪಾರ್ಟಿ ಅಂತ ಇರುವಾಗ ಊರೊಂದಾಗಿರಕ್ಕಾದತೆ? ದಳ, ಕಾಂಗ್ರೆಸ್ಸು, ಬಿಜೆಪಿ ಅಂತ ಮೂರು ಪಾರ್ಟಿಯಾಗ್ಯವೆ. ಆ ಊರಲ್ಲಿ ಒಂದಿಷ್ಟು ಮನಿಯಾಳರ್‍ಯಲ್ಲ ಸೇರಿಕಂಡು ಬಿಜೆಪಿ ಅಂತ ಕುಣಿತವೆ. ಇನ್ನೊಂದಿಷ್ಟು 'ತೋಳುಬಲದೋರು ದಳ ದಳ ಅಂತ ದಡಿ ತಗಂಡು ಯಲ್ಲಾರು ಮ್ಯಾಲೂ ಹೋಯ್ತವೆ. ಯಾರ ತಂಟಿಗೂ ಹೋಗದಂಗೆ ಒಂತರಾ ಸೋತೋರಂಗಿರವ್ರಲ್ಲ ಕಾಂಗ್ರೆಸ್ಸು ಅಂತವೆ. ಹಿಂಗೆ ಮೂರು ಪಾರ್ಟಿಯಾಗ್ಯದೆ ಊರು."

"ಹುಚ್ಚಮ್ಮನ ಮನಿಯೋರು ಯಾವ ಪಾರ್ಟಿ?"

"ಅವುರು ಮದ್ಲು ದಳ ಅಂತಿದ್ರು, ಈಗ ಕಾಂಗ್ರೆಸು ಅಂತಿದ್ರು. ಅಂತೂ ತಿಥಿಗೆ ಬಂದೋರು ಐದೇ ಮನೆ. ಇನ್ನುಳದೋರ್‍ಯಲ್ಲ 'ಸುತ್ತಲಳ್ಳಿಯಿಂದ ಬಂದಿದ್ರು" ಎಂದ ಉಗ್ರಿ.

"ಕೂಳಾಕಿ ಏಟೇವೊತ್ತಾದ್ರು ಕಾಗೆ ಬರಲಿಲ್ಲ ಕಣಮಾವ. ಆಗ ಹುಚ್ಚಮ್ಮನ ಮಮ್ಮಗಳು ಬೈಯ್ಯಕ್ಕೆ ಸುರು ಮಾಡಿದ್ಲು, ನೀನು ಬದುಕಿದ್ದಾಗ್ಲು ಅಂಗೆ ಹಟ ಮಾಡತಿದ್ದೆ ಈಗ್ಲು ಅಂಗೆ ಹಟ ಮಾಡ್ತಿಯಲ್ಲ ಬರಕ್ಕೇನಾಗ್ಯದೆ ಅಂದ್ಲು. ಆಗ ಕಾಗೆ ಬಂದು ವಡೆ ಕಚಗಂಡೋಯ್ತು, ಇನ್ನಳದಕಾಗ್ಯಲ್ಲ ಬರ್‍ಲೆ ಬಂದೊ ಅತ್ತಗೆ" ಎಂದು ಜುಮ್ಮಿ ಹುಚ್ಚಮ್ಮ ಕಾಗೆಯಾಗಿ ಬಂದು ತನ್ನ ಗುದ್ದಿನ ಮೇಲಿಕ್ಕಿದ್ದ ಎಡೆ ಪದಾರ್ಥ ಸ್ವೀಕರಿಸಿದ ಕತೆಯನ್ನು ಪವಾಡದಂತೆ ಹೇಳುತ್ತಿರುವಾಗ ಕಾಣಿಸಿಕೊಂಡ ವಾಟಿಸ್ಲೆ,

"ಹುಚ್ಚಮ್ಮನ ತಿಥಿಲಿ ಮಾಂಸ ಸರಿಯಾಗಾಕಲಿಲ್ಲ ಕಣಕ್ಕ" ಎಂದ.

"ನೀನು ಹೋಗಿದ್ದೇನ್ನ" ಎಂದ ಕಾಳಮಾವ.

"ಅವುನೋಗದೆಯಿದ್ದನೆ? ದ್ವನ್ನೆಲಿ ಬಾಡು ತುಂಬಿಕಂಡು ಆಲ್ದಮರದ ಕ್ಯಳಗಡೆ ಕುತಗಂಡು, ಬ್ರಾಂದಿ ಕುಡಕಂಡು, ರಾಜಕೀಯ ಮಾತಾಡನ ಅಂತ ಬಂದಿದ್ದ. ಮದ್ಲೆ ಆ ಊರೋರು ಬಾಡ ಒಕ್ಕರು. ಉಳದದ್ದನ್ಯಲ್ಲ ಮನಿಗೆ ತಗಂಡೋಗೊ ಅಂಥೋರು. ಇವುನಿಗೆ ದ್ವನೆಲಿ ಬಾಡು ತುಂಬಿ ಕೊಟ್ಟರೆ ಮಾವ? ಅದ್ಕೆ ಹಿಕ್ಕದೋಟ ತಿಂದು ಎದ್ದು ಬಂದ" ಎಂದು ಜುಮ್ಮಿ ನಕ್ಕಳು.

"ನಾನು ಬೇಗ ಬಂದಿದ್ಕೆ ಒಂದು ಕಾರಣದೆ ಕಣಕ್ಕ. ಆ ಊರು ಮಾಂಸದ ಅಡಿಗೆ ಮಾಡಿದ್ದ ಟೈಮಲ್ಲಿ ಒಂಥರಾ ಘಾಸಿಯಾಗಿರತದೆ. ಆಗ ಸನ್ನಿವೇಶ ಭಾಳ ಸೂಕ್ಷ್ಮವಾಗಿರತದೆ. ಕಳೆದ ಮೇ ತಿಂಗಳಲ್ಲಿ ಏನಾಯ್ತು ಗೊತ್ತ ಅಲ್ಲಿ?"

"ನೀನೇಳಿದ್ರೆ ಗೊತ್ತಾಯ್ತದಪ್ಪ."

"ಆ ಊರು ಮಾಂಸ ತಿನ್ನಕ್ಕೆ ಅಂತ ಒಂದು ದೇವರು ಮಡಿಕಂಡದೆ. ದೇವರೊಕ್ಕಲತ್ರ ದುಡ್ಡೆತ್ತಿ ಮೂರು ಕ್ವಿಂಟಾಲ್ ಮಟನ್ ತಂದು ಪೂರ ಮಾಡಿದ್ರು. ಇನ್ನೇನು ಮದುಲ್ನೆ ಪಂಕ್ತಿ ಉಂಡು ಕೈ ತ್ವಳಿಯಕ್ಕೆ ಏಳೋ ಟೈಮಲ್ಲಿ ಉಂಡೋರಿಗೂ, ಯಲೆ ಎತ್ತೋರಿಗೂ ಮಾತಿಗೆ ಮಾತು ಬ್ಯಳಿತು. 'ತಿಂದುಬುಟ್ಟು ಎದ್ದೋಯ್ತಿಯಲ್ಲ ಯಲೆಯ ನಿಮ್ಮಪ್ಪ ಎತ್ತನೇನ್ನ' ಅಂತ ವಬ್ಬಂದ. ಅದ್ಕೆ ಆ ಹುಡುಗ 'ನಿಮ್ಮಪ್ಪನ ಕೈಲಿ ಎತ್ತುಸು' ಅಂದ. ಬಿತ್ತು ಅವ್ನುನ ಕಸ್ಸಿಗೊಂದು. ಆ ಕೂಡ್ಲೆ ಹತ್ತಿಗತ್ತಪ್ಪ ಟಿಪ್ಪು ಸುಲ್ತಾನ್ ಸೈನ್ಯಕ್ಕೂ, ಮದಕರಿ ಸೈನ್ಯಕ್ಕೂ ಯುದ್ಧ ನ್ವಡದಂಗಾಗೋಯ್ತು, ಸೌದೆ ತುಂಡು ಸ್ವಾಗೆದಡಿ ಸದ್ದು ಮಾಡ್ತಯಿದ್ರೆ, ಉಣ್ಣಕ್ಕೆ ಬಂದೋರು ಹೇರಿಕಿತ್ತ. ಯಾವನೊ ಬೆಳ್ಳೂರು ಪೋಲಿಸ್ ಸ್ಟೇಷನಿಗೆ ಫೋನ್ ಮಾಡಿದ. ಪೊಲೀಸ್ ವ್ಯಾನ್ ಬಂದು ಯಲ್ಲಾರ್‍ನು ತುಂಬಿಕಂಡೋಯ್ತು. ಆಗ ಹೆಂಗಸರ್‍ಯಲ್ಲ ಏನು ಮಾಡಿದ್ರು ಗೊತ್ತೆ?"

"ಹೋಗಿ ಗಂಡದೀರನ್ಯಲ್ಲ ಬುಡಿಸಿಗಂಡು ಬಂದ್ರು ಅನ್ನು."

"ಗಂಡದೀರ ಬುಡಿಸಿಗಂಡು ಬರಕ್ಕೆ ಅವ್ರುರೇನು ಸತಿ ಸಾವಿತ್ರಿಗಳು ಅನ್ನಕಂಡ್ಯಾ? ಮನೆಲಿದ್ದ ಬೋಸಿ ದಬರಿನ್ಯಲ್ಲ ತಗಂಡೋಗಿ ಉಳುದ ಬಳದ ಬಾಡು, ಸಾರು, ತಾಳದನ್ಯಲ್ಲ ತುಂಬಿಕಂಡು ಓಡಿಬಂದ್ರು."

"ಅವುರು ಕಣಯ್ಯ ಹೆಂಗಸರೂ ಅಂದ್ರೆ."

"ಹೆಂಗಸರೂ ಅಂದ್ರೆ ಅಂತಿಂಥ ಹೆಂಗಸರಲ್ಲ, ಗಂಡುಸರಾರೂ ಇಲ್ಲ ಅಂದ್ರೆ ಅವುರೆ ಮರಿಕೂದು, ಚರ್ಮ ಸುಲ್ದು ಪಾಲಾಕ್ತರೆ ಕಣ ದ್ವಡಪ್ಪ. ಅಂಥೋರು ಮಾಡಿ ಮಡಿಗಿರೊ ಬಾಡಿನ ಸಾರ ಬುಟ್ಟರೇ? ಆ ಗಲಾಟಿಯಾದೇಟಿಗೆ ಪೂಜಾರಿ ಮ್ಯಾಲೆ ದೇವರು ಬತ್ತು. ಅದ್ಯಂತ ದೇವುರು ಅಂದ್ರೆ ಅಲ್ಲಿರೊ ಜನಕೂ ಅದುಕ್ಕೂ ಅಂತ ವ್ಯತ್ಯಾಸವೇಯಿಲ್ಲ. ಪೂಜಾರಪ್ಪನ ಮ್ಯಾಲೆ ಬಂದ ದೇವುರು ಏನೇಳತಪ್ಪ ಅಂದ್ರೇ 'ನನ್ನ ಪೂರಿನಲ್ಲಿ ಗಲಾಟಿಗೆ ಕಾರಣರಾದ ಜನ ಯಾರು ಅಂತ ಗೊತ್ತದೆ. ಆ ಪೈಕಿ ಐದು ಮನಿಯೋರಿಗೆ ನಾನು ಗಂಧ ಹಚ್ಚದಿಲ್ಲ, ಪ್ರಸಾದ ಕೊಡದಿಲ್ಲ" ಅಂತು. ಅವತ್ತಿಂದ ಐದೊಕ್ಲು ಬ್ಯಾರೆ, ಊರೆ ಬ್ಯಾರೆ. ಅಂಗಾಗಿ ಹುಚ್ಚಮ್ಮನ ತಿತಿಗೆ ಐದು ಮನಿಯೋರೆ ಬಂದಿದ್ದು."

"ಓ ಅಂಗನ್ನು ಮತ್ತೆ ನಾನು ರಾಜಕಾರಣಕ್ಕಾಗಿ ಊರು ಪಾರ್ಟಿ ಬಿದ್ದದೆ ಅನ್ನಕಂಡಿದ್ದೆ ಕಣೊ" ಎಂದ ಉಗ್ರಿ.

"ರಾಜಕಾರಣನೂ ಸೇರಿಕಂಡದೆ ಕಣೊ ಉಗ್ರಿ. ಇವತ್ತಿನ ದಿವಸದಲ್ಲಿ ಊರಲ್ಲಿ ಕಾಲ ಮಾಡಬೇಕಾದ್ರೆ ಯಾವುದಾರ ಒಂದು ಪಾರ್ಟಿಲಿ ಗುರುತಿಸಿಗಳ್ಳೇಬೇಕು. ಅದ್ಕೆ ಈ ಐದು ಮನೆ ಕಾಂಗ್ರೆಸ್ ಪಾರ್ಟಿಲವೆ, ಪೂರ್ ಫೆಲೋಸ್!"



...ದ ಬವುಣೆನಾರ ತಪ್ಪತದೆ" ಎಂದ ಉಗ್ರಿ.

...ವುದೊ ಒಂದೂರಲ್ಲಿ ಪಂಚಾತಿಯೋರೆ ...ಟ್ಟಿದ್ರಂತೆ ಕಂಡ್ರ. ಉಚ್ಚಳ್ಳು ಬಡದೋರು, ಗುನಿ ...ರ್‍ಯಲ್ಲ ಹೊಟ್ಟೆ ಕಣದಲ್ಲೇ ಬುಟ್ಕೊಗಿದ್ರಂತೆ. ...ಕಣವೇ ಹಾಳಾಯ್ತಂತೆ. ಆಗೊ ಅಂಗಾಯ್ತದೆ" ...ರ.

...ಕಣೊ. ಅವ್ವೊಂತರ ಸಾರ್ವಜನಿಕರಿಗೆ ...ಕ್ಕಸ್ ಮನೆಯಂಗಾಯ್ತವೆ. ಜನಗಳಿಗೆ ಇದು ... ನಮಿಗೆ ಸೇರಿದ್ದು ಅನ್ನೊ. ತಿಳಿವಳಿಕೆ ...ದ್ರೆ ಅಂಗೆ ಆಗದು. ಇಂತ ಜನಗಳಿಗೆ ಕಣ ...ತು" ಎಂದ ಉಗ್ರಿ ತನ್ನ ಸಲಹೆಗೆ ತಾನೇ ...

...ಗ ಕಣ ಮಾಡವು ಅಂದ್ರೆ ಯಂಗಿರದ್ನ, ...ನೆ ಬ್ಯಾಡ ಅಂಗೆ ಮನಿಕಬವುದಿತ್ತು."

... ಚೊಳಸುಂದ್ರತ್ತ ಅಂತದೇ ಒಂದು ಕಣ ನೋಡಿದೆ ... ಮ್ಯದೆನೂ ಅಂಗೆ ಹಾಕಿದ್ರು ಕಣನೂ. ಅಂಗೆ ..."

... ಚೊಳಸುಂದ್ರಗ್ಯಾಕೋಗಿದ್ದೆ ಜುಮ್ಮಿ?"

...ಚ್ಚಮ್ಮನ ತ್ರಿಥಿಗೋಗಿದ್ದೆ ಕಣಮಾವ. ಆಗ ...

...ರೆ ಹುಚ್ಚಮ್ಮ ತೀರೋದ್ಲೆ?"

...ಕ್ಕಾವಾಗ್ಲೊ ಸಾಯಬೇಕಾಗಿದ್ದೋಳು ಈಗ ...

...ಗಿರಬೇಕು."

... ಆಗ಼್ೆ ಜೇರ್ಣಾಗಿಬುಟ್ಟಿದ್ಲು ಕಣಮಾವ.

...ಪ್ರೇಮ ಕುರಿತು ಸತ್ಯ.....'

... ಆಡೆನ್‌ಗೆ ಸಿಗಬೇಕಾದಷ್ಟು ಖ್ಯಾತಿ, ಸಂಪತ್ತು ಸಿಗಲಿಲ್ಲ. ನಾವೆಲ್ಲ ...ಗಿದ್ದಾಗ ಈ ಆಡೆನ್ ಮತ್ತು ಮೆಕ್‌ನೀಸ್‌ನ ತಮಾಷೆಯ, ತೀವ್ರ ..., ಸಂಭಾಷಣೆಯಂಥ ಕವನಗಳನ್ನು ಓದಿಕೊಂಡು ನಲಿಯುತ್ತಿದ್ದೆವು; ...ಮ್ಮವನೇ ಅನ್ನಿಸುತ್ತಿತ್ತು, ಹಾಗೆಯೇ ಕವಿ ಏಟ್ಸ್ ತೀರಿಕೊಂಡಾಗ ಈತ ...ಕವನ ಮೋಹಕವಾಗಿತ್ತು; ಐರ್ಲೆಂಡ್, ಮದ್ಯಪಾನ, ಮಂಜು, ಚಳಿಯ ... ಏಟ್ಸ್‌ನ ಬೆಂಕಿಯಂಥ ಪ್ರೀತಿ ಮತ್ತು ಹತಾಶೆಯನ್ನು ಇಲ್ಲಿ ಈತ ...ದ್ದ, ಎದೆ ಒಡೆಯುವಂತೆ ಮಾತಾಡಿದ್ದ.

...ಡೆನ್ ತೀರಿಕೊಂಡು ಅನೇಕ ವರ್ಷಗಳಾದವು. ಮೊನ್ನೆ ಈತನ ...ವನ್ನು ಒಂದು ಚಲನಚಿತ್ರದಲ್ಲಿ ಓದಲಾಯಿತು. ಹೂ ಗ್ರಾಂಟ್



ಎಂಬಾತ ಆಡೆನ್‌ನ ಹತ್ತು ಪದ್ಯಗಳನ್ನು ಓದಿದ. ಆ ಪದ್ಯಗಳ ಹೆಸರು, 'ಪ್ರೇಮದ ಬಗ್ಗೆ ನನಗೆ ಸತ್ಯ ಹೇಳು'. ಈ ಕವನಗಳು ಈಗ ಇಂಗ್ಲೆಂಡಿನಲ್ಲಿ ಎಷ್ಟು ಪ್ರಸಿದ್ಧ ಅಂದರೆ ಸಂಕಲನ ಪುಸ್ತಕದ ಅಂಗಡಿಯಲ್ಲಿ ಕಾಣಿಸಿದೊಡನೆ ಓದುಗರು ಕೊಂಡು ಕಣ್ಮರೆಯಾಗುತ್ತಾರೆ. ನಾವು ಚಿಕ್ಕವರಾಗಿದ್ದಾಗ ಆಡೆನ್‌ನನ್ನು ಓದಿ ಪುಲಕಗೊಂಡಂತೆಯೇ ಆಡೆನ್ ಪ್ರೇಮದ ಬಗ್ಗೆ ಕಂಡ (ಅಥವಾ ಹುಡುಕಿದ) ಸತ್ಯಗಳನ್ನು ಸವಿಯುತ್ತಾರೆ......



"ಮೈಲಿ ಮುಖದ ನನ್ನ ಚೆಲುವೆ!"


ಶಿಲ್ಪಿಯೇ ಅಲ್ಲದವನು ಚಾಣ ಹಿಡಿದು ಕಲ್ಲು ಕುಟ್ಟತೊಡಗಿದರೆ... ಹಾಗೆ, ಮೊನ್ನೆ ಒಬ್ಬನ ಕತೆ ಓದಿದೆ. ಆಕೆ ಮೈಲಿಮುಖದ ಹುಡುಗಿ. ಎಲ್ಲ ಸರಿ, ಮೈಮುಖದವಳು. ಈ ಮೂರ್ಖ ಸಾಹಿತಿಗೆ ಮೈಲಿ ಮುಖದವಳು, ಕಪ್ಪಗಿರುವವಳು, ಕುಂಟಿ ಅಥವಾ ಕುರುಡಿಯಾಗಿರುವವಳು ಖಂಡಿತ ಕುರೂಪಿ. ಇದನ್ನು ಓದುವ ಅನೇಕರಿಗೆ ಹಾಗೇ ಅನ್ನಿಸಬಹುದು. ಆದರೆ ಅವರೆಲ್ಲರ ತಿಳಿವಳಿಕೆ ತಪ್ಪು. ಸೌಂದರ್ಯ ಉಕ್ಕುವುದು ಆತ್ಮದಿಂದ, ಒಳ್ಳೆಯ ಗುಣದಿಂದ, ಅದೃಶ್ಯಮೂಲಗಳಿಂದ-ಎಂದು ಹೇಳುವವನೂ ಮೂರ್ಖ. ಮೊದಲನೆಯದಾಗಿ ಸೌಂದರ್ಯ ದೇಹದ್ದು; ಅದರ ಹತ್ತಿಕ್ಕಲಾರದ ಶಕ್ತಿಯಿಂದ, ಆರೋಗ್ಯದಿಂದ, ಜೀವ ಮೂಡಿಸುವ ಮಹಾನ್ ಪ್ರಭೆಯಿಂದ ಬಂದದ್ದು. ಆದ್ದರಿಂದ ಕಪ್ಪಗಿರುವವಳು ನಿಮ್ಮ ಹೃದಯವನ್ನು ತಲ್ಲಣಿಸಬಲ್ಲ ಕಂಪಿನಿಂದ ಅಥವಾ ಕಳೆಯಿಂದ ತುಂಬಿರಬಹುದು; ಮೈಲಿಮುಖದ ಒಂದೊಂದು ಗುಳಿಯೂ ಮಾನಸಸರೋವರದಂತೆ, ನಿನ್ನ ಬದುಕಿನ ಕೊನೆಯ ನಿಲ್ದಾಣದಂತೆ, ನಿನ್ನ ಜೀವಕ್ಕಿರುವ ಒಂದೇಒಂದು ಆಸರೆಯಂತೆ ಕಾಣಬಹುದು. ಹೆಣ್ಣು ಮೈಲಿಗಳಿದ್ದರೂ ಮಾಯೆ ಉಕ್ಕಿಸಬಹುದು, ಕುರುಡಿಯಾಗಿದ್ದರೂ ಸಹಸ್ರ ಕಣ್ಣುಗಳಿಂದ ನಿಮ್ಮನ್ನು ಮುಗ್ಧನನ್ನಾಗಿಸಬಹುದು. ಶೇಕ್ಸ್‌ಪಿಯರ್‌ನ ಹೆಣ್ಣು ಕಪ್ಪುಹುಡುಗಿ, ಒಥೆಲೋನ ಡೆಸ್ಡಿಮೋನಾ ಬಿಳಿಯ ಹುಡುಗಿ. ಅವೆಲ್ಲ ಅವರ ಗಮನಕ್ಕೆ ಒಮ್ಮೆಯೂ ಬರಲಿಲ್ಲ.

ಸಾಹಿತಿಯೆಂದರೆ ಮೈಲಿಮುಖದಾಚೆ ನೋಡುವ ವಕ್ರದೃಷ್ಟಿಯ ಕಪಿಯೆಂದು ತಿಳಿಯಬೇಡಿ. ಯಾವುದೇ ಪೂರ್ವಗ್ರಹವಿಲ್ಲದೆ ಸ್ಪಂದಿಸುವ ಮನುಷ್ಯ, ಆದ್ದರಿಂದಲೇ ಆತ ಹೆಚ್ಚು ಸೂಕ್ಷ್ಮನಾದ, ಎಲ್ಲರ ಮನಸ್ಸನ್ನು ಬಿಂಬಿಸುವ ಮನುಷ್ಯ.

ಈಚೆಗೆ ಐನ್‌ಸ್ಟೀನ್ ಎಂಬ ಸುಪ್ರಸಿದ್ಧ ಭೌತಶಾಸ್ತ್ರದ ಜೀನಿಯಸ್‌ನ ಪ್ರೇಮಪ್ರಕರಣದ ಬಗ್ಗೆ ಚಿಕ್ಕ ಟಿಪ್ಪಣಿ ಓದಿದೆ. ಐನ್‌ಸ್ಟೀನ್ ವಿಜ್ಞಾನಿ. ಆದ್ದರಿಂದಲೇ ಗಾಂಧಿಯಂತೆ, ನೆರೂಡನಂತೆ, ಬ್ರಾಂಡೋನಂತೆ, ಗಯಟೆಯಂತೆ ಸೂಕ್ಷ್ಮಮನಸ್ಸಿನ ಪ್ರೇಮಿ ಕೂಡ. ಆತ ಯೌವನದಲ್ಲಿ ತನ್ನ ಕ್ಲಾಸಿನಲ್ಲಿ ಕಂಡು ಮಾತಾಡಿಸಿದ್ದ ಸ್ನೇಹಿತೆ ಮಿಲೇವಾ ಮಾರಿಕ್; ಐನ್‌ಸ್ಟೀನ್ ತನ್ನ ಪ್ರಯೋಗಶಾಲೆಯಲ್ಲಿ ಕಾಲ ಕಳೆಯತೊಡಗಿದಂತೆ ಈ ಹುಡುಗಿಯ ಮಾಂತ್ರಿಕತೆ ಮುತ್ತಿತು. ಆಕೆ ಇಲ್ಲದೆ ತನ್ನ ಕೆಲಸ ಸಾಗಲಾರದೆಂದು, ತನ್ನ ಸಂಶೋಧನೆ ನಿರರ್ಥಕವೆಂದು ಅನ್ನಿಸಿತು. ಆಗಿನ ಯುಗೋಸ್ಲಾವಿಯಾದ, ಈಗಿನ ಸರ್ಬಿಯಾದ ಈ ಮುದ್ದಿನ ಹುಡುಗಿ ಮಿಲೇವಾ ಮಾರಿಕ್‌ಗೆ ಪತ್ರ ಬರೆದ. ಆಗ ಐನ್‌ಸ್ಟೀನ್‌ಗೆ 20 ವರ್ಷ; 'ನನ್ನ ಪುಸ್ಸೀಕ್ಯಾಟ್, ನೀನಿಲ್ಲದೆ ನನಗೆ ತುಂಬ ಕಷ್ಟ! ಇಲ್ಲಿ ನನ್ನೊಂದಿಗೆ ನೀನು ಸ್ವಲ್ಪ ಕಾಲವಾದರೂ ಇರಲು ಸಾಧ್ಯವಿದ್ದಿದ್ದರೆ! ನಮ್ಮಿಬ್ಬರ ಕೆಪ್ಪು ಆತ್ಮಗಳು ನಮಗೆ ಗೊತ್ತಾಗುವಂತೆ ಯಾರಿಗೂ ಗೊತ್ತಾಗುವುದಿಲ್ಲ, ನಾವಿಬ್ಬರೂ ಕಾಫಿ ಕುಡಿಯುತ್ತಾ, ಚಟ್ನಿ, ಸ್ಯಾಂಡ್ ವಿಚ್, ತಿಂದಿ ಇತ್ಯಾದಿ ತಿನ್ನುತ್ತ ಎಷ್ಟು ಸುಖವಾಗಿರುತ್ತೇನೆ!" (ಇಲ್ಲಿ 'ಇತ್ಯಾದಿ' ಅಂದರೆ ತಿನ್ನುವ ಯಾವ ಪದಾರ್ಥ ಎಂದು ಐನ್‌ಸ್ಟೀನ್ ವಿವರಿಸಿಲ್ಲ!) ಹಾಗೆಯೇ ಮುಂದುವರಿದು, "ಬೇಗ ಬಂದುಬಿಡು, ಬರುವಾಗ ನಿನ್ನ ನೀಲಿ ಮೇಲುಕೋಟು ತೆಗೆದುಕೊಂಡು ಬಾ, ಆ ಕೋಟನಲ್ಲಿ ಇಬ್ಬರೂ ಅವಿತುಕೊಂಡುಬಿಡೋಣ!"

ನಿಜವಾದ ಕವಿಗೂ ವಿಜ್ಞಾನಿಗೂ ವ್ಯತ್ಯಾಸವಿದೆಯೆ? ಮಿಲೇವಾ ಮಾರಿಕ್‌ಳ ಮೊಡವೆ ಅಥವಾ ಮೈಲಿ ಈ ವಿಜ್ಞಾನಿಗೆ ಕಂಡೀತೆ?

ಆಗಸ್ಟ್ 31, 1994



ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಮಲ್ಲಿಗೆ ಹೂವು

"ಇವೆಲ್ಲ ರೇಜಿಗೆ ಕೆಲಸ. ರಾಜರ ಕಾಲವೇ ಚೆನ್ನಾಗಿತ್ತು ಅವನ ಮಗನಾಗಿ ಅಧಿಕೃತ ಹೆಂಡತಿ ಹೊಟ್ಟೇಲಿ ಹುಟ್ಟಿದರೆ ಸಾಕಾಗಿತ್ತು. ಮುಂದೆ ರಾಜನಾಗಿ ಮೆರೆಯೋ ಅವಕಾಶ ತಾನಾಗಿಯೇ ಬರುತ್ತಿತ್ತು. ಸಕಲ ಸೌಲಭ್ಯಗಳನ್ನು ಅನುಭವಿಸಬಹುದಾಗಿತ್ತು. ಆ ಕಾಲ ಹೋಗಿ ಈ ಕಾಲ ಬಂತಲ್ಲ ಪ್ರಜಾಪ್ರಭುತ್ವ ಅನ್ನೋ ಕಾಲ. ಈಗ ತಾನೆ ಏನು ಬದಲಾಗಿರೋದು. ರಾಜಕಾರಣಿ ವಂಶಸ್ಥರೇ ರಾಜಕಾರಣಿಗಳಾಗಿ ಮೆರೀತಿಲ್ವ ಅನ್ನಬಹುದು. ಇದು ನಿಜ. ಆದರೆ ಆಗಾಗ್ಗೆ ಚುನಾವಣೆ ಅಂತ ಒಂದು ಬರುತ್ತಲ್ಲಾ, ಅದನ್ನು ಎದುರಿಸುವ ಅನಿವಾರ್ಯತೆ ಬರುತ್ತೆ... ಇದರಿಂದ ಭಾರೀ ಅನ್ಯಾಯ ಏನೂ ಆಗುವುದಿಲ್ಲ. ಮತದಾರ ಮಹಾಪ್ರಭುವೂ ರಾಜಕಾರಣಿ ವಂಶಸ್ಥರನ್ನೇ ಆಯ್ಕೆ ಮಾಡುತ್ತಾನೆ. ದೇಶವನ್ನೇ ಕೊಳ್ಳೆ ಹೊಡೆದಿದ್ದರೂ ಜನತಾ ನ್ಯಾಯಾಲಯದಲ್ಲಿ ತೀರ್ಮಾನ ಆಗಲಿ ಎನ್ನಬಹುದು. ಅಧಿಕೃತ ದಾಖಲೆಗಳ ಮೂಲಕ ಪ್ರತಿಪಾದಿಸಿದ ಆಪಾದನೆಗಳನ್ನು ಸುಳ್ಳು ಆರೋಪಗಳೆಂದು ಸಾಧಿಸಬಹುದು ಎಂದು ಕೆಲವರಿಗೆ ಭಾಸವಾಗಬಹುದು. ಆದರೂ....

ನ್ಯಾಯಾಲಯ ಎಂದರೆ ನ್ಯಾಯದೇವತೆ ಕುಂತಿರೋ ಜಾಗ ತಾನೆ. ದೇವತೆ ಅಂದಮೇಲೆ ಮುಗೀತು. ನ್ಯಾಯದೇವತೆಯೋ, ಅನ್ಯಾಯ ದೇವತೆಯೋ ಆಕೆಗೆ ಒಪ್ಪಿಸಬೇಕಾದ್ದನ್ನು ಒಪ್ಪಿಸಲೇಬೇಕು. ಆಗ ಅವಳು ಭಕ್ತರ ಪರವಾಗಿ ಕಣ್ಣು ತೆರೀತಾಳೆ ಅನ್ನೋದು ಎಲ್ಲರಿಗೂ ತಿಳಿದಿರೋದೇಯ. ಇನ್ನು ಜನತಾ ನ್ಯಾಯಾಲಯ ಅಂದಮೇಲೆ ಸಾಮಾನ್ಯವಾ. ನ್ಯಾಯದೇವತೆಗೆ ಅದೇನು ಸಲ್ಲಿಸಬೇಕೋ ಅದನ್ನ ಸಲ್ಲಿಸಲೇಬೇಕು.

ಜನತಾ ನ್ಯಾಯಾಲಯದಲ್ಲಿ ನ್ಯಾಯದೇವತೆ ಅಂದರೆ ಮತದಾರ ಮಹಾಪ್ರಭು ತಾನೆ. ಅವರನ್ನು ತೃಪ್ತಿಗೊಳಿಸುವ ಕಾಣಿಕೆಯನ್ನು ನೀಡಬೇಕಾಯ್ತದೆ. ಯಡ್ಯೂರಪ್ಪನೋರ್ನೆ ತಗಳ್ಳಿ. ತರಾತುರೀಲಿ ಸೀರೆ ಹಂಚಿದ್ರು. ನ್ಯಾಯದೇವತೆ ಅದನ್ನು ಉಟ್ಕೊಂಡು ಮತ ಹಾಕಿದ್ಲೊ ಇಲ್ವೊ. ಸೀರೆ ಹಂಚುವುದು ಲಾಭದಾಯಕ ಉದ್ಯಮ ಅನ್ನೊ ತಿಳುವಳಿಕೆ ನೀಡಿದ್ದಂತೂ ಸತ್ಯ. ನ್ಯಾಯದೇವತೆಗೆ 'ಸೀರೆ ಸೇವೆ' ಅಂತಹವು ಚುನಾವಣೆ ಸಮಯದಲ್ಲಿ ಎಲ್ಲಾ ಕಡೇನೂ ನಡೀತವೆ. ತಮಿಳುನಾಡಿನಲ್ಲೂ ಇದೇ ಕತೆ. ಅಲ್ಲಿ ಇದು ಚುನಾವಣೆ ವರ್ಷ ಅಲ್ವ. ಸೀರೆ ಹಂಚಬೇಕು. ಸುಮ್‌ಸುಮ್ನೆ ಹಂಚಾಕಾಗಲ್ಲ. ಅದಕ್ಕೆ ಕಾರಣ ಅಂತ ಒಂದು ಬೇಕು. ಯಡ್ಯೂರಪ್ಪನೋರ್ಗೆ 'ಭಾಗ್ಯಲಕ್ಷ್ಮಿ' ದೊರಕಿದಳು. ಕರುಣಾನಿಧಿಯವರ ಆಪತ್ ಬಾಂಧವನಂತೆ 'ಪೊಂಗಲ್' ಬಂದದೆ. ಅದು ತಮಿಳರಿಗೆ ಭಾರಿ ಹಬ್ಬ ಅಲ್ವಾ. ಅದರ ನೆಪ ಹಿಡ್ಕೊಂಡ್ರು. ಕರ್ನಾಟಕದಲ್ಲಿ ಭಾಗ್ಯಲಕ್ಷ್ಮಿಯರಿಗೆ ಮಾತ್ರ ಸೀರೆ ಹಂಚಿದ್ರು. ಭಾಗ್ಯಲಕ್ಷ್ಮಿ ಭಾಗ್ಯ ಇಲ್ಲದೋರು ಏನು ಪಾಪ ಮಾಡಿದ್ರು. ಅವರಿಗೂ ಹಂಚಾನ ಅಂತಾವ ಬಡವರಿಗೆಲ್ಲ ಧೋತಿ, ಸೀರೆ ಹಂಚ್ತಾ ಬದ್ದವ್ರೆ.

ಸೀರೆ ಧೋತಿಗಳ ಹಂಚಿಕೆಗೇ ಸೀಮಿತವಾಗಿಲ್ಲ ನ್ಯಾಯದೇವತೆಯ 'ಹರಕೆ ಚಾಮರಾಜನಗರದಲ್ಲಿ ಈಗ ಗಾರೆಕೆಲಸದವರಿಗೇ ಬರ ಅಂತೆ. ಇದೇನಯ್ಯ ಇದು ಇದೆಂಗಾಯ್ತು ಅಂದ್ರೆ... ಎಲ್ಲ ತಮಿಳುನಾಡಿಗೆ ಹಾರವ್ರಂತೆ. ಅಲ್ಲಿ ತರಾತುರೀಲಿ ಜನತಾ ಮನೆಗಳನ್ನು ಕಟ್ಟಿಸ್ತಾವ್ರಂತೆ. ಹಿಂಗಾಗಿ ಇಲ್ಲಿ ಇಟ್ಟಿಗೆಗಳೂ ಸಿಗುತ್ತಿಲ್ಲವಂತೆ. 'ಇಟ್ಟಿಗೆಗೆ ಯಾಕ್ರಿ ಬರ ಬಂತು' ಅಂತ ಕೇಳಿದ್ರೆ 'ತಮಿಳುನಾಡಿನ ಆರ್ಡರ್ ಪೂರೈಸೋಕೆ ಆಗ್ತಿಲ್ಲ' ಅಂತಾರಂತೆ. ಹೆಂಗೋ ಹಿಂಗಾದರೂ ಬಡವರಿಗೆ ಮನೆ ಅಂತ ಸಿಗ್ತಲ್ಲ ಬಿಡಿ. ಅಲ್ಲಿ ತಮಿಳುನಾಡು ಸರ್ಕಾರ ಮೊದಲಿನಿಂದಲೂ ಬಡವರಿಗೆ ವಸತಿ ನಿರ್ಮಿಸುವ ಕಾರ್ಯ ನೆರವೇರಿಸಬಾರದಿತ್ತಾ ಅಂದ್ರೆ ಚುನಾವಣೆಯಾವಾಗ್ಲೂ ಇರಲ್ವಲ್ಲ ಅಂತಾರಂತೆ! ಇನ್ನೊಂದು ಗುಟ್ಟು ಇದೆಯಂತೆ. ಜನ ಅನ್ನೋದು ವಸಿ ದಿಸ ಕಳುದ್ರೆ ಯಾರು ಕಟ್ಟಿಸಿಕೊಟ್ಟೋರು ಅನ್ನೋದ್ನೆ ಮರತು ಬಿಡುತ್ತಂತೆ. ಕಬ್ಬಿಣ ಕಾದಾಗ್ಲೆ ಬಡೀಬೇಕು, ಚುನಾವಣೆ ಬಂದಾಗಲೇ ಮನೆ ಕಟ್ಟಿಸಿಕೊಡಬೇಕು ಅನ್ನೋ ನ್ಯಾಯವಂತೆ!

ತಮಿಳರು ಅಂದ್ರೆ ಸಿನಿಮಾ ಪ್ರಿಯರಲ್ವಾ. ಪ್ರತಿ ಮನೇಲೂ ತಿನ್ನೋಕೆ ಕೂಳಿಲ್ಲದಿದ್ದರೂ, ಟಿವಿ ಇರ್ಬೇಕು ಅನ್ನೋದು ಸರ್ಕಾರದ ನೀತಿಯಂತೆ. ಅದ್ಕೇ ಅದು ಕಲರ್ ಟಿವಿ ಹಂಚಿಕೇನ ಅದ್ದೂರಿಯಾಗಿ ಮಾಡ್ತಾ ಬಂದದೆ. ಈ ವರ್ಷವೂ ಅದನ್ನ ಮಾಡ್ತಾ ಅವ್ರೆ. ಪುದುಕ್ಕೋಟ್ಟೈ ಜಿಲ್ಲೆಯಲ್ಲಿ ಇಂತದ್ದೊಂದು ಇತ್ತಂತೆ. ಟಿವೀನ ಹಂಗೇ ಮನೆಮನೆಗೆ ಹಂಚಿದರೇನು ಬಂತು ಭಾಗ್ಯ ಅಂತ ಅದ್ದೂರಿ ಸಮಾರಂಭವನ್ನೇ ಏರ್ಪಡಿಸಿದ್ದರಂತೆ. ಯಾವತ್ತು ಅಂತೀರಿ ಡಿಸೆಂಬರ್ 23 ರಂದು.

ಚುನಾವಣಾ ಹಂಚಿಕೆ ಸಮಾರಂಭ ಅಂದ್ಮೇಲೆ ದೊಡ್ಡ ದೊಡ್ಡೋರೆಲ್ಲ ಇರಬೇಕಲ್ವ. ಇದ್ರಂತೆ. ಸರ್ಕಾರ ಅನ್ನೋದು ಹಗಲೆಲ್ಲ ಗೇದುಬರೋ ಜನ ರಾತ್ರಿಯಾದರೂ ನೆಮ್ಮದಿಯಾಗಿ ಟಿವಿ ನೋಡ್ತಾ ಮನರಂಜಿಸಿಕೊಳ್ಳಲಿ ಅನ್ನೋ ಉದಾರತೇಲಿ ಕೊಟ್ಟದಲ್ಲ ಅಂತ ಅದನ್ನು ಖುಷಿಯಿಂದಲೇ ದೊಡ್ಡೋರ ಕೈಯ್ಯಿಂದ ಈಸ್ಕೊಂಡು ಕೃತಾರ್ಥರಾದರಂತೆ. ಜಯಕುಮಾರ ಅನ್ನೋನೂ ಒಬ್ಬ ಫಲಾನುಭವಿ ಅಂತೆ. ಅವ್ನೂ ಎಲ್ಲರಂತೆ ಈಸ್ಕೊಬಾರದಿತ್ತಾ. ಅವನ ಹೆಸರ ಕೂಗ್ತಿದ್ದಂಗೆ ವೇದಿಕೆ ಹತ್ತಿ ಹೋದನಂತೆ. ಟಿವೀನೂ ಪಡ್ಕಂಡನಂತೆ. ನಂತರ ಅಲ್ಲೇ ಮೊದಲೇ ಬರೆದಿಟ್ಟುಕೊಂಡಿದ್ದ ಕಾಗದದೊಂದಿಗೆ ಆ ಟಿವಿಯನ್ನು ಸ್ಥಳೀಯ ಶಾಸಕನಿಗೆ ಹಿಂತಿರುಗಿಸಿದನಂತೆ!

ಆ ಕಾಗದದಲ್ಲಿ ಏನು ಬರೆದಿದ್ದ ಅಂದ್ರೆ.....

ಟಿವಿ ಅನ್ನೋದು ನಮ್ಮಂತಹವರಿಗೆ ಮೋಜಿನ ವಸ್ತು. ಅನ್ನ, ಬಟ್ಟೆ, ಮನೆ, ಕರೆಂಟು ಇವುಗಳ ಪೂರೈಕೆ ನಂತರ ಪಡೆಯಬಹುದಾದ್ದು. ಏರುತ್ತಿರುವ ಬೆಲೆ, ನೀರಿನ ಕೊರತೆ, ವಿದ್ಯುತ್ ಕಡಿತ, ಭ್ರಷ್ಟಾಚಾರ ಇಂತಹವುಗಳಿಂದ ನರಳುತ್ತಿರುವ ನಾವು ಇವತ್ತು ನಡೆದಾಡುವ ಹೆಣದಂತಿದ್ದೇವೆ. ಟಿವಿಗಳಿಗಾಗಿ ಮಾಡಿರುವ ದುಂದು ವೆಚ್ಚವನ್ನು ಸರ್ಕಾರ ಮೂಲಭೂತ ಸೌಲಭ್ಯಗಳನ್ನ ಒದಗಿಸಲು, ವಿದ್ಯುತ್ ಉತ್ಪಾದಿಸಲು ಉಪಯೋಗಿಸಲಿ. ಒಮ್ಮೆ ಇವನ್ನು ಮಾಡಿದರೆ ಜನ ತಮಗೆ ತಾವೇ ಟಿವಿಯೇ ಏನು ಕಾರನ್ನು ಸಹ ಕೊಳ್ಳುವ ಶಕ್ತಿ ಪಡೆಯುತ್ತಾರೆ. ಇವನ್ನು ಮಾಡಲೆಂದು ನಾನು ಇದನ್ನು ನಿಮ್ಮ ಮೂಲಕ ಮುಖ್ಯಮಂತ್ರಿಗಳಿಗೆ ಹಿಂತಿರುಗಿಸುತ್ತಿದ್ದೇನೆ.



ಸಭಿಕರಿಗೆ ಪತ್ರದಲ್ಲಿ ಏನಿರಬಹುದು ಅನ್ನುವ ಕುತೂಹಲ. ಅದನ್ನು ಓದಿದವರಿಗೆ..... ಬಾಂಬ್ ಸಿಡಿದ ಅನುಭವ!

ಏನು ಮಾಡಿದರು ದೊಡ್ಡವರು?

ರಾಜಕಾರಣಿಗಳಲ್ವ. ಪತ್ರದ ವಿಷಯ ಮುಚ್ಚಿಟ್ಟರಂತೆ. ಜಯಕುಮಾರನನ್ನು ತಕ್ಷಣವೇ ಸಭೆಯಿಂದ ಹೊರಹಾಕಿಸಿದರಂತೆ!

ಈ ವಿಷಯ ಕರುಣಾನಿಧಿಯವರಿಗೂ ತಲುಪಿತಂತೆ. ಸನ್ಮಾನ್ಯರ ಪ್ರತಿಕ್ರಿಯೆ ಏನು ಇದಕ್ಕೆ?

'ಎಲ್ಲಿಯವರೆಗೆ ಬಡತನ ಇರುತ್ತೊ ಅಲ್ಲಿವರೆಗೆ ಸರ್ಕಾರ ನಿರಂತರವಾಗಿ ಧೋತಿ, ಸೀರೆ, ಟಿವಿಗಳನ್ನು ಹಂಚುತ್ತಲೇ ಇರುತ್ತದೆ' ಎಂದರಂತೆ!

ಜನರ ಬಡತನಕ್ಕೆ ಕಾರಣ ಏನು? ಯಾರು?

ಈ ಪ್ರಶ್ನೆಗೆ ಅವರ ಬಳಿ ಉತ್ತರ ಇಲ್ಲ!

ಕರ್ನಾಟಕದಲ್ಲಿ ಸೀರೆ ಹಂಚಿಕೆ ನಡೆದಾಗ ಭಾಗ್ಯಲಕ್ಷ್ಮಿಯರಲ್ಲಿ ಒಬ್ಬರಾದರೂ



ಎಚ್.ಎಲ್. ಕೇಶವಮೂರ್ತಿ

ಅಣಕ

ಜಯಕುಮಾರನ ಮನಸ್ಸು ಹೊಂದಿದ್ದರೆ.....

ಕನ್ನಡಿಗರು ಸ್ವಾಭಿಮಾನಿಗಳು!

ಆದರೆ.....

ಜಯಕುಮಾರನ ಮನಸ್ಸು ಇಲ್ಲ!

ದೊರೆ ಪುರಸ್ಕಾರ!

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮೌಲ್ಯಯುತವಾದದ್ದು. ಅದನ್ನು ಪಡೆದ ಸಾಹಿತಿ ನಾಡ ಜನರ ಹೆಮ್ಮೆ. ತಮ್ಮ ಗೌರವಾದರಗಳನ್ನು ಬಿಂಬಿಸುವುದು ಹೇಗೆ?

ಕೇರಳದಲ್ಲಿ ಸರ್ಕಾರದ ಪ್ರತಿನಿಧಿ ತಾನೇ ಸಾಹಿತಿಯ ಮನೆಗೆ ಹೋಗುತ್ತಾನಂತೆ.... ಸಂತೋಷವನ್ನು ಹಂಚಿಕೊಳ್ಳುತ್ತಾನಂತೆ.

ತಮಿಳುನಾಡಿನ ಪರಿಸ್ಥಿತಿ ಹೇಗೆ?

ಪ್ರಶಸ್ತಿ ವಿಜೇತ ಎರಡು ಶಾಲುಗಳನ್ನು ಕೊಂಡುಕೊಳ್ಳಬೇಕಂತೆ!

ಎರಡು ಏಕೆ?

ಒಂದು ದೊರೆ ಕರುಣಾನಿಧಿಯವರಿಗೆ! ಇನ್ನೊಂದು ದೊರೆಯಿಂದ ಪುರಸ್ಕಾರಗೊಂಡು ಮಾಧ್ಯಮಗಳಲ್ಲಿ ಮಿಂಚಲು!

ಇಂತಹ ಎರಡು ಶಾಲುಗಳೊಂದಿಗೆ, ಪ್ರಶಸ್ತಿ ಪುರಸ್ಕೃತರು ವಿಧಾನಸೌಧಕ್ಕೆ ಹೋಗಿ ದೊರೆಯ ಅಪ್ಪಣೆಗಾಗಿ ಹಲವಾರು ಗಂಟೆಗಳು ಕಾಯುತ್ತಾ ನಿಲ್ಲಬೇಕಂತೆ. ದೊರೆಯ ದರ್ಶನ ಆದನಂತರ ಶಾಲನ್ನು ಹೊದಿಸುವ ಮುಖಾಂತರ ತನ್ನ ಗೌರವ ಸಲ್ಲಿಸಿ ನಂತರ ಸನ್ಮಾನ್ಯರಿಂದ ಪುರಸ್ಕೃತರಾಗಬೇಕಂತೆ!

ಜನರ ಪರ ನಿಲ್ಲುವುದೇ ಅಪರಾಧವಾಗುತ್ತಿದೆ


ಮಾನವತಾವಾದಿ ವೈದ್ಯ ಬಿನಾಯಕ್ ಸೇನ್‌ರನ್ನು ಜೈಲಿಗೆ ದೂಡಿದ್ದಾಯಿತು. ಅದಕ್ಕೂ ಮುನ್ನ ಜನರ ಪರ ದನಿ ಎತ್ತುವ ಖ್ಯಾತ ಲೇಖಕಿ ಅರುಂಧತಿ ರಾಯ್ ಅವರ ವಿರುದ್ಧವೂ ದೇಶದ್ರೋಹಿ ಕೇಸ್ ಅನ್ನು ಜಡಿಯುವುದಾಗಿ ಬೆದರಿಸಲಾಯಿತು. ಈಗ ನ್ಯಾಯಕ್ಕಾಗಿ ಹೋರಾಡುತ್ತಿರುವ ತೀಸ್ತಾ ಸೆಟಲ್‌ವಾಡ್ ಅವರನ್ನೇ ಬಂಧಿಸಲು ಗುಜರಾತಿನ ಸರ್ಕಾರ ಸಜ್ಜಾಗುತ್ತಿದೆ (ಕಂಡಹಾಗೆ, ಜನವರಿ 19 ರ ಸಂಚಿಕೆ).

ಇದೆಲ್ಲದರಿಂದ ಒಂದಂತೂ ಸ್ಪಷ್ಟವಾಗುತ್ತದೆ. ಇವತ್ತು ನಮ್ಮ ದೇಶದಲ್ಲಿ ಬಡವರ ಪರ, ದಮನಿತರ ಪರ ಮತ್ತು ಅನ್ಯಾಯಕ್ಕೊಳಗಾದವರ ಪರ ದನಿ ಎತ್ತುವುದೇ ಒಂದು ಅಪರಾಧವಾಗುತ್ತಿದೆ.

-ಶಶಿಕಲಾ ಶೆಟ್ಟಿ, ಬೆಂಗಳೂರು

ಶ್ರೀರಾಮಸೇನೆಯ ಪ್ರಮೋದ್ ಮುತಾಲಿಕ್, ವಿಶ್ವಹಿಂದೂ ಪರಿಷತ್ತಿನ ಪ್ರವೀಣ್ ತೊಗಾಡಿಯಾ ಮತ್ತು ಕೋಳದ ಮಠದ ಶಾಂತವೀರ ಸ್ವಾಮಿ ತರಹದ ದೇಶಭಕ್ತರು ಕಂ ಧರ್ಮರಕ್ಷಕರು ನಿತ್ಯಾನಂದನೆಂಬ ಸೆಕ್ಸಾನಂದನೊಂದಿಗೆ ಎಂತಹ ಸಾಮ್ಯತೆಗಳನ್ನು ಹೊಂದಿರಬಹುದು ಎಂಬ ಕುತೂಹಲ ನನ್ನಲ್ಲಿತ್ತು. ಆದರೆ ಪಾರ್ವತೀಶ ಅವರ 'ನಿತ್ಯಾನಂದನ ಸಂಪತ್ತಿನ ಮೇಲೆ ಹಿಂದೂ ನಾಯಕರ ಕಣ್ಣು' ಎಂಬ ವರದಿ ಓದಿ ಇದರ ಹಿಂದಿನ ಮರ್ಮ ಅರ್ಥವಾಯಿತು. ನನ್ನ ಪ್ರಕಾರ ಈ ದೇಶಭಕ್ತ-ಧರ್ಮ ರಕ್ಷಕರಿಗೆ ಬೇಕಿರುವುದು ಹಣವಷ್ಟೇ. ಅದೊಂದು ಸಿಕ್ಕರೆ ದೇಶಕ್ಕೂ, ಧರ್ಮಕ್ಕೂ ಗೋಲಿಮಾರ್ ಎನ್ನುವವರು ಈ ಜನ!

-ನಿರಂಜನ ಪಾಟೀಲ್, ಹುಣಸಿನಹಳ್ಳಿ



'ರಾಯಲಸೀಮಾ ರಕ್ತ ವೈಚಿತ್ರಂ' ಎಂಬ ಸೂರಿ ಹತ್ಯೆ ಕುರಿತು ಡಾ. ಸೋಮನಾಥ್ ಅವರ ವರದಿಯಲ್ಲಿ ನನ್ನ ಗಮನ ಸೆಳೆದದ್ದು ಸೂರಿಯ ಪುತ್ರನ ಫೋಟೋ. ಆ ಹುಡುಗನಿಗೆ ಇನ್ನೂ ಮೀಸೆ ಚಿಗುರಿಲ್ಲ. ಆದರೆ ಮುಂದೊಂದು ದಿನ ಆತನೂ ತನ್ನ ತಂದೆಯನ್ನು ಕೊಂದವರ ವಿರುದ್ಧ ಸೇಡು ತೀರಿಸಿಕೊಳ್ಳಲು ಮುಂದಾದರೆ ಏನು ಗತಿ ಅನ್ನಿಸಿತು.

ಪೆರಿಟಾಲ ರವಿ ಹಿಂದೊಮ್ಮೆ ಸೂರಿಯ ತಂದೆ-ತಾಯಿಯನ್ನು ಕೊಂದದ್ದು, ಅದಕ್ಕೆ ಪ್ರತೀಕಾರವಾಗಿ ಪೆರಿಟಾಲ ರವಿಯನ್ನೇ ಸೂರಿ ಕೊಲ್ಲಿಸಿದ್ದು, ಈಗ ಆ ಕೃತ್ಯಕ್ಕೆ ತಾನೇ ಜೀವ ಕಳೆದುಕೊಂಡಿರುವುದು... ಇದೆಲ್ಲ ಸೂರಿ ಪುತ್ರನಿಗೆ ಪಾಠವಾಗಿ ಆ ಚಿಕ್ಕ ಹುಡುಗನಾದರೂ ಈ ರಕ್ತಸಿಕ್ತ ಹಾದಿಯಿಂದ ದೂರ ಉಳಿಯುವಂತಾಗಲಿ.

-ರವಿಕುಮಾರ್, ತುಮಕೂರು

ಜನವರಿ 19 ರ ಸಂಚಿಕೆಯಲ್ಲಿ 'ಬಿರಾದಾರ ನಂಬಿದ ಹುಡುಗಿ ಈಗ ಹುಚ್ಚಿ' ಎಂಬ ವರದಿ ಓದಿ ಆಶ್ಚರ್ಯವೆನಿಸಿತು. ಧಾರವಾಡದ ವಿದ್ಯಾಗಿರಿ ಪೊಲೀಸ್ ಠಾಣಾದ ಸಿಪಿಐ ವಿಜಯ ಬಿರಾದಾರನೆಂಬ ಕಚ್ಚೆಹರುಕನ ನೀಚ ವೃತ್ತಾಂತ ನಿಜಕ್ಕೂ ದಂಗುಬಡಿಸುವಂತಿವೆ. ಗುಳೇದಗುಡ್ಡದ ಸುಭಾಷಿಣಿ ಎಂಬ ಅಮಾಯಕ ಯುವತಿಯನ್ನು ನಂಬಿಸಿ ಆಕೆಯ ಅಮೂಲ್ಯ ಜೀವನಕ್ಕೆ ಕೊಳ್ಳಿ ಇಟ್ಟಿರುವ ಬಿರಾದಾರನೆಂಬ ಖಾಕಿ ಕಳ್ಳನ ಬಗ್ಗೆ ಲಂಕೇಶ್ ಸವಿಸ್ತಾರವಾಗಿ ವರದಿ ಮಾಡುವ ಮೂಲಕ ಈ ಹರಾಮಕೋರನ ಬಣ್ಣ ಬಯಲಾಗಿಸಿದೆ. ಇಂಥ ಸ್ತ್ರೀಲೋಲ ಕಾಮಾಂಧ ನಾಲಾಯಕ್ ಪೊಲೀಸ್ ಅಧಿಕಾರಿ ಬಿರಾದಾರನನ್ನು ಪೊಲೀಸ್ ಠಾಣೆಯಿಂದ ಗೃಹಮಂತ್ರಿ ಆರ್. ಅಶೋಕ್ ಒದ್ದೋಡಿಸಬೇಕಿದೆ.

-ರಂಜಾನ ಕೆ. ಕೊರ್ತಿ, ಬಾದಾಮಿ

ಶ್ರೀಮತಿ ರಾಜೇಶ್ವರಿಯವರು ಪೂರ್ಣಚಂದ್ರ ತೇಜಸ್ವಿಯವರ ಜೊತೆ ಕಳೆದ ದಿನಗಳ ಬಗ್ಗೆ ಪುಸ್ತಕ ಬರೆಯುತ್ತಿದ್ದಾರೆಂದೂ, ಇನ್ನು ಕೆಲದಿನಗಳಲ್ಲಿ ಪುಸ್ತಕ ಪ್ರಕಟಗೊಳ್ಳುತ್ತದೆ ಎಂದೂ ಬರೆದಿರುವುದು ಸಂತೋಷಕರ ವಿಷಯ. ಆ ಪುಸ್ತಕ ಪ್ರಕಟಗೊಳ್ಳುವವರೆಗೂ ಗೌರಿ ಲಂಕೇಶ್ ಪತ್ರಿಕೆಯಲ್ಲಿ ಏಕೆ ಪ್ರಕಟಿಸಬಾರದು? ದಯವಿಟ್ಟು ಪ್ರಯತ್ನಿಸಿ. ಏಕೆಂದರೆ ತೇಜಸ್ವಿ ಬಗ್ಗೆ ಎಷ್ಟು ತಿಳಕೊಂಡರೂ ಕಡಿಮೆಯೆ. ಅಷ್ಟು ಕುತೂಹಲ ಉಂಟುಮಾಡುವಂತಹದ್ದು ಅವರ ಜೀವನ. ತೇಜಸ್ವಿ ಈ ಹಿಂದೆ 'ಅಣ್ಣನ ನೆನಪು' (89-90 ನೇ ಸಾಲಿನಲ್ಲಿ) ಪುಸ್ತಕವು ಲಂಕೇಶ್ ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತಿದ್ದಾಗ ನಾನು ಸೇಲ್ಸ್‌ಮನ್ ಆಗಿ ತಿಂಗಳಿಗೆ 300 ರೂ. ಸಂಬಳ ಪಡೆಯುತ್ತಿದ್ದೆ. ಆದರೂ ತೇಜಸ್ವಿ ಅಂಕಣಕ್ಕಾಗಿಯೇ ಆಗ ನಾನು ಪ್ರತೀವಾರ ತಪ್ಪದೇ ಪತ್ರಿಕೆ ಕೊಳ್ಳುತ್ತಿದ್ದೆ.

-ಯೋಗೀಶ್, ಚಾಳೆಹಿರಿಯೂರು

sms ಜೋಕ್ಸ್

ಎಸ್‌ಎಂಎಸ್ ಜೋಕ್ಸ್

ದೇಶ ಬೇಕು, ದ್ವೇಷ ಬೇಡ-ಸ್ವಾಮಿ ವಿವೇಕಾನಂದ

ಹೆಣ್ಣು ಬೇಡ, ಮಣ್ಣು (ಗಣಿ) ಬೇಕು-ರೆಡ್ಡಿ

ಹುಡುಗಿ ಬೇಕು, ಮದುವೆ ಬೇಡ-ನಿತ್ಯಾನಂದ

ಗೆಳೆಯ ಬೇಡ, ಗೆಳೆಯನ ಹೆಂಡತಿ ಬೇಕು-ಹಾಲಪ್ಪ


ಮದುವೆ ಬೇಡ, ಮಗು ಬೇಕು-ಕುಮಾರಸ್ವಾಮಿ

ಡಾಕ್ಟರ್ ಬೇಡ, ನರ್ಸ್ ಬೇಕು-ರೇಣುಕಾಚಾರ್ಯ

ಕಟ್ಟಿಕೊಂಡವಳು ಸಾಯಲಿ, ಇಟ್ಟುಕೊಂಡವಳು ಮಂತ್ರಿ ಆಗಲಿ-ಯಡಿಯೂರಪ್ಪ

ರಾಮಚಂದ್ರ
ಎಂದಕೂಡಲೇ ಅವರ
ಟ್ಟು, ಮುಂಗೋಪಗಳೇ
ಲು ನೆನಪಿಗೆ ಬರುತ್ತವೆ.
"ಇವತ್ತು ಚಿತ್ರರಂಗದಲ್ಲಿ
ರಿಯಾನಿ ಬರಲಿಲ್ಲ",
"ಅದರಲ್ಲಿನ ಚಿಕನ್
ದಿಲ್ಲ" ಎಂದೆಲ್ಲಾ ರಗಳೆ
ತೆಗೆಯುವ ಭಯಾನಕ
ಯಾಗ್ರಾಹಕರು ಇದ್ದಾರೆ.
ಆದರೆ ರಾಮಚಂದ್ರ
ವತ್ತೂ ತಮ್ಮ ಖಾಸಗೀ
ರಕ್ಕೆ, ಚಿಲ್ಲರೆ ವಿಷಯಕ್ಕೆ
ಟ್ಟು ಮಾಡಿಕೊಂಡವರೇ
ಅಲ್ಲ.

ಅಲೆಮಾರಿ ಚಿತ್ರದ ಚಿತ್ರೀಕರಣ ನಡೆಯುತ್ತಿದ್ದಾಗ...



ಕಲಾತ್ಮಕ ಕನ್ನಡ ಚಿತ್ರಗಳ ಉಸಿರು ನಿಂತಿದೆ...

• ಕವಿತಾ ಲಂಕೇಶ್

ಚುರುಕುತನ, ಲವಲವಿಕೆ, ಸಿಡುಕು ಇವೆಲ್ಲದರ ಜೊತೆಗೆ ಅಪಾರವಾದ ಕ್ರಿಯಾಶೀಲತೆಯನ್ನು ಮೈಗೂಡಿಸಿಕೊಂಡು, ಹತ್ತಾರು ಜನರ ಮಧ್ಯೆ ಭಿನ್ನರಾಗಿ ಕಾಣುತ್ತಿದ್ದ ಛಾಯಾಗ್ರಾಹಕ, ಸಂಭಾವಿತ ವ್ಯಕ್ತಿ ಎಸ್. ರಾಮಚಂದ್ರ. ಇಂಥ ರಾಮಚಂದ್ರ ಈಗ ಇದ್ದಕ್ಕಿದ್ದ ಹಾಗೆ ಯಾವೊಂದು ಸೂಚನೆಯನ್ನೂ ನೀಡದೆ ತಮ್ಮ ಕ್ಯಾಮೆರಾ, ಸಿನಿಮಾ ಜಗತ್ತನ್ನು ಬಿಟ್ಟು ಹೊರಟುಹೋಗಿದ್ದಾರೆ.


ಅದು 1999. ಅಲ್ಲಿಯ ತನಕ ಕಿರು ಚಿತ್ರಗಳನ್ನು ರೂಪಿಸುತ್ತಾ ಆ ವಲಯದಲ್ಲಿ ಒಂದು ಮಟ್ಟದ ಹಿಡಿತ ಹೊಂದಿದ್ದ ನಾನು ಸಿನಿಮಾ ನಿರ್ದೇಶನದ ಸಾಧ್ಯತೆಯತ್ತಲೂ ಹೆಜ್ಜೆ ಇಟ್ಟಿದ್ದೆ. ಅಪ್ಪನ 'ಅವ್ವ' ಕಾದಂಬರಿಯನ್ನೇ ಆಧರಿಸಿ 'ದೇವೀರಿ' ಮಾಡುವುದಾಗಿ ತೀರ್ಮಾನಿಸಿದ್ದೆ. ಅದಕ್ಕೊಂದು ಎಲ್ಲ ಸಿದ್ಧತೆಗಳು ಆರಂಭವಾದವು. ನನ್ನ ಚೊಚ್ಚಲ ಚಿತ್ರಕ್ಕೆ ಯಾವ ಛಾಯಾಗ್ರಾಹಕರನ್ನು ಆಯ್ಕೆಮಾಡಿಕೊಳ್ಳುವುದು ಎಂಬ ಪ್ರಶ್ನೆ ಉದ್ಭವವಾದಾಗ ನನ್ನ ಮನಸ್ಸು ರಾಮಚಂದ್ರ ಅವರತ್ತಲೇ ಕೇಂದ್ರೀಕರಣಗೊಂಡಿತ್ತು.

ಒಮ್ಮೆ 'ದೇವೀರಿ' ಚಿತ್ರದ ಬಗ್ಗೆ ಅಪ್ಪನೊಂದಿಗೆ ಮಾತನಾಡುತ್ತಾ ಕೂತಿದ್ದೆ. ಆಗ "ಕ್ಯಾಮೆರಾಕ್ಕೆ ಯಾರು?" ಎಂದು ಅಪ್ಪ ಕೇಳಿದ್ದರು. "ಎಸ್. ರಾಮಚಂದ್ರ" ಅಂದೆ. ಹಿಂದುಮುಂದು ನೋಡದೆ ಅಪ್ಪ "ಯೋಚನೆ ಮಾಡು.. ಆ ಕುಂಟನಿಗೆ ನಾನಾ ಚೇಷ್ಟೆ.." ಅಂದುಬಿಟ್ಟರು. ಅಪ್ಪ ಹಾಗೆ ಹೇಳಲೂ ಕಾರಣವಿತ್ತು, ಅಪ್ಪ ನಿರ್ದೇಶಿಸಿದ್ದ ಮೊದಲ ಚಿತ್ರ 'ಪಲ್ಲವಿ'ಗೂ ರಾಮಚಂದ್ರ ಅವರೇ ಕ್ಯಾಮೆರಾಮನ್ ಆಗಿದ್ದರು. ಆಗ ಅಪ್ಪ ಮತ್ತು ರಾಮಚಂದ್ರ ಅವರ ನಡುವೆ ಆದ ಕಿತ್ತಾಟಗಳು ಒಂದೆರಡಲ್ಲ! ಇಬ್ಬರೂ ದೈತ್ಯ ಪ್ರತಿಭೆಗಳು. ಇಂತಹವರು ಒಂದೆಡೆ ಸೇರಿದಾಗ ಸಣ್ಣಪುಟ್ಟ ಈಗೋ ಕ್ಲಾಷ್‌ಗಳು ಇದ್ದೇ ಇರುತ್ತವೆ. ಇಂಥ ರಂಪಾಟದ ಕಾರಣಕ್ಕೇ 'ಪಲ್ಲವಿ'ಯ ಕೊನೆಕೊನೆಯಲ್ಲಿ ರಾಮಚಂದ್ರ ಅಪ್ಪನ ಬಗ್ಗೆ ಮುನಿಸಿಕೊಂಡು ಹೊರನಡೆದಿದ್ದರು. ಕಡೆಗೆ ಸಿನಿಮಾದ ಉದ್ದ ಸಾಕಾಗದೇ ಹೋದಾಗ ಹೃಷಿಕೇಶ್ ಮುಖರ್ಜಿ ಅವರು ಅದನ್ನು ಎಡಿಟ್ ಮಾಡುವಾಗ ಸರಿದೂಗಿಸಿದ್ದರು. ಅದೇ ಸಿನಿಮಾಗೆ ನ್ಯಾಷನಲ್ ಅವಾರ್ಡ್ ಬಂದಾಗ ಎಲ್ಲ ಮುನಿಸುಗಳೂ ತಣ್ಣಗಾಗಿಬಿಟ್ಟಿದ್ದವು.

ಎಸ್. ರಾಮಚಂದ್ರ ಅವರನ್ನು ಕೆಲವರು ಐತಾಳ್ ಎಂತಲೂ ಇನ್ನೂ ಆಪ್ತವಲಯದವರು ಕುಂಟು ರಾಮಚಂದ್ರ ಎಂತಲೂ ಕರೆಯುತ್ತಿದ್ದರು. ನಡೆಯುವಾಗ ಅವರ ಕಾಲು ಕೊಂಚ ತಡವರಿಸುತ್ತಿದ್ದರಿಂದ ಹಾಗೆ ಕರೆಯುತ್ತಿದ್ದರೇ ಹೊರತು ಗೇಲಿಗಲ್ಲ, ರಾಮಚಂದ್ರ ಕೂಡಾ ಇದಕ್ಕೆ ವಿರೋಧಿಸಿದವರಲ್ಲ.

ರಾಮಚಂದ್ರರೊಂದಿಗೆ ನಾನು ಕೆಲಸ ಮಾಡುತ್ತೇನೆ ಅಂದಾಗ ಅಪ್ಪ "ಯೋಚನೆ ಮಾಡು" ಎಂದಿದ್ದರೂ "ಇಲ್ಲ, ಅವರೇ ಇದ್ದರೆ ಚೆಂದ" ಎಂದು ಹೇಳಿ ರಾಮಚಂದ್ರ ಅವರನ್ನೇ ನನ್ನ ಮೊದಲ ಚಿತ್ರಕ್ಕೆ ಕಣ್ಣುಗಳನ್ನಾಗಿ ಸ್ವೀಕರಿಸಿದ್ದೆ.

ಚಿತ್ರದ ನಟರಿಗೆ ಮೊದಲೇ ಸ್ಕ್ರಿಪ್ಟ್ ಕೊಡದಿದ್ದರೂ, ಛಾಯಾಗ್ರಾಹಕ ರಾಮಚಂದ್ರ ಅವರಿಗೆ ಸಿನಿಮಾದ ಸಂಪೂರ್ಣ ಸ್ಕ್ರಿಪ್ಟನ್ನು ನೀಡಬೇಕಿತ್ತು. ಅದನ್ನು ಅವರು ಓದಿ, ನನ್ನೊಂದಿಗೆ ಚರ್ಚಿಸಿ ತಮಗನಿಸಿದ ಸಲಹೆಗಳನ್ನು ಕೊಡುತ್ತಿದ್ದರು. ಹತ್ತಾರು ಜನ ಹಿರಿಯ, ದಿಗ್ಗಜರೊಂದಿಗೆ ಕೆಲಸ ಮಾಡಿ ಮಾಗಿದ್ದ ಛಾಯಾಗ್ರಾಹಕ ಎನಿಸಿಕೊಂಡಿದ್ದರೂ



ದೇವೀರಿ ಚಿತ್ರೀಕರಣದಲ್ಲಿ ಪಿ.ಲಂಕೇಶ್, ಕವಿತಾ ಮತ್ತು ರಾಮಚಂದ್ರ

ಅವರು ಹೊಸ ನಿರ್ದೇಶಕರೊಂದಿಗೆ ಕೆಲಸ ಮಾಡುವಾಗ ತಮ್ಮ 'ಹಿರಿತನ'ವನ್ನು ಮೆರೆದವರಲ್ಲ.

ರಾಮಚಂದ್ರ ಎಂದಕೂಡಲೇ ಅವರ ಸಿಟ್ಟು, ಮುಂಗೋಪಗಳೇ ಮೊದಲು ನೆನಪಿಗೆ ಬರುತ್ತವೆ. ಇವತ್ತು ಚಿತ್ರರಂಗದಲ್ಲಿ "ಬಿರಿಯಾನಿ ಬರಲಿಲ್ಲ", "ಅದರಲ್ಲಿನ ಚಿಕನ್ ಚೆಂದಿಲ್ಲ" ಎಂದೆಲ್ಲಾ ರಗಳೆ ತೆಗೆಯುವ ಭಯಾನಕ ಛಾಯಾಗ್ರಾಹಕರು ಇದ್ದಾರೆ. ಆದರೆ ರಾಮಚಂದ್ರ ಯಾವತ್ತೂ ತಮ್ಮ ಖಾಸಗೀ ವಿಚಾರಕ್ಕೆ, ಚಿಲ್ಲರೆ ವಿಷಯಕ್ಕೆ ಸಿಟ್ಟು ಮಾಡಿಕೊಂಡವರೇ ಅಲ್ಲ. ಮುದ್ದೆ ಸಾರು ಇದ್ದರೂ ಅದನ್ನೆ ತಿಂದು ತಮ್ಮ ಪಾಡಿಗೆ ಕ್ಯಾಮೆರಾ ಹಿಡಿಯುತ್ತಿದ್ದರು. ಆದರೆ ತಾವು ಇಟ್ಟ ಫ್ರೇಂಗೆ ಕೊರತೆ ಇದೆ ಎನಿಸಿದಾಗ, ತೊಂದರೆಯಾದಾಗ ಮಾತ್ರ ವ್ಯಗ್ರಗೊಳ್ಳುತ್ತಿದ್ದರು. ಎಲ್ಲ ದೃಷ್ಟಿಯಿಂದಲೂ ಸ್ಕ್ರೀನ್‌ಗಾಗಿ ತಾಳುತ್ತಿದ್ದ ಸಾತ್ವಿಕ ಸಿಟ್ಟು ಅವರದ್ದಾಗಿತ್ತು. 'ದೇವೀರಿ'ಯ ಸಂದರ್ಭದಲ್ಲೂ ಸಣ್ಣದೊಂದು ಕಾರಣಕ್ಕೆ ಸಿಟ್ಟು ಮಾಡಿಕೊಂಡು "ನಾನು ಬರಲ್ಲ" ಎಂದು ಹೊರಟುಬಿಟ್ಟಿದ್ದರು. ಆಗ ಸಹಜವಾಗಿಯೇ ನಾನು ಮತ್ತು ಚಿತ್ರದ ಸಹನಿರ್ಮಾಪಕಿ ಭಾರತಿ ಗೌಡ ಸೇರಿದಂತೆ ಎಲ್ಲರೂ ಗಾಬರಿಗೊಂಡಿದ್ದೆವು. ಆದರೆ ಮಾರನೆಯ ದಿನ ಬೆಳಗ್ಗೆ ಶೂಟಿಂಗ್ ಸ್ಪಾಟ್‌ಗೆ ಹಾಜರಾದ ರಾಮಚಂದ್ರ ತಣ್ಣಗೆ ಕೆಲಸ ಆರಂಭಿಸಿದ್ದರು; ಅವರ ಕೋಪ ತಾತ್ಕಾಲಿಕವಾಗಿರುತ್ತಿತ್ತು.

ಚಿತ್ರೀಕರಣದ ಸಂದರ್ಭದಲ್ಲಿ ಒಬ್ಬ ಲೈಟ್ ಬಾಯ್‌ನ ಸಲಹೆಯನ್ನು ಕೂಡಾ ಮುಕ್ತವಾಗಿ ಸ್ವೀಕರಿಸುವ ಮನಸ್ಥಿತಿ ನನ್ನದು. ಏಕೆಂದರೆ ಆ ಸಲಹೆ ಸಕಾರಾತ್ಮಕವಾಗಿದ್ದಲ್ಲಿ ಅದು ಅಂತಿಮವಾಗಿ ಚಿತ್ರಕ್ಕೇ ಪ್ಲಸ್‌ಪಾಯಿಂಟ್. ನಟಿ ನಂದಿತಾ ದಾಸ್‌ಗೆ ಕನ್ನಡ ಅರ್ಥವಾಗುತ್ತಿರಲಿಲ್ಲ. ಆದರೂ ರಾಮಚಂದ್ರ ಅವರು ಆಕೆಯ ಮುಂದೆಯೇ ನನ್ನ ಕಿವಿಯಲ್ಲಿ ಅವರಿಗೆ ತೋಚಿದ ಸಲಹೆಗಳನ್ನು ನೀಡುತ್ತಿದ್ದರು. ಅದು ಎದುರಿಗಿದ್ದ ನಂದಿತಾಗೆ, ಇತರೆ ನೋಡುಗರಿಗೆ ವಿಚಿತ್ರ ಅನಿಸುತ್ತಿತ್ತು. ಹೀಗಾಗಿ "ನಿಮ್ಮ ಸಲಹೆಗಳೇನೇ ಇದ್ದರೂ ನೇರವಾಗೇ ಹೇಳಿ. ಅದನ್ನು ಗುಟ್ಟಾಗಿ ಹೇಳುವ ಅವಶ್ಯಕತೆ ಇಲ್ಲ" ಎಂದು ಅವರಿಗೆ ಹೇಳಿದ್ದೆ. ಆನಂತರ ನಾವಿಬ್ಬರೂ ನಮ್ಮ ಕೆಲಸದಲ್ಲಿ ಹೊಂದಿಕೊಂಡು ಆ ಚಿತ್ರವನ್ನು ಮುಗಿಸಿದೆವು.

ಹೀಗಾಗಿ ನನ್ನ 'ಅಲೆಮಾರಿ' ಚಿತ್ರಕ್ಕೂ ರಾಮಚಂದ್ರ ಅವರೇ ಛಾಯಾಗ್ರಾಹಕರಾದರು. ಬಿಜಾಪುರದ 44 ಡಿಗ್ರಿ ರಣಬಿಸಿಲಿನಲ್ಲೂ ಒಂದಿಷ್ಟೂ ಆಯಾಸ ಪಡದೆ ಅವರು ಛಾಯಾಗ್ರಹಣ ಮಾಡುತ್ತಿದ್ದರು. ಮಧ್ಯಾಹ್ನ ಊಟದ ನಂತರ ಚಿತ್ರೀಕರಣದ ಗಲಾಟೆ, ಗಲಿಬಿಲಿ ನಡುವೆಯೇ ತಮ್ಮ ಚೇರಿನಲ್ಲಿ ಕೂತು ಹದಿನೈದು ನಿಮಿಷ ಕೋಳಿನಿದ್ದೆ ಮಾಡುವುದು ರಾಮಚಂದ್ರ ಅವರ ಅಭ್ಯಾಸವಾಗಿತ್ತು. ಹಾಗೆ ಸಣ್ಣದೊಂದು ನಿದ್ರೆ ತೆಗೆದ ನಂತರ ರಾಮಚಂದ್ರ ಮತ್ತೆ ಪಾದರಸದಂತೆ ಚುರುಕಾಗಿ ಕೆಲಸ ಮಾಡುತ್ತಿದ್ದರು. ಆ ಥರದ ಎನರ್ಜಿಯನ್ನು ನಾನು ಯಾವ ಛಾಯಾಗ್ರಾಹಕರಲ್ಲೂ ಕಂಡಿಲ್ಲ.

ಭಾರತದ ಶ್ರೇಷ್ಠ ಛಾಯಾಗ್ರಾಹಕ ಮಧು ಅಂಬಟ್ ಅವರ ಜೊತೆಯೂ ನಾನು ಕೆಲಸ ಮಾಡಿದ್ದೇನೆ. ಆದರೆ ಅಂಬಟ್ ಅರ್ಧದಿನ ತೆಗೆದುಕೊಂಡು ಮಾಡುತ್ತಿದ್ದ ಲೈಟಿಂಗ್ಸ್‌ಅನ್ನು ರಾಮಚಂದ್ರ ಕೇವಲ ಅರ್ಧ ಗಂಟೆಯಲ್ಲೇ ಮುಗಿಸುತ್ತಿದ್ದರು. ಆ ಮಟ್ಟದ ವೇಗ ಮತ್ತು ನೈಪುಣ್ಯತೆ ರಾಮಚಂದ್ರರದ್ದು.

ಸಾಮಾನ್ಯವಾಗಿ ಛಾಯಾಗ್ರಾಹಕರು ಚಿತ್ರೀಕರಣ ಮುಗಿಯುತ್ತಿದ್ದಂತೆಯೇ ಕ್ಯಾಮೆರಾದೊಂದಿಗೆ ತಾವೂ ಜಾಗ ಖಾಲಿ ಮಾಡಿ ಮತ್ತೊಂದು ಸಿನಿಮಾದಲ್ಲಿ ತೊಡಗಿಕೊಳ್ಳುತ್ತಾರೆ. ಆದರೆ ರಾಮಚಂದ್ರ ಅವರು ಸಿನಿಮಾ ಆರಂಭವಾದ ದಿನದಿಂದ ಅದರ ಮೊದಲ ಪ್ರತಿ ಹೊರಬರುವ ತನಕ ಚಿತ್ರತಂಡದೊಂದಿಗಿದ್ದು ಪ್ರತಿಯೊಂದು ಹಂತದಲ್ಲೂ ದುಡಿಯುತ್ತಾ ಮಾರ್ಗದರ್ಶನ ನೀಡುತ್ತಿದ್ದರು. ತಾವೇ ಕೂತು ಸಿನಿಮಾದ ಗ್ರೇಡಿಂಗ್ ಮಾಡಿಸುತ್ತಿದ್ದರು. ಸಿನಿಮಾ ಬಗ್ಗೆ ಅವರಿಗಿದ್ದ ಆಸಕ್ತಿ ಅಷ್ಟಿಷ್ಟಲ್ಲ.

ಮೊನ್ನೆ ಸ್ನೇಹಿತರೊಬ್ಬರು "ಸಿನಿಮಾ ಮಾಡಬೇಕು. ಯಾರನ್ನ ಸಿನಿಮಾಟೊಗ್ರಾಫರ್ ಮಾಡೋದು" ಎಂದಾಗ ನಾನು ರಾಮಚಂದ್ರ ಅವರನ್ನೇ ಸೂಚಿಸಿದ್ದೆ. ಆದರೆ ಸ್ನೇಹಿತರ ಸಿನಿಮಾ ಆರಂಭವಾಗುವುದಕ್ಕೆ ಮುನ್ನ ರಾಮಚಂದ್ರ ಐತಾಳರ ಬದುಕೇ ಮುಗಿದುಹೋಗಿದೆ.

ನನ್ನ 'ದೇವೀರಿ', 'ಅಲೆಮಾರಿ' ಸೇರಿದಂತೆ 'ಘಟಶ್ರಾದ್ಧ', 'ಚೋಮನ ದುಡಿ', 'ಆಕ್ರಮಣ', 'ಮನೆ', 'ಹೊಂಬಿಸಿಲು', 'ಮಾಲ್ಗುಡಿ ಡೇಸ್', 'ಬನದ ನೆರಳು', 'ಹಾರು ಹಕ್ಕಿಯನ್ನೇರಿ', 'ನಾಯಿ ನೆರಳು', 'ಗುಲಾಬಿ ಟಾಕೀಸ್', 'ವಿಮುಕ್ತಿ' ಮತ್ತು ಹಿಂದಿಯ 'ಯಾದೇ' ಸೇರಿದಂತೆ ಹಲವಾರು ಕನ್ನಡ ಮತ್ತು ಹಿಂದಿ ಚಿತ್ರಗಳಿಗೆ ಛಾಯಾಗ್ರಾಹಕರಾಗಿ ದುಡಿದಿದ್ದ ರಾಮಚಂದ್ರ ಅವರು ಖಂಡಿತವಾಗಿಯೂ ಕನ್ನಡ ಚಿತ್ರರಂಗದ ಕಲಾತ್ಮಕ ಇತಿಹಾಸದ ದೊಡ್ಡ ಭಾಗ.

ಅವರ ನೆನಪು ಯಾವತ್ತಿಗೂ ಮಾಸಲು ಸಾಧ್ಯವಿಲ್ಲ... •



...ಸೆಟ್‌ನಲ್ಲಿ ಕವಿತಾ ...ರಾಮಚಂದ್ರ

...ಪರ್' ಚಿತ್ರದ ಕತೆ ಸಂದಪ್ಪೋ ನಂದು!

...ಡು ವಾರಗಳ ಹಿಂದೆ 'ಪೆರೋಲ್' ಚಿತ್ರದ ನಿರ್ದೇಶಕ ರಾಜಶೇಖರ್ ...ದೆ ಬಡಿದುಕೊಳ್ಳುವ ಮೂಲಕ ಪತ್ರಿಕೆಗಳಿಗೆ ಆಹಾರ ಒದಗಿಸಿದ್ದರು. ...ಗಂತ ಹೊಗೆ ಇಲ್ಲದೇ ಬೆಂಕಿ ಆಡುವುದಿಲ್ಲ, ಅದೇ ಬೆಂಕಿ ಕುಂಡದಿಂದ ...ನ್ನೊಂದು ಹೊಗೆಯ ಅಲೆ ಏಳುತ್ತಿದೆ. ಉಪ್ಪಿ ನಿರ್ದೇಶನದ 'ಸೂಪರ್' ...ವುದೆಂದರೆ ಅವರೇ ನಟಿಸಬೇಕಿದ್ದ 'ಲಂಡನ್ ಗೌಡ' ಚಿತ್ರದ ತಿರುಗು ... ವರ್ಷನ್!

...ದು, ಎಲ್ಲಾ ಅಂದುಕೊಂಡಂತೆ ಆಗಿದ್ದರೆ ಆ ಚಿತ್ರವನ್ನು ಯತೀಶ್ ...ರ್ದೇಶಿಸಬೇಕಿತ್ತು, ಈ ಯತೀಶ್ ಯಾರು ಎಂದು ಬಹುಶಃ ಹೆಚ್ಚಿನವರಿಗೆ ... ಮುಂಗಳೂರು ಮೂಲದ ಈತ ಕಾಶಿನಾಥ್ ಚಿತ್ರರಂಗಕ್ಕೆ ಎಂಟ್ರಿ ... ಅವರ ಜೊತೆ ಕಾಲಿಟ್ಟವರು. ವಿ.ಮನೋಹರ್ ಅವರಿಗೂ ತುಂಬಾ ...ರು. ಇವರಿಬ್ಬರಿಗೆ ತುಂಬಾ ಹತ್ತಿರದ ಒಡನಾಡಿ ಅಂದರೆ ಅದರರ್ಥ ...ಉಪ್ಪಿಗೂ ಬೇಕಾದವರು ಎಂದು ಮತ್ತೆ ಹೇಳಬೇಕಿಲ್ಲ.



ಈ ಯತೀಶ್ ಸ್ವಭಾವತಃ ನಿಷ್ಠೂರವಾದಿ. ಇನ್ನೊಂದು ಅರ್ಥದಲ್ಲಿ ಹಠವಾದಿ. ತಾನು ಹೇಳಿದ್ದೇ ವೇದಾಂತ ಎನ್ನುವ ಮಟ್ಟಕ್ಕೇ ಮಾತನಾಡುತ್ತಾರೆ. ಕ್ಯಾಮೆರಾ ಆ್ಯಂಗಲ್‌ನಿಂದ ಹಿಡಿದು, ಸಿನಿಮಾದ ಎಲ್ಲಾ ಆಯಾಮವನ್ನೂ ಕೊಂಚ ಹೆಚ್ಚಾಗಿಯೇ ಅರೆದು ಕುಡಿದಿದ್ದಾರೆ, ದುಡಿದಿದ್ದಾರೆ. ಇದೇ ಯತೀಶ್ ವರ್ಷದ ಹಿಂದೆ 'ಲಂಡನ್ ಗೌಡ' ಚಿತ್ರದ ಸ್ಕ್ರಿಪ್ಟ್ ಮಾಡಿದ್ದರು. ಅದನ್ನು ತನ್ನ ಹತ್ತಿರದ ಒಡನಾಡಿಗಳ ಬಳಿಯೂ ಹೇಳಿಕೊಂಡಿದ್ದರು. ಅದ್ಯಾಕೋ, ಕೊನೆಗೆ ಅದು ಮುರಿದುಬಿತ್ತು. ನಿರ್ದೇಶಕರಾಗುವ ಯತೀಶ್ ಕನಸು ಚಿವುಟಿ ಹೋಯಿತು. ಕೊನೆಗೆ ಅದೇ ಕತೆಗೆ ಉಪ್ಪಿ ಸುಣ್ಣ ಬಣ್ಣ ಬಳಿದಿದ್ದಾರೆ ಅನ್ನೋದು ಇವತ್ತು ಯತೀಶ್ ಮಾಡುತ್ತಿರುವ ಆರೋಪ.

ಅಸಲಿಗೆ 'ಸೂಪರ್' ಕತೆಯ ಅಸಲಿ 'ಸೂಪರ್'ವೈಸರ್ ಯಾರು? ಎಂಬುದು ಸಾಬೀತಾಗುವ ಹೊತ್ತಿಗೆ 'ಸೂಪರ್' ಥಿಯೇಟರುಗಳಿಂದ ಕಾಲು ಕೀಳಲು ಆರಂಭವಾಗಿದೆ. 'ಕದ್ದಿದ್ದೋ, ಕೆರೆದಿದ್ದೋ, ಗಿಮಿಕ್ಕು ಮಾಡಿ ಲಾಭ ಮಾಡೋದು ಹೀಗೆ...' ಎಂದು 'ಬುದ್ಧಿವಂತ' ಉಪೇಂದ್ರ ವಿಕಟನಗೆ ಬೀರುತ್ತಿದ್ದಾರೆ! •

Regd.No.KA/RNP/BGS/2036/2008-10 Posted at ; GPO, Bangalore-01. R B P LANKESH, Kannada Weekly Price Rs. 12/- 26-1-2011 RNI No. KARKAN2005/14648

ಕಾಸು ಕೀಳುವ 'ಕಿರಾತಕ'!



ನೋಡಲು ಮುದ್ದು ಮುದ್ದಾಗಿರುವ, ನಟನೆಯಲ್ಲೂ ಗಮನ ಸೆಳೆದಿರುವ 'ಮೊಗ್ಗಿನ ಮನಸು'ನ ಹುಡುಗ ಯಶ್ ವಿರುದ್ಧ ಮೇಲಿಂದ ಮೇಲೆ ಆಪಾದನೆಗಳು ಕೇಳಿಬರುತ್ತಿವೆ. ಹೀರೋ ಆಗಿ ಈಗಷ್ಟೇ ಪಿಳಿಪಿಳಿ ಅಂತಾ ಕಣ್ಣು ಬಿಡುತ್ತಿರುವ ಈ ಹುಡುಗ ಅದ್ಯಾಕೋ ಏನೋ ಸಿಕ್ಕಾಪಟ್ಟೆ ನಖರಾ ಮಾಡುತ್ತಾನಂತೆ... ಹೀರೋಯಿನ್ ಸೆಲೆಕ್ಷನ್‌ನಿಂದ ಹಿಡಿದು ಸಿನಿಮಾ ಮುಗಿಯೋತನ ಈತನದ್ದು ಕಿರಿಕಿರಿ... 'ದೊಡ್ಡೋರು ಚಿಕ್ಕೋರು ಅನ್ನದೇ ಕಾಲು ಮೇಲೆ ಕಾಲು ಹಾಕಿ ಅಲ್ಲಾಡಿಸಿಕೊಂಡು ಧಿಮಾಕು ಮಾಡ್ತಾನೆ' ಅನ್ನೋದು ಸೀನಿಯರ್‌ಗಳ ಆರೋಪ.

ಈಗಾಗಲೇ ನಾಲ್ಕೈದು ಸಿನಿಮಾಗಳಲ್ಲಿ ಪೂರ್ಣಪ್ರಮಾಣದ ಹೀರೋ ಆಗಿರುವ ಯಶ್ ಜನರ ಗಮನವನ್ನು ಸೆಳೆದಿದ್ದಾನೆ ನಿಜ. ಆದರೆ ಆತ ನಟಿಸಿರುವ ಯಾವ ಸಿನಿಮಾ ಕೂಡಾ ಕಾಸು ಮಾಡಿಲ್ಲ; ನಿರ್ಮಾಪಕನ ಜೇಬು ತುಂಬಿಸಿಲ್ಲ.

ಇಂಥ ಯಶ್‌ನ ಸಂಭಾವನೆಗೆ ಸಂಬಂಧಪಟ್ಟಂತೆ ಸಣ್ಣದೊಂದು ಕದನ ನಡೆದು ಈಗ ತಣ್ಣಗಾಗಿದೆ.

"ಅಪ್ಪಾ ಮಹಾತ್ಮ.. ನಿನ್ ಪಿಕ್ಚರ್ 'ಮೊದಲಾ ಸಲ' ನೋಡೋಕೆ ಕಪಾಲಿ ಥಿಯೇಟರ್‌ನಲ್ಲಿ ನೂರೈವತ್ತು ಜನಾ ಇಲ್ಲಾ.. ನಲವತ್ ಲಕ್ಷಾ ಕೇಳ್ತೀಯಾ? ಐದ್ ಲಕ್ಷಾ ಕೊಡ್ತಾರೆ ಸುಮ್ನೆ ಈಸ್ಕೊಂಡ್ ಪಿಕ್ಚರ್ ಮಾಡ್ಕೊಡು!" – ಹೀಗಂತ ಮೊನ್ನೆ ಯಶ್‌ಗೆ ಹೇಳಿ ಫೋನ್ ಕುಕ್ಕಿದ್ದು ನಿರ್ಮಾಪಕ ಶೈಲೇಂದ್ರ ಬಾಬು ಅವರ ಸಹೋದರ ಮಧುಸೂದನ್ ರೆಡ್ಡಿ. ಅವರು ಹೀಗೆ ಸಿಟ್ಟಿನಿಂದ ಯಶ್‌ನನ್ನು ದಬಾಯಿಸಲು ಕಾರಣವಿತ್ತು.

ಅಲ್ಲ, ಈ ಮಧುಸೂದನ್ ರೆಡ್ಡಿಗೂ ಯಶ್‌ಗೂ ಏನು ಸಂಬಂಧ ಎಂಬ ಪ್ರಶ್ನೆ ನಿಮ್ಮನ್ನು ಕಾಡುತ್ತಿರಬಹುದು. ಉತ್ತರ ಇಲ್ಲಿದೆ ನೋಡಿ...

ಒಂದು ತಿಂಗಳ ಹಿಂದೆ ಒಬ್ಬ ರಿಯಲ್ ಎಸ್ಟೇಟ್ ವ್ಯಾಪಾರಿ ಮತ್ತು ಸಿನಿಮಾ ನಿರ್ಮಾಪಕರ ಮುಂದೆ ಯಶ್ ಚಿತ್ರರಂಗದಲ್ಲಿ ತನಗಿರುವ ಹೀರೋ ವ್ಯಾಲ್ಯೂ ಬಗ್ಗೆ ಕೇಜಿಗಟ್ಟಲೇ ಕೊಚ್ಚಿಕೊಂಡಿದ್ದ. ಒಂದು ಚಿತ್ರಕ್ಕೆ ತಾನು ನಲವತ್ತು ಲಕ್ಷ ಸಂಭಾವನೆ ಪಡೆಯುತ್ತೇನೆ ಎಂದು ಅವರನ್ನು ಎಂಜಿ ರಸ್ತೆಯಲ್ಲೇ ರೈಲು ಹತ್ತಿಸಿದ್ದ. ಪಾಪ, ಆ ನಿರ್ಮಾಪಕ ಯಶ್ ಹೇಳಿದ್ದನ್ನೆಲ್ಲ ನಂಬಿ ಯಶ್ ಜೊತೆ ಒಂದು ಅಗ್ರಿಮೆಂಟ್ ಕೂಡ ಮಾಡಿಕೊಂಡ. ಆದರೆ ಮೊನ್ನೆ ಬಿಡುಗಡೆಯಾದ, ಯಶ್ ನಟಿಸಿರುವ 'ಮೊದಲಾ ಸಲ' ಸಿನಿಮಾದ ಮೊದಲನೇ ದಿನದ ರಿಪೋರ್ಟ್ ನೋಡಿ ಆತ ದಂಗಾಗಿಹೋದ. ಈಗ ತಾನೇನು ಮಾಡಬೇಕು ಎಂದು ಗೊತ್ತಾಗದೇ ತಲೆ ತಲೆ ಚಚ್ಚಿಕೊಂಡ. ಕೊನೆಗೆ ಸೀದಾ ನಿರ್ಮಾಪಕರ ಸಂಘಕ್ಕೆ ಹೋಗಿ ಅಲ್ಲಿ ಯಶ್ ವಿರುದ್ಧ ದೂರೊಂದನ್ನು ನೀಡಿದ. ವಿಷಯ ಗೊತ್ತಾದಾಗ ಸಂಘದ ಚಿಕ್ಕಣ್ಣ ದೊಡ್ಡಣ್ಣಂದಿರು ಯಶ್‌ನನ್ನು ಕರೆಸಿ, ನಲವತ್ತನ್ನು ಐದು ಲಕ್ಷಕ್ಕಿಳಿಸುವ ಪ್ರಯತ್ನ ಮಾಡಿದರು. ಆದರೆ ಅದಕ್ಕೆಲ್ಲ ಒಪ್ಪದ ಯಶ್ "ಲಾಸ್ಟ್ ಇಪ್ಪತ್ತು ಕೊಟ್ರೆ ಮಾಡ್ತೀನಿ..." ಎಂದು ಹಟ ಹಿಡಿದ. ಕೊನೆಗೆ ಅಷ್ಟಕ್ಕೇ ಮತ್ತೊಂದು ಅಗ್ರಿಮೆಂಟ್ ಮಾಡಿಸಿ ಅವರಿಬ್ಬರನ್ನು ಸಂಘದವರು ಕಳುಹಿಸಿದರಂತೆ!

ಅದೇನೇ ಇದ್ದರೂ ಯಶ್‌ಗೆ ಇಷ್ಟು ಚಿಕ್ಕ ವಯಸ್ಸಲ್ಲೇ ಅಷ್ಟು ದೊಡ್ಡ ಮೊತ್ತದ ಹಣ ಕೇ-ಕೀಳುವ ಬುದ್ಧಿ ಯಾಕಾದ್ರೂ ಬಂತೋಪ್ಪಾ?! ಇನ್ನು ಮುಂದೆ ಬಿಡುಗಡೆಯಾಗಲಿರುವ ಈತನ 'ರಾಜಧಾನಿ' ಮತ್ತು 'ಕಿರಾತಕ' ಎಂಬ ಚಿತ್ರಗಳು ಹಿಟ್ ಆಗಿಬಿಟ್ಟರೆ, ಆ 'ಯಶ'ಸ್ಸಿನ ಸೈಡ್ ಎಫೆಕ್ಟ್ ಇನ್ನೆಷ್ಟು ಲಕ್ಷಗಳಾಗುತ್ತವೋ?

• ಅರುಣ್

ಜಂಗ್ಲಿ ಜೋಡಿಯ ಜಗಳಸಂಧ



ಕನ್ನಡ ಚಿತ್ರರಂಗದ ನಂಬರ್ 1 ನಟಿ ಸ್ಥಾನಕ್ಕೆ ಲಗ್ಗೆ ಹಾಕಲು ರಮ್ಯಾ ಮತ್ತು ಅಂದ್ರಿತಾ ರೇ ನಡುವೆ ಬಹಳಷ್ಟು ಸಮಯದಿಂದ ಪೈಪೋಟಿ ನಡೆಯುತ್ತಿದೆ. ತೆರೆಮರೆಯಲ್ಲಿ ನಡೆಯುತ್ತಿರುವ ಇವರಿಬ್ಬರ ನಡುವಿನ ಕೋಳಿ ಜಗಳದ ಸೈಡ್ ಎಫೆಕ್ಟ್ ಎಂಬಂತೆ ಇವರ ನಡುವೆ ನಟ ದುನಿಯಾ ವಿಜಯ್ ಸಿಕ್ಕಿಹಾಕಿಕೊಂಡಿದ್ದಾರೆ!

ಹೊಸ ಸುದ್ದಿ ಯಾವುದೆಂದರೆ ಶಶಾಂಕ್ ನಿರ್ದೇಶಿಸಲಿರುವ, ವಿಜಯ್ ನಾಯಕನಾಗಿ ನಟಿಸಲಿರುವ 'ಜರಾಸಂಧ' ಚಿತ್ರದಿಂದ ನಾಯಕಿ ಅಂದ್ರಿತಾ ರೇಗೆ ಗೇಟ್‌ಪಾಸ್ ಸಿಕ್ಕಿದೆ. ಅಂದ್ರಿತಾ ಪ್ರಕಾರ ತನ್ನನ್ನು ಈ ಚಿತ್ರದಿಂದ ಕೈಬಿಡಲು ತನ್ನ ಪ್ರತಿಸ್ಪರ್ಧಿ ರಮ್ಯಾ ನಿರ್ದೇಶಕ ಮತ್ತು ನಾಯಕ ನಟನ ಮೇಲೆ ಭಾರೀ ಒತ್ತಡ ಹೇರಿದ್ದೇ ಕಾರಣ.

ಈ ಹಿಂದೆ ವಿಜಯ್ ಮತ್ತು ಅಂದ್ರಿತಾ ನಟಿಸಿದ್ದ 'ಜಂಗ್ಲಿ' ಚಿತ್ರ ಬಾಕ್ಸಾಫೀಸ್‌ನಲ್ಲಿ ಹಣವನ್ನು ಕೊಳ್ಳೆ ಹೊಡೆದಿತ್ತು. ಈಗ ಇದೇ ಜೋಡಿ 'ಜರಾಸಂಧ' ಚಿತ್ರದಲ್ಲೂ ಮತ್ತೆ ಒಟ್ಟಾಗಿ ನಟಿಸುತ್ತಿದ್ದರಿಂದ ಹಂಚಿಕೆದಾರರೆಲ್ಲ ಇದರ ಬಗ್ಗೆ ಕುತೂಹಲ ತೋರಿಸಿದ್ದರು. ಆದರೆ ಇದೆಲ್ಲದರ ಮಧ್ಯ "'ಜಂಗ್ಲಿ' ಚಿತ್ರ ಹಿಟ್ ಆಗಿದ್ದು ನನ್ನ ಗ್ಲಾಮರ್‌ನಿಂದಾಗಿ". ಎಂದು ಅಂದ್ರಿತಾ ಹೇಳಿಕೊಂಡಿದ್ದರಿಂದ ಆಕೆ ಮತ್ತು ವಿಜಯ್ ನಡುವೆ ಬಿರುಕು ಕಾಣಿಸಿಕೊಂಡಿತ್ತು.

ಇದೆಲ್ಲ ಹುಟ್ಟಿಕೊಂಡಿದ್ದು 'ಜಾನಿ ಮೇರಾ ನಾಮ್' ಚಿತ್ರದ ಸೆಟ್‌ನಲ್ಲಿ ಎಂಬುದು ಅಂದ್ರಿತಾ ಅಂಬೋಣ. 'ಜಾನಿ ಮೇರಾ ನಾಮ್' ಚಿತ್ರದಲ್ಲಿ ವಿಜಯ್ ಮತ್ತು ರಮ್ಯಾ ಜೊತೆಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಅಂದರೆ ಈಗ ವಿಜಯ್ ಪರೋಕ್ಷವಾಗಿ ಈ ವಿವಾದದ ಕೇಂದ್ರಬಿಂದುವಾಗಿದ್ದಾರೆ.



ಕೆಲವು ತಿಂಗಳುಗಳ ಹಿಂದೆ ಅಮೆರಿಕದಲ್ಲಿ 'ಅಕ್ಕ' ಸಮ್ಮೇಳನ ನಡೆದಾಗಲೂ ಈ ಇಬ್ಬರು ಹುಡುಗಿಯರ ನಡುವೆ ದೊಡ್ಡ ಗಲಾಟೆಯೇ ನಡೆದಿತ್ತು. ಆ ಸಮ್ಮೇಳನದಲ್ಲಿ ಅಂದ್ರಿತಾ ರೇಗೆ ವ್ಯವಸ್ಥಾಪಕರು ಪ್ರಶಸ್ತಿ ಘೋಷಿಸಿದ್ದರು. ಜೊತೆಗೆ ಅಲ್ಲಿಯ ಸಮಾರಂಭದಲ್ಲಿ ಆಕೆ ಒಂದು ನೃತ್ಯ ಕಾರ್ಯಕ್ರಮ ನೀಡುವುದೆಂದೂ ಫಿಕ್ಸ್ ಆಗಿತ್ತು. ಆದರೆ ಆ ಪ್ರಶಸ್ತಿ ಮತ್ತು ನೃತ್ಯ ಕಾರ್ಯಕ್ರಮಗಳನ್ನು ತಪ್ಪಿಸಲು ರಮ್ಯಾ ವ್ಯವಸ್ಥಾಪಕರ ಮೇಲೆ ಒತ್ತಡ ಹೇರಿದ್ದಳು ಎಂದು ಅಂದ್ರಿತಾ ರೇ ಆರೋಪಿಸಿದ್ದಳು.



ಅಂದ್ರಿತಾಳ ಈ ಆರೋಪಗಳಿಗೆ ಕ್ಯಾರೇ ಅನ್ನದ ರಮ್ಯಾ ಮಾತ್ರ ಇದೆಲ್ಲಾ ಅಪ್ಪಟ ಸುಳ್ಳು ಎಂದಷ್ಟೇ ಹೇಳುತ್ತಿದ್ದಾಳೆ. ಹೀಗೆ ರಮ್ಯಾ ಮತ್ತು ಅಂದ್ರಿತಾ ರೇ ಅನಗತ್ಯವಾಗಿ ಜಗಳ ಕಾಯುತ್ತಿದ್ದರೆ ಅವರ ನಡುವಿನ ಭಿನ್ನಾಭಿಪ್ರಾಯಗಳನ್ನು ಬಗೆಹರಿಸುವ ಬದಲಾಗಿ ಉದ್ಯಮದವರು ಅದರಿಂದ ಮಜ ಪಡೆಯುತ್ತಿದ್ದಾರೆ. ಅವರಲ್ಲೇ ಹಲವರು 'ರಮ್ಯಾಳೇ ನಂ. ಒನ್' ಎನ್ನುತ್ತಿದ್ದರೆ, ಇನ್ನೂ ಹಲವರು ಅದನ್ನು ಸಾರಾಸಗಟಾಗಿ ತಿರಸ್ಕರಿಸಿ 'ಹೊಸ ಹುಡುಗಿ ಅಂದ್ರಿತಾ ರೇ ಬಾಕ್ಸಾಫೀಸ್ ಫೇವರಿಟ್' ಎನ್ನುತ್ತಿದ್ದಾರೆ.

ಈ ಹಿಂದೆ ರಕ್ಷಿತಾ ಮತ್ತು ರಮ್ಯಾ ನಡುವೆ ಕೂಡ ಇಂತಹದ್ದೇ ಪೈಪೋಟಿ ನಡೆದಿತ್ತು. ಆಗಲೂ ಉದ್ಯಮದವರು ಅದರಿಂದ ಮಜಾ ಪಡೆದಿದ್ದರು. ಕೊನೆಗೊಂದು ದಿನ ಆ ಹುಡುಗಿಯರಿಗೇ ತಮ್ಮ ಅನವಶ್ಯಕ ಜಗಳದಿಂದ ಸುಸ್ತಾಗಿ ಅವರಿಬ್ಬರೂ ಪರಸ್ಪರ ಕೈಕುಲುಕಿ ರಾಜಿ ಮಾಡಿಕೊಂಡಿದ್ದರು.

ಆದರೆ ಸದ್ಯದ ಪರಿಸ್ಥಿತಿ ನೋಡಿದರೆ ರಮ್ಯಾ ಮತ್ತು ಅಂದ್ರಿತಾ ಕೈಕುಲುಕುವ ಬದಲು ಕೈಕೈ ಮಿಲಾಯಿಸುವ ಸಾಧ್ಯತೆಗಳು ಹೆಚ್ಚು ಕಾಣಿಸುತ್ತಿವೆ. ಹಾಗಾಗದಿರಲಿ....

ಮಸ್ತ್ ಕಲೆಕ್ಷನ್ ಮೈಲಾರಿ!



ಶಿವರಾಜ್‌ಕುಮಾರ್ ನಟಿಸಿರುವ 'ಮೈಲಾರಿ' ಮತ್ತು ಹೊಸ ನಾಯಕ ಯಶ್ ನಟಿಸಿರುವ 'ಮೊದಲಾ ಸಲ' ಸಿನಿಮಾಗಳು ದಿನದಿಂದ ದಿನಕ್ಕೆ ಬಾಕ್ಸಾಫೀಸ್‌ನಲ್ಲಿ ಚೇತರಿಸಿಕೊಳ್ಳುತ್ತಿವೆ.

ಇಲ್ಲಿ ವಿಶೇಷತೆಯೇನೆಂದರೆ ಶಿವರಾಜ್‌ಕುಮಾರ್ ಹಳೆಯ ನಟನೆನಿಸಿಕೊಂಡರೂ ಅವರ ಚಿತ್ರಗಳು ಇತ್ತೀಚೆಗೆ ಬಾಕ್ಸಾಫೀಸ್‌ನಲ್ಲಿ ಹಣ ಮಾಡಿದ್ದು ಬಹಳ ಅಪರೂಪ. ಈ ಹಿನ್ನೆಲೆಯಲ್ಲಿ 'ಮೈಲಾರಿ' ಚಿತ್ರ ಶಿವಣ್ಣನನ್ನು ಸೋಲಿನ ಸರಪಳಿಯಿಂದ ಬಿಡುಗಡೆ ಮಾಡಿದೆ. ಸದ್ಯದಲ್ಲೇ ನೂರನೆ ಚಿತ್ರದಲ್ಲಿ ಕಾಣಿಸಿಕೊಳ್ಳುವ ಸಂಭ್ರಮದಲ್ಲಿರುವ ಶಿವಣ್ಣನ ಪಾಲಿಗೆ ಇದು ನಿಜಕ್ಕೂ ಒಂದು ಒಳ್ಳೆಯ ಬ್ರೇಕ್ ಎಂದೇ ಹೇಳಬಹುದು. ಈ ಚಿತ್ರದ ಹಂಚಿಕೆದಾರ ಪಾಷಾ ಅವರ ಪ್ರಕಾರ ಈಗಾಗಲೇ ಮೂರು ವಾರದಲ್ಲಿ ಚಿತ್ರದ ಗಳಿಕೆ ಐದುಕೋಟಿ ದಾಟಿದೆಯಂತೆ.



'ಯುವರಾಜ' ಚಿತ್ರದ ಮುಖಾಂತರ ಕನ್ನಡ ಚಿತ್ರರಂಗಕ್ಕೆ ನಿರ್ಮಾಪಕರಾಗಿ ಪಾದಾರ್ಪಣೆ ಮಾಡಿದ ಕನಕಪುರ ಶ್ರೀನಿವಾಸ್ ಮತ್ತು ಶ್ರೀಕಾಂತ್ ಕೂಡಾ 'ಮೈಲಾರಿ'ಯ ಯಶಸ್ಸಿನಿಂದ ಹರ್ಷಗೊಂಡಿದ್ದಾರೆ. ಸಾಮಾನ್ಯವಾಗಿ ಶಿವರಾಜ್‌ಕುಮಾರ್ ಅವರ ಚಿತ್ರವನ್ನೇ ನಿರ್ಮಿಸುತ್ತಿರುವ ಈ ಜೋಡಿಯ ಹತ್ತನೇ ಚಿತ್ರ 'ಮೈಲಾರಿ'. "ನಮ್ಮ ನಿರ್ಮಾಣದ ಹತ್ತು ಚಿತ್ರಗಳಲ್ಲಿ ನಾವು ಗೆದ್ದಿದ್ದು ಈ ಚಿತ್ರದಲ್ಲೇ" ಎನ್ನುತ್ತಾರೆ ನಿರ್ಮಾಪಕ ಶ್ರೀಕಾಂತ್. ತಾಜ್ ಮಹಲ್ ಚಿತ್ರದಿಂದ ನಿರ್ದೇಶಕರಾದ ಆರ್. ಚಂದ್ರುಗೆ ತಮ್ಮ ಮೂರನೇ ಚಿತ್ರ 'ಮೈಲಾರಿ'ಯ ಯಶಸ್ಸು ದೊಡ್ಡ ಹುಮ್ಮಸ್ಸು ನೀಡಿದೆ. ಮಾತ್ರವಲ್ಲ ಚಂದ್ರು ಈಗ ಸ್ಟಾರ್ ನಿರ್ದೇಶಕರ ಪಟ್ಟಿಗೆ ಸೇರಿಕೊಂಡಿದ್ದಾರೆ. ಅಂತೂ ಒಂದು ಚಿತ್ರದ ಗೆಲುವು ಗಾಂಧಿನಗರದಲ್ಲಿ ಹತ್ತಾರು ಜನರ ಮುಖದಲ್ಲಿ ಮಂದಹಾಸ ಸೃಷ್ಟಿಸಿದೆ.



ಹೊಸ ನಟ ಯಶ್ ನಟಿಸಿರುವ 'ಮೊದಲಾ ಸಲ' ಚಿತ್ರದ ಕಥೆ ಇದಕ್ಕಿಂತ ಭಿನ್ನವಾಗಿದೆ. ಪುರುಷೋತ್ತಮ್ ಎಂಬ ನಿರ್ದೇಶಕನ ಚೊಚ್ಚಲ ಚಿತ್ರವಿದು. ಈ ಚಿತ್ರ ಬಿಡುಗಡೆಯಾದ ಮೊದಲ ಮೂರ್ನಾಲ್ಕು ದಿನ ಥಿಯೇಟರ್‌ನಲ್ಲಿ ಜನರೇ ಇರಲಿಲ್ಲ. ಆದರೆ ಈಗ ಚಿತ್ರ ನಿಧಾನವಾಗಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಲಾರಂಭಿಸಿದೆ. ಕಪಾಲಿಯಂತಹ ದೊಡ್ಡ ಥಿಯೇಟರ್ ಕೂಡಾ ಈಗ ಹೊಸ ನಾಯಕನಟನ ಚಿತ್ರಕ್ಕಾಗಿ ಹೌಸ್‌ಫುಲ್ ಪ್ರದರ್ಶನ ಕಾಣುತ್ತಿರುವುದು ಆಶ್ಚರ್ಯಕರವಾಗಿದೆ. ಹೊಸ ಯುವಕರ ಇಂತಹ ಚಿತ್ರಗಳು ಜನ ಮೆಚ್ಚುಗೆಗೆ ಪಾತ್ರವಾಗುತ್ತಿರುವುದು ನಿಜಕ್ಕೂ ಆಶಾದಾಯಕ. ಈ ಚಿತ್ರದ ಮುಖಾಂತರ ಮೊತ್ತಮೊದಲ ಬಾರಿಗೆ ನಿರ್ಮಾಪಕ ಆಗಿರುವ ಮಲ್ಲಿಕಾರ್ಜುನ್ ಖಂಡಿತವಾಗಿಯೂ ಲಾಭ ಮಾಡಲಿದ್ದಾರೆ.

ಇತ್ತೀಚೆಗೆ ಗಾಂಧಿನಗರದ ನಿರ್ಮಾಪಕರು ಮನೆಮಠಗಳನ್ನು ಕಳೆದುಕೊಳ್ಳುತ್ತಿರುವ ಸುದ್ದಿಗಳೇ ಬರುತ್ತಿರುವ ಸಂದರ್ಭದಲ್ಲಿ ಈ ಚಿತ್ರಗಳ ನಿರ್ಮಾಪಕರಿಗೆ 'ಲಕ್ಷ್ಮಿ' ಒಲಿದಿರುವುದು ಸಂತೋಷದ ಸುದ್ದಿ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com, Printed at Raiba...